27 November 2025 Thursday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಋಣ ಇಲ್ಲದಿದ್ದರೆ ಕೈಯಿಂದ ತುತ್ತು ಜಾರಿ
ನೆಲಕ್ಕೆ ಬೀಳುತ್ತದೆ!
ಹೀಗಾಗಿ ಪ್ರತಿಯೊಂದಕ್ಕೂ ಋಣ
ಎನ್ನುವುದು ತುಂಬಾ ಮುಖ್ಯ!
ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಕೊಟ್ಟದ್ದನ್ನು
ನೆನೆಯದೆ ಮತ್ತು
ಪಡೆದದ್ದನ್ನು ಮರೆಯದೆ
ಇರುವವರೇ ಜಗತ್ತಿನಲ್ಲಿ
ಧನ್ಯರು.
ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 41 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಮುರುಘಾ ಶ್ರೀಗೆ ಬಿಗ್ ರಿಲೀಫ್

## ಪೋಕ್ಸೋ ಪ್ರಕರಣದಲ್ಲಿ ಖುಲಾಸೆ । ಚಿತ್ರದುರ್ಗ ಜಿಲ್ಲಾ ನ್ಯಾಯಾಲಯ ತೀರ್ಪು

**ಚಿತ್ರದುರ್ಗ:** ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಚಿತ್ರದುರ್ಗದ ಮುರುಘಾ ಮಠದ ಡಾ.ಶಿವಮೂರ್ತಿ ಶರಣರಿಗೆ ಚಿತ್ರದುರ್ಗ ಜಿಲ್ಲಾ ನ್ಯಾಯಾಲಯ ಬಿಗ್ ರಿಲೀಫ್ ನೀಡಿದೆ. ಪೋಕ್ಸೋ ಪ್ರಕರಣದಲ್ಲಿ ಶ್ರೀಗಳು ಹಾಗೂ ಇತರ ಆರೋಪಿಗಳನ್ನು ಖುಲಾಸೆಗೊಳಿಸಿ ಕೋರ್ಟ್ ಬುಧವಾರ ತೀರ್ಪು ನೀಡಿದೆ.

ಪ್ರಕರಣದ ವಿಚಾರಣೆ ನಡೆಸಿದ ಚಿತ್ರದುರ್ಗದ 2ನೇ ಹೆಚ್ಚುವರಿ ಸೆಷನ್ಸ್ ಕೋರ್ಟ್ನ ನ್ಯಾ.ಗಂಗಾಧರಪ್ಪ ಚನ್ನಬಸಪ್ಪ ಹಡಪದ್ ಅವರಿದ್ದ ಪೀಠ ಮೊದಲ ಪೋಕ್ಸೋ ಪ್ರಕರಣದಲ್ಲಿ ಮುರುಘಾ ಶರಣರು ನಿರ್ದೋಷಿ ಎಂದು ತೀರ್ಪು ನೀಡಿದ್ದಾರೆ. ಪ್ರಕರಣದ ಎರಡನೇ ಆರೋಪಿ ರಶ್ಮಿ ಹಾಗೂ ನಾಲ್ಕನೇ ಆರೋಪಿ ಪರಮಶಿವಯ್ಯ ಅವರನ್ನು ಕೂಡ ನಿರ್ದೋಷಿ ಎಂದು ಕೋರ್ಟ್ ತೀರ್ಪು ನೀಡಿದೆ. ಮುರುಘಾಶ್ರೀ ಪರವಾಗಿ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿದ್ದರು.

ಇಬ್ಬರು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ 2022 ಆಗಸ್ಟ್ 31ರಂದು ಮುರುಘಾ ಶ್ರೀಗಳ ವಿರುದ್ಧ ಮೈಸೂರಿನ ನಜರಾಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸೆಪ್ಟೆಂಬರ್ 1ರಂದು ಶ್ರೀಗಳ ಬಂಧನವಾಗಿತ್ತು. ಸುಮಾರು 14 ತಿಂಗಳ ಕಾಲ ಜೈಲಿನಲ್ಲಿದ್ದ ಶ್ರೀಗಳು 2023 ನವೆಂಬರ್ 16ರಂದು ಷರತ್ತು ಬದ್ಧ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದರು.

### ಪ್ರಕರಣದ ಹಿನ್ನೆಲೆ ಏನು?



**ಚಿತ್ರದುರ್ಗದ ಮುರುಘಾ ಶರಣರ ವಿರುದ್ಧ 2022ರ ಆ.26ರಂದು ಮೈಸೂರಿನ ನಜರಾಬಾದ್ ಠಾಣೆಯಲ್ಲಿ ಪೋಕ್ಸೊ ಕೇಸ್ ದಾಖಲಾಗಿತ್ತು. ಮುರುಘಾ ಮಠದ ಹಾಸ್ಟೆಲ್‌ನ ಇಬ್ಬರು ಅಪ್ರಾಪ್ತ ವಿದ್ಯಾರ್ಥಿನಿಯರಿಂದ ಕೇಸ್ ದಾಖಲಾಗಿತ್ತು. ಈ ಪ್ರಕರಣದಲ್ಲಿ ಎ1 ಮುರುಘಾಶ್ರೀ, ಎ2 ವಾರ್ಡನ್ ರಶ್ಮಿ, ಎ3 ಬಸವಾದಿತ್ಯ, ಎ4 ಮ್ಯಾನೇಜರ್ ಪರಮಶಿವಯ್ಯ, ಎ5 ವಕೀಲ ಗಂಗಾಧರಯ್ಯ ವಿರುದ್ಧ ದೂರು ದಾಖಲಾಗಿತ್ತು. ಬಳಿಕ ಮೈಸೂರಿನ ನಜರಾಬಾದ್ ಠಾಣೆಯಲ್ಲಿ ಮುರುಘಾಶ್ರೀ ವಿರುದ್ಧ 2022ರ ಅ.13ರಂದು ಮಠದ ಅಡುಗೆ ಸಹಾಯಕಿಯಿಂದ ಮತ್ತೊಂದು ದೂರು ದಾಖಲಾಗಿತ್ತು. ಆ ಕೇಸಲ್ಲಿ ತನ್ನಿಬ್ಬರು ಅಪ್ರಾಪ್ತ ಹೆಣ್ಣು ಮಕ್ಕಳ ಮೇಲೆಯೂ ಲೈಂಗಿಕ ಕಿರುಕುಳ ನೀಡಿರುವುದಾಗಿ ದೂರು ನೀಡಿದ್ದರು.
ಈ ಪ್ರಕರಣದಲ್ಲಿ ಎ1 ಮುರುಘಾಶ್ರೀ, ಎ2 ವಾರ್ಡನ್ ರಶ್ಮಿ, ಎ3 ಬಸವಾದಿತ್ಯ, ಎ4 ಪರಮಶಿವಯ್ಯ, ಎ5 ವಕೀಲ ಗಂಗಾಧರಯ್ಯ, ಎ6 ಮುರುಘಾಶ್ರೀ ಸಹಾಯಕ ಮಹಾಲಿಂಗ, ಎ7 ಅಡುಗೆಭಟ್ಟ ಕರಿಬಸಪ್ಪ ವಿರುದ್ಧ ಕೇಸ್ ದಾಖಲಾಗಿದೆ. ಸಂಪೂರ್ಣ ತನಿಖೆ ನಡೆಸಿದ ಚಿತ್ರದುರ್ಗ ಗ್ರಾಮಾಂತರ ಪೊಲೀಸರು ಹಾಗೂ ಚಿತ್ರದುರ್ಗ ಡಿವೈಎಸ್ಪಿ ಅನಿಲ್ ಕುಮಾರ್ ನೇತೃತ್ವದ ತಂಡ 2022ರ ಅ.27 ರಂದು 694 ಪುಟಗಳ ಚಾರ್ಜ್ ಶೀಟ್ ಸಲ್ಲಿಸಿತ್ತು. ಅದರಲ್ಲಿ 347 ಪುಟಗಳ ಎ ಮತ್ತು ಬಿ ಎಂದು ಎರಡು ಸೆಟ್ ಚಾರ್ಜ್ ಶೀಟ್ ಸಲ್ಲಿಸಿದ್ದರು. 2023ರ ಜ.10ಕ್ಕೆ ದಾಖಲಾದ 2ನೇ ಪೋಕ್ಸೊ ಪ್ರಕರಣದಲ್ಲಿ ಚಿತ್ರದುರ್ಗ ಗ್ರಾಮಾಂತರ ಠಾಣೆ ಪೊಲೀಸರು 761 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿದ್ದರು. ಇಷ್ಟೆಲ್ಲ ಸಾಕ್ಷ್ಯಾಧಾರ ಹಾಗೂ ಚಾರ್ಜ್ ಶೀಟ್ ಮೇಲೆ ಚಿತ್ರದುರ್ಗ ನ್ಯಾಯಾಲಯ ವಿಚಾರಣೆ ನಡೆಸಿತ್ತು. ವಿಚಾರಣೆ ನಡೆಯುವಾಗಲೇ 2023ರ ನ.8ರಂದು ಹೈಕೋರ್ಟ್ ನಿಂದ ಮುರುಘಾಶ್ರೀಗೆ ಷರತ್ತುಬದ್ಧ ಜಾಮೀನು ಮಂಜೂರಾಗಿತ್ತು. ನ.16ರಿಂದು ಜಿಲ್ಲಾ ಕಾರಾಗೃಹದಿಂದ ಮುರುಘಾಶ್ರೀ ಬಿಡುಗಡೆಯಾಗಿದ್ದರು. 2ನೇ ಪೋಕ್ಸೋ ಕೇಸಿನಲ್ಲಿ ಜಾಮೀನು ಪಡೆಯದ ಹಿನ್ನೆಲೆಯಲ್ಲಿ ಚಿತ್ರದುರ್ಗ 2ನೇ ಅಪರ ಜಿಲ್ಲಾ ಮತ್ತು ಸೆಷನ್ ನ್ಯಾಯಾಲಯ ಆದೇಶ ಹಿನ್ನೆಲೆ ಪುನಃ ನ.20ರಂದು ಮುರುಘಾಶ್ರೀ ಮತ್ತೆ ಬಂಧನಕ್ಕೊಳಗಾದರು. ಬಳಿಕ ಅವರನ್ನ ಕೋರ್ಟ್ ಮುಂದೆ ಹಾಜರುಪಡಿಸಿದ್ದರು. ಅದೇ ದಿನ ಹೈಕೋರ್ಟ್ ಸೂಚನೆ ಮೇರೆಗೆ ಬಿಡುಗಡೆ ಭಾಗ್ಯ ಸಿಕ್ಕಿತ್ತು. ಆಗ ಸಂತ್ರಸ್ತೆಯರು ಮುರುಘಾ ಶ್ರೀಗಳ ಜಾಮೀನು ರದ್ದತಿ ಕೋರಿ ಸುಪ್ರೀಂ ಕೋರ್ಟ್ ಮೊರೆ ಹೋದ ಹಿನ್ನೆಲೆಯಲ್ಲಿ ಮುಖ್ಯ ಸಾಕ್ಷಿ ವಿಚಾರಣೆ ಪೂರ್ಣ ಆಗುವವರೆಗೆ ಮುರುಘಾಶ್ರೀ**

ಪುಟ 2ಕ್ಕೆ

# ಡಿಕೆಶಿ–ಸತೀಶ್ ಜಾರಕಿಹೊಳಿ ಮಧ್ಯರಾತ್ರಿಯಲ್ಲಿ ಗೌಪ್ಯ ಸಭೆ!




**ಬೆಂಗಳೂರು:** ಮುಖ್ಯಮಂತ್ರಿ ಸ್ಥಾನದ ವಿವಾದ ಭುಗಿಲೆದ್ದಿರುವ ನಡುವೆಯೇ ಸಚಿವ ಸತೀಶ್ ಜಾರಕಿಹೊಳಿ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಸಭೆ ನಡೆಸಿರುವುದು ರಾಜ್ಯ ರಾಜಕೀಯದಲ್ಲಿ ಕುತೂಹಲ ಸೃಷ್ಟಿಸಿದೆ.

ನಗರದ ಖಾಸಗಿ ಹೋಟೆಲ್‌ನಲ್ಲಿ ನಿನ್ನೆ ಮಧ್ಯರಾತ್ರಿ ಡಿ.ಕೆ.ಶಿವಕುಮಾರ್ ಅವರು ಸತೀಶ್ ಜಾರಕಿಹೊಳಿ ಅವರೊಂದಿಗೆ ಒಂದು ಗಂಟೆ ಕಾಲ ಸಭೆ ಮಾಡಿ ಮಾತುಕತೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಇಬ್ಬರು ನಾಯಕರು ಪರಸ್ಪರ ಒಪ್ಪಂದಕ್ಕೆ ಬಂದಿದ್ದಾರೆ ಎನ್ನಲಾಗಿದೆ. ತಾವು ಸಿಎಂ ಆಗಲು ಸತೀಶ್ ಅವರಿಗೆ ಸಹಕರಿಸುವಂತೆ ಡಿಕೆಶಿ ಬೆಂಬಲ ಕೋರಿದ್ದಾರೆ. ಸಿದ್ದರಾಮಯ್ಯ ಬೆಂಬಲಿಗರಾದ ಸತೀಶ್ ಜಾರಕಿಹೊಳಿ ಅವರಿಗೆ ಸಚಿವ ಸ್ಥಾನದ ಜೊತೆಗೆ ಕೆಪಿಸಿಸಿ ಅಧ್ಯಕ್ಷ ಹುದ್ದೆಯನ್ನು ವಹಿಸಿಕೊಳ್ಳುವಂತೆ ಡಿಕೆಶಿ ಭರವಸೆ ನೀಡಿದ್ದಾರೆ ಎನ್ನಲಾಗಿದೆ.

ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಸಚಿವ ಸತೀಶ್ ಜಾರಕಿಹೊಳಿ ಅವರು, ನಿನ್ನೆ ರಾತ್ರಿ ಡಿ.ಕೆ.ಶಿವಕುಮಾರ್ ಜೊತೆ ಸಭೆ ನಡೆಸಿರುವ ಬಗ್ಗೆ ಖಚಿತಪಡಿಸಿದ್ದಾರೆ. ಆದರೆ ಸಭೆಯ ಮಾಹಿತಿಯನ್ನು ನೀಡಲಿಲ್ಲ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಲು ಶೀಘ್ರದಲ್ಲೇ ಸಮಯ

ಪುಟ 2ಕ್ಕೆ

# ಅಜ್ಜಯ್ಯನ ಮೊರೆಹೋದ ಡಿಕೆಶಿ



**ಬೆಂಗಳೂರು:** ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಯಾಗಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ದೇವರ ಮೊರೆ ಹೋಗಿದ್ದಾರೆ. ಡಿಕೆಶಿ ಅವರ ಅಪಾರ ನಂಬಿಕೆಯ ದೇವರಾದ ಹಂದನಕೆರೆ ಅಜ್ಜಯ್ಯನ ಗದ್ದುಗೆಯನ್ನು ಡಿಕೆಶಿ ಮನೆಗೆ ಆಗಮಿಸಿದೆ. ಸದಾಶಿವನಗರದ ನಿವಾಸಕ್ಕೆ ಅಜ್ಜಯ್ಯನ ಗದ್ದುಗೆ ಕರೆಸಿ ಕುಟುಂಬ ಸಮೇತರಾಗಿ ಪೂಜೆ ನೆರವೇರಿಸಿದ್ದಾರೆ.

ಎರಡು ದಿನಗಳ ಹಿಂದಷ್ಟೇ ಕಾಶಿಯಿಂದ ಬಂದಿದ್ದ ನಾಗಸಾಧುಗಳು ಡಿಕೆಶಿಗೆ ಆಶೀರ್ವಾದ ಮಾಡಿದ್ದರು. ಸದಾಶಿವನಗರದ ಅವರ ನಿವಾಸಕ್ಕೆ ಬಂದ ನಾಗಸಾಧುಗಳು ಡಿಕೆಶಿ ತಲೆ ಮೇಲೆ ಕೈ ಇಟ್ಟು ಸಿಎಂ ಆಗಲೆಂದು ಆಶೀರ್ವಾದ ಮಾಡಿದ್ದರು.

ಇದಕ್ಕೂ ಮುನ್ನಾ ದಿನ ಅರಸೀಕೆರೆ

ಪುಟ 2ಕ್ಕೆ

# ಸಿಎಂ ಸ್ಥಾನದ ವಿವಾದ ಶೀಘ್ರವೇ ಇತ್ಯರ್ಥ: ಖರ್ಗೆ

**ನವದೆಹಲಿ:** ಮುಖ್ಯಮಂತ್ರಿ ಸ್ಥಾನದ ವಿವಾದವನ್ನು ಶೀಘ್ರ ಇತ್ಯರ್ಥಪಡಿಸಲಾಗುವುದು. ಈ ಸಂಬಂಧ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ನಾನು ಸಮಾಲೋಚನೆ ನಡೆಸಿ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು.



ಮಾಧ್ಯಮಗಳ ಜೊತೆ ಬುಧವಾರ ಮಾತನಾಡಿದ ಅವರು, ಸರ್ಕಾರ ಏನು ಮಾಡುತ್ತಿದೆ ಎಂದು ಅಲ್ಲಿನ ಜನರು ಮಾತ್ರ ಹೇಳಬಹುದು. ಆದರೆ ನಾನು ನಿಮಗೆ ಭರವಸೆ ನೀಡಬಲ್ಲೆ. ನಾವು ಈ ಸಮಸ್ಯೆಗಳನ್ನು ಪರಿಹರಿಸುತ್ತೇವೆ. ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಮತ್ತು ನಾನು ಒಟ್ಟಿಗೆ ಕುಳಿತು ಚರ್ಚಿಸುತ್ತೇವೆ. ಅಗತ್ಯವಿರುವ ಯಾವುದೇ ಮಧ್ಯಸ್ಥಿಕೆಯನ್ನು ನಾವು ಒದಗಿಸುತ್ತೇವೆ ಎಂದು ಹೇಳಿದರು.

ಅಲ್ಲದೆ, ಡಿ.ಕೆ.ಶಿವಕುಮಾರ್ ಅವರಿಗೆ ರಾಹುಲ್ ಗಾಂಧಿ ಅವರು ಸಂಕ್ಷಿಪ್ತ ವಾಟ್ಸಾಪ್ ಸಂದೇಶದ ಮೂಲಕ ಪ್ರತಿಕ್ರಿಯಿಸಿದ್ದು, ದಯವಿಟ್ಟು ಕಾಯಿರಿ. ನಾನು ನಿಮಗೆ ಕರೆ ಮಾಡುತ್ತೇನೆ ಎಂದು ಹೇಳಿರುವುದಾಗಿ ವರದಿಯಾಗಿದೆ.

ಡಿಸೆಂಬರ್ 8ರಂದು ಸಂಸತ್ ಚಳಿಗಾಲದ ಅಧಿವೇಶನ ಪ್ರಾರಂಭವಾಗುವ ಮೊದಲು ರಾಜ್ಯದಲ್ಲಿ ನಾಯಕತ್ವದ ಯಾವುದೇ ಬದಲಾವಣೆಯ ಕುರಿತು ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳಲು ಯೋಜಿಸಿದೆ ಎನ್ನಲಾಗಿದೆ.

## ಸಿಎಂ ಸ್ಥಾನದ ಬಗ್ಗೆ ಮಾತನಾಡಲ್ಲ: ಪರಂ

**ಬೆಳಗಾವಿ:** ನಾನು ಮುಖ್ಯಮಂತ್ರಿ ಹುದ್ದೆ ಮತ್ತು ಸಂಪುಟ ಪುನರ್ ರಚನೆ ವಿಷಯಕ್ಕೆ ಸಂಬಂಧಿಸಿದಂತೆ ಏನನ್ನೂ ಮಾತನಾಡಲು ಬಯಸುವುದಿಲ್ಲ. ನಾನು ಈಗಾಗಲೇ ಸಾಕಷ್ಟು ಮಾತನಾಡಿದ್ದೇನೆ ಎಂದು ಗೃಹ ಸಚಿವ ಡಾ.ಪರಮೇಶ್ವರ್ ಹೇಳಿದರು. ಪರಮೇಶ್ವರ್ ಅವರನ್ನು ಮುಖ್ಯಮಂತ್ರಿ ಮಾಡಬೇಕೆಂದು ದಲಿತ ಸಂಘಟನೆಗಳು ಒತ್ತಾಯಿಸಿರುವ ಬಗ್ಗೆ ಗೃಹ ಸಚಿವ ಜಿ ಪರಮೇಶ್ವರ ಅವರು ಯಾವುದೇ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.



## ‘ಕೇಶವ ಕೃಪಾ’ಕ್ಕೆ ವರದಿ ನೀಡಬೇಕಿತ್ತೇ: ಪ್ರಿಯಾಂಕ್

**ಬೆಂಗಳೂರು:** ರಾಹುಲ್ ಗಾಂಧಿ ಅವರನ್ನಲ್ಲದೆ ನಾನು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರನ್ನು ಭೇಟಿ ಮಾಡಬೇಕೆ? ನನ್ನ ಸಭೆಯ ಬಗ್ಗೆ ಸಿಎಂ ಮತ್ತು ಉಪ ಮುಖ್ಯಮಂತ್ರಿಗೆ ವರದಿ ಮಾಡದೆ ನಾನು ಕೇಶವ ಕೃಪಾಕ್ಕೆ ವರದಿ ಮಾಡಬೇಕಿತ್ತೇ ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.



ಬೆಂಗಳೂರು ಟೆಕ್ ಶೃಂಗಸಭೆಗೆ ರಾಹುಲ್ ಗಾಂಧಿಯನ್ನು ಆಹ್ವಾನಿಸಲಾಗಿತ್ತು. ಅವರು ಬರಲು ಸಾಧ್ಯವಾಗಲಿಲ್ಲ. ನಮ್ಮ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಪರ್ಸನಲ್ ಕಂಪ್ಯೂಟರ್ ಅನ್ನು ತೋರಿಸಲು ನಾನು ಅವರ ಸಮಯವನ್ನು ಕೇಳಿದ್ದೆ. ಅವರು ಸಮಯ ನೀಡಿದ್ದರು ಎಂದು ಖರ್ಗೆ ಪ್ರಶ್ನೆಯೊಂದಕ್ಕೆ ಉತ್ತರಿಸಿದರು

ರಾಜ್ಯದಲ್ಲಿನ ಬೆಳವಣಿಗೆಗಳ ಕುರಿತು ರಾಹುಲ್ ಗಾಂಧಿಗೆ ವರದಿ ನೀಡಿದ್ದಾರೆ

ಪುಟ 2ಕ್ಕೆ

# ನಗರದಲ್ಲಿ ಮತ್ತೊಂದು ಭೀಕರ ಕೊಲೆ

**ಶಾಂತಿನಗರದಲ್ಲಿ ಮತ್ತೆ ಮಾರಕಾಸ್ತ್ರ ಝಳಪಿಸಿದ ಸಮಾಜಘಾತುಕರು**

**ಮೈಸೂರು:** ನಗರದ ಶಾಂತಿನಗರದಲ್ಲಿ ಮತ್ತೆ ಮಾರಕಾಸ್ತ್ರಗಳು ಝಳಪಿಸಿದೆ. ಮುಂಜಾನೆ ಸ್ನೇಹಿತನ ಜೊತೆ ಟೀ ಕುಡಿಯಲು ಹೋಗಿದ್ದ ಯುವಕನನ್ನು ಮದ್ಯವ್ಯಸನಿಗಳ ಗುಂಪು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ನಡೆದಿದೆ. 19 ವರ್ಷದ ಸಯ್ಯದ್ ಸೂಫಿಯನ್ ಕೊಲೆಯಾದ ಯುವಕ.



ಬುಧವಾರ ಮುಂಜಾನೆ 5.40ರ ಸುಮಾರಿಗೆ ಟೀ ಕುಡಿಯಲು ಹೋಗಿದ್ದ ವೇಳೆ ಮದ್ಯವ್ಯಸನಿ ಯುವಕರು ಸೂಫಿಯಾನ್ ಜೊತೆ ಹೊಡೆದಾಡಿದ್ದಾರೆ. ಯುವಕನಿಗೆ ಹಲವು ಬಾರಿ ಚಾಕುವಿನಿಂದ ಚುಚ್ಚಿದ್ದಾರೆ. ಇಬ್ಬರು ಸ್ನೇಹಿತರು ಸೇರಿ ರಸ್ತೆಯಲ್ಲೇ ಅಟ್ಟಾಡಿಸಿ ಕೊಲೆ ಮಾಡಿದ್ದಾರೆ. ಎದೆ ಮತ್ತು ಬೆನ್ನಿನ ಭಾಗಕ್ಕೆ ಚಾಕುವಿನಿಂದ ಚುಚ್ಚಿದ್ದಾರೆ. ಇದನ್ನು ವೀಕ್ಷಿಸುತ್ತಿದ್ದ ಜನರು

ಪುಟ 2ಕ್ಕೆ

## ಗಾಂಜಾ, ಡ್ರಗ್ ಸೇವಿಸಿ ಕೊಲೆ

**ಗಾಂಜಾ, ಡ್ರಗ್ಸ್ ಸೇವಿಸಿದ್ದ ಯುವಕರು ತಮ್ಮ ಮಗನನ್ನ ಕೊಲೆ ಮಾಡಿದ್ದಾರೆಂದು ಮೃತ ಸೂಫಿಯಾನ್ ಪೋಷಕರು ಆರೋಪಿಸಿದ್ದಾರೆ. ಶಾಂತಿ ನಗರದಲ್ಲಿ ಡ್ರಗ್ಸ್ ಹಾವಳಿ ಹೆಚ್ಚಾಗಿದೆ. ಚಿಕ್ಕ ಚಿಕ್ಕ ಮಕ್ಕಳೂ ಡ್ರಗ್ಸ್, ಗಾಂಜಾ, ಟ್ಯಾಬ್ಲೆಟ್ ಹಾಗೂ ಸೆಲ್ಯೂಷನ್ ಸೇವನೆ ಮಾಡುತ್ತಿದ್ದಾರೆ. ಪ್ರತಿನಿತ್ಯ ಹುಡುಗರು ನಶೆಯಲ್ಲಿರುತ್ತಾರೆ. ನನ್ನ ಮಗ ಸೂಫಿಯನ್ ಬೆಳಗ್ಗೆ ನಮಾಜ್‌ಗೆ ಹೋಗಿದ್ದ. ನಂತರ ಟೀ**

ಪುಟ 2ಕ್ಕೆ

## ಕೊಲೆ, ಸುಲಿಗೆ ಪ್ರಕರಣಗಳು ಹೆಚ್ಚಳ: ಸಾರ್ವಜನಿಕರ ಆಕ್ರೋಶ

**ಮೈಸೂರು:** ಉದಯಗಿರಿ ಠಾಣೆ ವ್ಯಾಪ್ತಿಯಲ್ಲಿ ಮತ್ತೆ ಪುಂಡರು ಅಟ್ಟಹಾಸ ಮೆರೆದಿರುವುದು ನಗರದ ನಾಗರಿಕರಲ್ಲಿ ಆತಂಕ ಮೂಡಿಸಿದೆ. ಗೃಹ ಸಚಿವ ಪರಮೇಶ್ವರ್ ಅವರು ನಗರಕ್ಕೆ ಬಂದು ತೆರಳಿದ ಒಂದೇ ದಿನದಲ್ಲಿ ನಗರದಲ್ಲಿ ಮತ್ತೊಂದು ಕೊಲೆ ನಡೆದಿರುವುದು ಜನರ ಆತಂಕಕ್ಕೆ ಕಾರಣವಾಗಿದೆ. ಉದಯಗಿರಿ

ಪುಟ 2ಕ್ಕೆ

## ಸರ್ಕಾರ ಬಿದ್ದರೆ, ಬಿಜೆಪಿ ಯತ್ನ: ಡಿವಿ

**ಚಿಕ್ಕಬಳ್ಳಾಪುರ:** ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಿದ್ದು ಹೋದರೆ ಬಿಜೆಪಿ ವರಿಷ್ಠರು ನೀಡುವ ಆದೇಶ ಜಾರಿಗೊಳಿಸುತ್ತೇವೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ತಿಳಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಮಧ್ಯಂತರ ಚುನಾವಣೆ ಆಗಬಾರದು. ಏನಾದರೂ ಮಾಡಿ ಎಂದು ಪಕ್ಷದ ವರಿಷ್ಠರು ಸೂಚನೆ ನೀಡಿದರೆ ನಾವು ಸರ್ಕಾರ ರಚನೆಗೆ ಪ್ರಯತ್ನಿಸುತ್ತೇವೆ ಎಂದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತ ಸತ್ತು ಹೋಗಿದೆ. ರಾಜ್ಯದ ಜನರು ಕಂಗಾಲಾಗಿದ್ದಾರೆ. ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯುವುದು ಸೇರಿದಂತೆ ರೈತರ ಹಲವು ಸಮಸ್ಯೆಗಳಿವೆ. ಅವುಗಳ ಪರಿಹಾರಕ್ಕೆ ಸರ್ಕಾರ ಮುಂದಾಗುತ್ತಿಲ್ಲ. ಈ ಸರ್ಕಾರ ಇರಬಾರದು ಎಂದು ಟೀಕಿಸಿದರು.

# ಡಿಕೆಶಿ ಸಿಎಂ ಆಗೋದು 200 ಪರ್ಸೆಂಟ್ ಗ್ಯಾರಂಟಿ: ಇಕ್ಬಾಲ್

**ಬೆಂಗಳೂರು:** ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುವ ಕುರಿತು ತಮಗೆ 200 ಪರ್ಸೆಂಟ್ ಭರವಸೆ ಇದೆ ಎಂದು ಶಾಸಕ ಇಕ್ಬಾಲ್ ಹುಸೇನ್ ಹೇಳಿದರು.

ನಗರದ ವಿಮಾನ ನಿಲ್ದಾಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಅವರು ಸಿಎಂ ಆಗಬೇಕು ಎಂಬ ತಮ್ಮ ಒತ್ತಾಸೆಗೆ ನಾನು ಯಾವತ್ತೂ ಬದ್ಧ ಎಂದರು.

ನವದೆಹಲಿಯಲ್ಲಿ ಹೈಕಮಾಂಡ್ ಭೇಟಿ ಕುರಿತು ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿ, ಎಲ್ಲ ಸಿಹಿ ಸುದ್ದಿಯೇ ಆಗುತ್ತದೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ. ಈ ವಿಚಾರವು ನಾಲ್ಕೈದು ಜನ ನಾಯಕರ ನಡುವಿನ ಖಾಸಗಿ ವಿಷಯ. ಹೈಕಮಾಂಡ್‌ನ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಿರುತ್ತೇವೆ ಎಂದು ಸ್ಪಷ್ಟಪಡಿಸಿದರು.



ನಾಲ್ಕೈದು ಜನರ ಮಧ್ಯೆ ಅಧಿಕಾರ ಹಂಚಿಕೆ ಬಗ್ಗೆ ಚರ್ಚೆ ಆಗಿದೆ. ಈಗಲೂ ಅವರೇ ಕುಳಿತು ಈ ಬಗ್ಗೆ ನಿರ್ಧಾರ ತೆಗೆದುಕೊಳ್ತಾರೆ ಎಂದರು.

## ಉಡುಪಿ ಕೃಷ್ಣನ ದರ್ಶನಕ್ಕೆ ಬನ್ನಿ: ಸಿಎಂಗೆ ಪ್ರಮೋದ್ ಆಹ್ವಾನ

**ಉಡುಪಿ:** ಪ್ರಧಾನಿ ನರೇಂದ್ರ ಮೋದಿ ಉಡುಪಿ ಕೃಷ್ಣನ ದರ್ಶನಕ್ಕೆ ಬರುತ್ತಿದ್ದಾರೆ. ನೀವೂ ಉಡುಪಿಗೆ ಬಂದು ಕನಕನ ಕಿಂಡಿಯಲ್ಲಿ ಕೃಷ್ಣನನ್ನು ವೀಕ್ಷಿಸಿ ಎಂದು ಸಿಎಂ ಸಿದ್ದರಾಮಯ್ಯ ಅವರಿಗೆ ಬಿಜೆಪಿ ನಾಯಕ ಪ್ರಮೋದ್ ಮಧ್ವರಾಜ್ ಆಹ್ವಾನ ನೀಡಿದ್ದಾರೆ.



ಕೃಷ್ಣ ಮಠವನ್ನು ಸರ್ಕಾರೀಕರಣ ಮಾಡಲು ಸಿದ್ದರಾಮಯ್ಯ ಮುಂದಾಗಿದ್ದರು. ಆದರೆ ಈಗ ಅವರು ಕೃಷ್ಣಮಠಕ್ಕೆ ಯಾಕೆ ಬರುತ್ತಿಲ್ಲ ಗೊತ್ತಿಲ್ಲ. ಈ ಸೇವೆಯಿಂದ ಹಾಲುಮತ ಸಮುದಾಯ, ಕುರುಬ ಸಮುದಾಯಕ್ಕೆ ಬಹಳ ಸಂತಸವಾಗಲಿದೆ ಎಂದು ಹೇಳಿದ್ದಾರೆ. ಕನಕನ ಕಿಂಡಿ, ಕನಕನ ಗುಡಿಯನ್ನಾದರೂ ನೋಡಲು ಉಡುಪಿಗೆ ಬನ್ನಿ. ಕನಕನ ಕಿಂಡಿ ಮೂಲಕವಾದರೂ ಕೃಷ್ಣ ದರ್ಶನ ಮಾಡಿ ಎಂದು ಸಿಎಂಗೆ ಹೇಳಿದ್ದಾರೆ.

# ಸಿಎಂ ನಿರ್ಧಾರ ಆಗದಿದ್ದರೆ ಅಧಿವೇಶನ ವ್ಯರ್ಥ: ಅಶೋಕ್

**ವಿಜಯನಗರ:** ರಾಜ್ಯದ ಮುಂದಿನ ಮುಖ್ಯಮಂತ್ರಿ ಯಾರು ಎಂದು ಕಾಂಗ್ರೆಸ್ ಹೈಕಮಾಂಡ್ ಘೋಷಿಸಬೇಕು. ಇಲ್ಲವಾದರೆ ಬೆಳಗಾವಿ ಅಧಿವೇಶನ ಸಿಎಂ ಯಾರೆಂಬ ಚರ್ಚೆಯಲ್ಲೇ ವ್ಯರ್ಥವಾಗಿಬಿಡುವ ಅಪಾಯ ಇದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಹೇಳಿದರು.



ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ, ಉತ್ತರ ಕರ್ನಾಟಕದ ಸಮಸ್ಯೆಗಳು, ನೀರಾವರಿ ಮತ್ತು ಶಾಲೆ ಮುಚ್ಚುವಿಕೆ ವಿಚಾರವನ್ನು ಈ ಬಾರಿಯ ಅಧಿವೇಶದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಒಟ್ಟಾಗಿ ತೆಗೆದುಕೊಳ್ಳಲಿವೆ. ನಿಲುವಳಿ ಸೂಚನೆ ಮೂಲಕ ಮೊದಲ ದಿನವೇ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚಿಸಲು ಪಕ್ಷ ಈಗಾಗಲೇ ತಯಾರಿ ನಡೆಸಿದೆ. ಎರಡನೇ ದಿನದಿಂದ ಶಾಲೆಗಳ ಬಗ್ಗೆ, ನೀರಾವರಿ ಕುರಿತಂತೆ ಚರ್ಚೆ ನಡೆಸಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ಈಗ ಕಾಂಗ್ರೆಸ್ ಸತ್ತೇ ಹೋಗಿದೆ. ಅದರ ಹೆಣ ಹೊರುವ ಕೆಲಸವನ್ನು ಈಗ ಸಿಎಂ ಮಾಡುತ್ತಿದ್ದಾರೆ. ಸಿಎಂ ಬದಲಾವಣೆ ಎಂದರೆ ಹೆಣ ಮುಂದೆ ಹೊರುವುದು ಯಾರು ಎಂಬ ಪ್ರಶ್ನೆ ಮಾತ್ರ. ಸದ್ಯ ತಲೆಗೊಳ್ಳಿ ಹಿಡಿಯುವ ವ್ಯಕ್ತಿಗೆ ಹುಡುಕಾಡುತ್ತಿದ್ದಾರೆ ಅಷ್ಟೇ. ಇಂತಹ ಪಕ್ಷದ ಜತೆಗೆ ಸೇರಿಕೊಂಡು ಸರ್ಕಾರ ರಚಿಸಲು ಆಹ್ವಾನ ಬಂದರೆ ಬಿಜೆಪಿ ಅದನ್ನು ಒಪ್ಪಿಕೊಳ್ಳುವುದಿಲ್ಲ ಎಂದರು.

## ಗರ್ಭಿಣಿ ಪತ್ನಿಗೆ ಕರೆ ಮಾಡಿ ಸಿಕ್ಕಿಬಿದ್ದ ಎಟಿಎಂ ವಾಹನ ದರೋಡೆಕೋರರು!

**ಬೆಂಗಳೂರು:** ನಗರದಲ್ಲಿ ಎಟಿಎಂ ವಾಹನದಿಂದ 7.11 ಕೋಟಿ ದರೋಡೆ ಪ್ರಕರಣದ ಇಬ್ಬರು ಆರೋಪಿಗಳು ತಮ್ಮ ಗರ್ಭಿಣಿ ಪತ್ನಿಯರ ಆರೋಗ್ಯ ವಿಚಾರಿಸುವಾಗ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ.

ದರೋಡೆ ಪ್ರಕರಣದ ಆರೋಪಿಗಳಾದ ರವಿ ಹಾಗೂ ರಾಕೇಶ್ ಪತ್ನಿಯರು ಗರ್ಭಿಣಿಯರಾಗಿದ್ದರು. ಗರ್ಭಿಣಿ ಪತ್ನಿಯರು ಮನೆಯಲ್ಲಿ ಒಬ್ಬರೇ ಇದ್ದರು. ಏನ್ ಆಗಿದೆಯೋ ಅಂತ ಆರೋಪಿಗಳು ಭಯದಲ್ಲಿದ್ದರು. ಇಬ್ಬರೂ ತಮ್ಮ ಪತ್ನಿಯರ ಆರೋಗ್ಯ ವಿಚಾರಿಸುವುದಕ್ಕಾಗಿ 10 ಮೊಬೈಲ್ ಖರೀದಿಸಿದ್ದರು. ಆದರೆ, ಹೊಸದಾಗಿ ಸಿಮ್ ತಗೊಂಡರೆ ಸಿಕ್ಕಿಬೀಳ್ತೀವಿ ಅಂತ ಬರೀ ಮೊಬೈಲ್ ಖರೀದಿಸಿದ್ದರು.

ಆರೋಪಿಗಳು ಮೊದಲು ಹೊಸೂರಿಗೆ ಹೋಗಿ ಅಲ್ಲಿಂದ ಹೈದರಾಬಾದ್‌ಗೆ ಕ್ಯಾಬ್ ಬುಕ್ ಮಾಡಿದ್ದರು. ಈ ವೇಳೆ ಕ್ಯಾಬ್ ಚಾಲಕನ ನಂಬರ್‌ನಿಂದ ಹೆಂಡತಿಗೆ ಕರೆ ಮಾಡಿ ಆರೋಗ್ಯದ ಕಡೆ ಗಮನ ಕೊಡು, ಹುಷಾರು ಎಂದು ಫೋನ್ ನಲ್ಲಿ ಹೇಳಿದ್ದರು. ಫೋನ್ ಟ್ಯಾಪ್ ಮಾಡಿದ್ದ ಪೊಲೀಸರು, ಇಬ್ಬರು ಆರೋಪಿಗಳ ಪತ್ನಿಯರನ್ನು ವಶಕ್ಕೆ ಪಡೆದಿದ್ದರು. ಕ್ಯಾಬ್ ಚಾಲಕನ ಕರೆ ಆಧರಿಸಿ ಆರೋಪಿಗಳ ಬೆನ್ನತ್ತಿ ಹೈದರಾಬಾದ್‌ಗೆ ತೆರಳಿದ್ದ ಪೊಲೀಸರು, ಕೊನೆಗೆ ಹೈದರಾಬಾದ್ ರೈಲ್ವೆ ನಿಲ್ದಾಣದಲ್ಲಿ ಆರೋಪಿಗಳನ್ನು ಬಂಧಿಸಿದ್ದರು.

# ಪರಂ ಪರ ರಾಜಣ್ಣ ಬ್ಯಾಟಿಂಗ್

## ಪರಮೇಶ್ವರ್‌ಗೆ ಮೊದಲು ಕೂಲಿ ಕೊಡಲಿ!

**ಬೆಂಗಳೂರು:** ಪರಮೇಶ್ವರ್ ಮುಖ್ಯಮಂತ್ರಿ ಆಗುವುದಾದರೆ ನಾನು ಅವರ ಪರ ಇದ್ದೇನೆ. ಅಧಿಕಾರ ಹಸ್ತಾಂತರ ಆಗುವುದಾದರೆ ಪರಮೇಶ್ವರ್ ಸಿಎಂ ಆಗಲಿ ಎಂದು ಮಾಜಿ ಸಚಿವ ಕೆ.ಎನ್ ರಾಜಣ್ಣ ಗೃಹ ಸಚಿವ ಪರಮೇಶ್ವರ್ ಪರ ಬ್ಯಾಟಿಂಗ್ ಮಾಡಿದ್ದಾರೆ.

ಕಾಂಗ್ರೆಸ್ ಕುರ್ಚಿ ಕದನ ಕುರಿತು ಮಾತನಾಡಿದ ಅವರು, ಪರಮೇಶ್ವರ್ ಸಿಎಂ ಸ್ಥಾನ ಕೇಳೋದು ತಪ್ಪಲ್ಲ. 2013ರಲ್ಲಿ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತಂದಿದ್ದಾರೆ. ಅವರ ಕೂಲಿ ಬಾಕಿ ಇದೆ. ಡಿಕೆಶಿ ಸಿಎಂ ಸ್ಥಾನದ ಡಿಮ್ಯಾಂಡ್ ಮಾಡಿದ್ರೆ ಪರಮೇಶ್ವರ್‌ಗೆ ಮೊದಲು ಸಿಎಂ ಸ್ಥಾನ ಕೊಡಬೇಕು ಎಂದು ಡಿಕೆಶಿಗೆ ಟಾಂಗ್ ನೀಡಿದರು.

ಡಿ.ಕೆ.ಶಿವಕುಮಾರ್ ಕೂಲಿ ಕೇಳೋದಿದ್ದರೆ ಪರಮೇಶ್ವರ್ 2013ರಲ್ಲಿ ಪಕ್ಷ ಅಧಿಕಾರಕ್ಕೆ ತಂದಿದ್ದರು. ಪರಮೇಶ್ವರ್ ಅವರಿಗೆ ಹಳೆ ಕೂಲಿ ಕೊಡಬೇಕಿದೆ. ಇವರದ್ದು ಹೊಸ ಕೂಲಿ. ಮೊದಲು ಹಳೆ ಕೂಲಿ ತೀರಿಸಬೇಕೋ? ಅಥವಾ ಹೊಸ ಕೂಲಿ ತೀರಿಸಬೇಕೋ? ಎಂದು ಡಿಕೆಶಿಗೆ ತಿರುಗೇಟು ನೀಡಿದ್ದಾರೆ.



ಡಿ.ಕೆ.ಶಿವಕುಮಾರ್ ಆಪ್ತರ ಬಣದಿಂದ ದೆಹಲಿ ಪರೇಡ್ ಯಾಕೆಂದು ಅವರನ್ನೇ ಕೇಳಬೇಕು. ಹೈಕಮಾಂಡ್ ಬೇಗ ಸಮಸ್ಯೆ ಇತ್ಯರ್ಥ ಮಾಡಲಿ. ಇಲ್ಲದೆ ಹೋದರೆ ಸರ್ಕಾರ ವಿಸರ್ಜನೆ ಮಾಡಿ ಡಿಕೆಶಿ ನೇತೃತ್ವದಲ್ಲಿ ಚುನಾವಣೆಗೆ ಹೋಗಲಿ. ಡಿ.ಕೆ ಶಿವಕುಮಾರ್ ನೇತೃತ್ವದಲ್ಲಿ ಚುನಾವಣೆಗೆ ಹೋಗಿ ಮತ್ತೆ ಅಧಿಕಾರಕ್ಕೆ ತರೋಣ. ಯಾರಾದರೂ ನಮ್ಮಿಂದಲೇ ಪಕ್ಷ ಅಧಿಕಾರಕ್ಕೆ ಬಂತು

## ಪ್ರಕರಣದ ಹಿನ್ನೆಲೆ ಏನು?

**ಬಂಧನದಲ್ಲಿಡುವಂತೆ ಸುಪ್ರಿಂ ಆದೇಶ ಮಾಡಿತ್ತು. ಹೀಗಾಗಿ 2024ರ ಮೇ.27 ರಂದು ಕೋರ್ಟ್ ಎದುರು ಶರಣಾದ ಮುರುಘಾ ಶ್ರೀಗೆ ನ್ಯಾಯಾಂಗ ಬಂಧನ ವಿಸ್ತರಿಸಿ ಕೋರ್ಟ್ ಆದೇಶಿಸಿತ್ತು. ಬಳಿಕ ಸಂತ್ರಸ್ತೆಯರಿಬ್ಬರು ಸೇರಿದಂತೆ 13 ಜನರ ಸಾಕ್ಷಿ ವಿಚಾರಣೆ ಅಂತ್ಯವಾದ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಆದೇಶದಂತೆ ಮುರುಘಾಶ್ರೀಗೆ ಬಿಡುಗಡೆ ಭಾಗ್ಯ ಸಿಕ್ಕಿತ್ತು.**

### ಅಜ್ಜಯ್ಯನ ಮೊರೆಹೋದ ಡಿಕೆಶಿ

ತಾಲ್ಲೂಕಿನ ಯಾದಪುರದಲ್ಲಿರುವ ಶ್ರೀ ಜೇನುಕಲ್ ಸಿದ್ದೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನ ಬೆಂಗಳೂರಿನ ನಿವಾಸಕ್ಕೆ ಕರೆಸಿಕೊಂಡು ಕುಟುಂಬಸ್ಥರೊಂದಿಗೆ ಡಿಕೆಶಿ ಸಂಕಲ್ಪ ಪೂಜೆ ಸಲ್ಲಿಸಿದ್ದರು.

### ಗಾಂಜಾ, ಡ್ರಗ್ಸ್ ಸೇವಿಸಿ ಕೊಲೆ

ಕುಡಿಯುವಾಗ ಸ್ನೇಹಿತರೇ ಚಾಕು ಹಾಕಿ ಕೊಲೆ ಮಾಡಿದ್ದಾರೆ. ನನ್ನ ಮಗನ ಸಾವಿಗೆ ನ್ಯಾಯ ಕೊಡಿಸಿ. ಇಲ್ಲವಾದರೆ ನಮ್ಮನ್ನೂ ಕೊಲೆ ಮಾಡಿ ಎಂದು ಕೊಲೆಯಾದ ಸೂಫಿಯಾನ್ ತಾಯಿ ಶಾಯಿನ್ ತಾಜ್ ಗೋಳಾಡಿದರು.

### ಡಿಕೆಶಿ–ಸತೀಶ್ ಜಾರಕಿಹೊಳಿ ಮಧ್ಯರಾತ್ರಿಯಲ್ಲಿ ಗೌಪ್ಯ ಸಭೆ!

ಕೇಳುವುದಾಗಿ ತಿಳಿಸಿದರು.

ಉಪಮುಖ್ಯಮಂತ್ರಿ ಶಿವಕುಮಾರ್ ಅವರಿಗೆ ಮುಖ್ಯಮಂತ್ರಿಯಾಗುವ ಮಹತ್ವಾಕಾಂಕ್ಷೆ ಇದೆ. ಮೊದಲ ದಿನದಿಂದಲೇ ಅವರು ಅದನ್ನು ಎಲ್ಲರಿಗೂ ತಿಳಿಸಿದ್ದರು. ಆದರೆ, ಪಕ್ಷದ ಹೈಕಮಾಂಡ್ ಸಿದ್ದರಾಮಯ್ಯ ಅವರಿಗೆ ಅವಕಾಶ ನೀಡಿತು. ಇದೀಗ ನಾಯಕತ್ವ ಬದಲಾವಣೆಯ ಬಗ್ಗೆ ಪಕ್ಷದ ಹೈಕಮಾಂಡ್ ನಿರ್ಧರಿಸಬೇಕು ಎಂದರು.

### ನಗರದಲ್ಲಿ ಮತ್ತೊಂದು ಭೀಕರ ಕೊಲೆ

ಭಯಭೀತರಾಗಿದ್ದರು. ಯಾರೊಬ್ಬರೂ ಸಹಾಯಕ್ಕೆ ಬಾರದ ಹಿನ್ನೆಲೆ ರಸ್ತೆಯಲ್ಲೇ ಯುವಕ ನರಳಿ ಪ್ರಾಣ ಬಿಟ್ಟಿದ್ದಾನೆ. ಈ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.

### ಪರಂ ಪರ ರಾಜಣ್ಣ ಬ್ಯಾಟಿಂಗ್

ಅಂದರೆ ಅವರು ಹುಚ್ಚರು. ಮೆಂಟಲ್‌ಗಳು ಎಂದು ಡಿಕೆಶಿ ಹಾಗೂ ಟೀಂ ವಿರುದ್ಧ ಪರೋಕ್ಷವಾಗಿ ರಾಜಣ್ಣ ವಾಗ್ದಾಳಿ ನಡೆಸಿದರು.

ಹೈಕಮಾಂಡ್ ಏನೇ ತೀರ್ಮಾನ ಮಾಡಿದರೂ ಅದಕ್ಕೆ ಎಲ್ಲರೂ ಬದ್ಧವಾಗಿ ಇರಬೇಕು. ಶಾಸಕರು ದೆಹಲಿಗೆ ಹೋಗಿರೋದು ಮಂತ್ರಿ ಸ್ಥಾನಕ್ಕೆ ಗಾಡ್ ಫಾದರ್‌ಗಳ ಮೂಲಕ ಲಾಬಿ ಮಾಡಲು. ಸಿದ್ದರಾಮಯ್ಯ ಸಿಎಂ ಆಗಿರೋದು ಬಿಡೋದನ್ನ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಸಿದ್ದರಾಮಯ್ಯ ಬದಲಾವಣೆ ಆಗುತ್ತಾರೆ ಎಂದು ನನಗೆ ಅನಿಸಲ್ಲ. ಅವರೇ ಮುಂದುವರೆಯುತ್ತಾರೆ ಎಂದು ಹೇಳಿದರು.

### ಕೊಲೆ, ಸುಲಿಗೆ ಪ್ರಕರಣಗಳು ಹೆಚ್ಚಳ: ಸಾರ್ವಜನಿಕರ ಆಕ್ರೋಶ

ಠಾಣೆ ವ್ಯಾಪ್ತಿಯಲ್ಲಿ ಅಪರಾಧ ಪ್ರಕರಣಗಳು ಹೆಚ್ಚುತ್ತಿದ್ದರೂ ಪೊಲೀಸರು ಯಾವುದೇ ಕ್ರಮಕೈಗೊಳ್ಳುತ್ತಿಲ್ಲ. ನಗರದಲ್ಲಿ ಇತ್ತೀಚೆಗೆ ಕೊಲೆ, ಸುಲಿಗೆ ಪ್ರಕರಣಗಳು ಹೆಚ್ಚುತ್ತಿವೆ. ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ. ಸರ್ಕಾರ ಕ್ರಮಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

### ವರದಿ ನೀಡಬೇಕಿತ್ತೇ: ಪ್ರಿಯಾಂಕ್

ಎಂಬ ವಿಷಯದ ಬಗ್ಗೆ ನಾನು ಏಕೆ ಮಾತನಾಡಬೇಕು? ಎಂದು ಪ್ರಶ್ನಿಸಿದರು. ಒಂದು ವೇಳೆ ನಾಯಕತ್ವದ ಬದಲಾವಣೆ ವಿಚಾರವಾಗಿ ಚರ್ಚೆಯಾಗಿದ್ದರೇ ಅದನ್ನು ಮಾಧ್ಯಮಗಳೊಂದಿಗೆ ಹಂಚಿಕೊಳ್ಳಬಹುದೇ? ಎಂದು ಪ್ರಶ್ನಿಸಿದರು. ನಾಯಕತ್ವ ಬದಲಾವಣೆ ವಿಚಾರವಾಗಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ಅವರು ಹೈಕಮಾಂಡ್ ತೀರ್ಮಾನಕ್ಕೆ ಬಿಟ್ಟಿದ್ದಾರೆ. ವರಿಷ್ಠರ ಅಂಗಳದಲ್ಲೇ ಗೊಂದಲ ಬಗೆಹರಿಯಬೇಕಲ್ವಾ? ಎಂದರು

# ಬಡವರ ವೈದ್ಯ ಖ್ಯಾತಿಯ ಡಾ.ಕೆ.ಪಿ.ಹೆಗ್ಡೆ ನಿಧನ

ರಾಮನಗರ: ಬಡವರ ವೈದ್ಯ ಅಂತಲೇ ಚಿರಪರಿಚಿತರಾಗಿದ್ದ ಡಾ.ಕೆ.ಪಿ.ಹೆಗ್ಡೆ ಬುಧವಾರ ನಿಧನರಾದರು. ಅವರಿಗೆ 78ವರ್ಷ ವಯಸ್ಸಾಗಿತ್ತು. ಅವರು ಪತ್ನಿ ಚಂದ್ರಲೇಖ, ಒರ್ವ ಪುತ್ರ, ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಗರದಲ್ಲಿನ ಹಿಂದೂ ರುದ್ರಭೂಮಿಯಲ್ಲಿರುವ ವಿದ್ಯುತ್ ಚಿತಾಗಾರದಲ್ಲಿ ಬುಧವಾರ ಸಂಜೆ ನೆರವೇರಿತು.

**ಬಡವರ ವೈದ್ಯ**

ವೈದ್ಯ ವೃತ್ತಿಯನ್ನು ಆರಂಭಿಸಿದಾಗ ಅವರು 2ರೂ, 5ರೂ ಪಡೆದು ಚಿಕಿತ್ಸೆ ನೀಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿಯೂ ಅವರು ಕೇವಲ 20 ರೂ ಪಡೆಯುತ್ತಿದ್ದರು. ಅನೇಕ ರೋಗಿಗಳು ಈ ಶುಲ್ಕವನ್ನು ಭರಿಸುತ್ತಿರಲಿಲ್ಲ. ಆದರೂ ಡಾ.ಕೆ.ಪಿ.ಹೆಗ್ಡೆಯವರು ಬೇಸರಿಸಿಕೊಳ್ಳದೆ ಚಿಕಿತ್ಸೆ ನೀಡುತ್ತಿದ್ದರು. ಹೀಗಾಗಿಯೆ ಅವರು ಜಿಲ್ಲೆಯಲ್ಲಿ ಬಡವರ ವೈದ್ಯ ಅಂತಲೇ ಕರೆಸಿಕೊಳ್ಳುತ್ತಿದ್ದರು. ವೈದ್ಯ ವೃತ್ತಿಯ ಜತೆಗೆ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಂಡಿರುವ ಅಪರೂಪದ ವ್ಯಕ್ತಿಗಳಲ್ಲಿ ಡಾ.ಕೆ.ಪಿ. ಹೆಗ್ಡೆ ಒಬ್ಬರಾಗಿದ್ದರು. ಇವರು ಸರ್ಕಾರದ ಸ್ಟೈಪಂಡರಿ ಸ್ಕೀಂ ನಲ್ಲಿ ಬಿಡದಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾರ್ಯನಿರ್ವಹಿಸಲು ಆಯ್ಕೆಯಾಗಿದ್ದರು. ಆದರೆ ಬಡವರ ಮೇಲಿನ ಕಾಳಜಿಯಿಂದ ಕೆಲಸಕ್ಕೆ ರಾಜೀನಾಮೆ ನೀಡಿ 1973ರಲ್ಲಿ ಪ್ರಗತಿ ಚಿಕಿತ್ಸಾಲಯ' ಸ್ಥಾಪಿಸಿದರು. ಚಿಕಿತ್ಸಾಲಯಕ್ಕೆ ಬರುವ ರೋಗಿಗಳ ಹತ್ತಿರ ಹಣ ಇರಲಿ, ಇಲ್ಲದಿರಲಿ ಇವರು ಚಿಕಿತ್ಸೆ ನೀಡುತ್ತಿದ್ದರು. ಜತಗೆ ಔಷಧಿಗಳನ್ನು ಉಚಿತವಾಗಿ ನೀಡುತ್ತಿದ್ದರು.



ಅಲೆಮಾರಿದೊಡ್ಡಿ, ದೇವರದೊಡ್ಡಿ, ಕೊಂಕಾಣಿದೊಡ್ಡಿ, ಶಾನುಬೋಗನಹಳ್ಳಿ, ರಂಗರಾಯರದೊಡ್ಡಿ, ಪೌರಕಾರ್ಮಿಕರ ಕಾಲೋನಿ, ಅರ್ಕೇಶ್ವರ ಕಾಲೋನಿ, ವಡೇರಹಳ್ಳಿಯ ಹಾಗೂ ರಾಮದೇವರ ಬೆಟ್ಟದ ಬಳಿ ಇರುವ ಇರುಗಳಿಗರ ಕಾಲೋನಿಯನ್ನು ವೈದ್ಯಕೀಯ ಚಿಕಿತ್ಸೆಗಾಗಿ ದತ್ತು ತೆಗೆದುಕೊಂಡಿದ್ದರು. ಇರುಳಿಗರ ಕಾಲೋನಿಗಳಿಗೆ 17 ವರ್ಷಗಳಿಂದ ಉಚಿತ ಚಿಕಿತ್ಸೆ ನೀಡುತ್ತಿದ್ದರು. ಆರೋಗ್ಯದ ಮಹತ್ವವನ್ನು ಕುರಿತು ಅವರಲ್ಲಿ ಜಾಗೃತಿ ಮೂಡಿಸುವ ಜತೆಗೆ ಅವರು ಸಮಾಜದ ಮುಖ್ಯ ವಾಹಿನಿಗೆ ಬರಲು ಶ್ರಮಿಸಿದ್ದರು.

**ಪತ್ರಕರ್ತರಾಗಿಯೂ ಗುರುತಿಸಿಕೊಂಡಿದ್ದರು.**

ಡಾ.ಕೆ.ಪಿ.ಹೆಗ್ಡೆ "ಪ್ರಗತಿ ವಾಣಿ" ಎಂಬ ಪತ್ರಿಕೆಯ ಸಂಪಾದಕರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಅವಿಭಾಜಿತ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪತ್ರಕರ್ತರ ಸಂಘದಲ್ಲಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಸೆಂಟ್ ಜಾನ್ ಆಂಬ್ಯುಲೆನ್ಸ್ ಕಾರ್ಯದರ್ಶಿಯಾಗಿ 32 ವರ್ಷಗಳಿಂದ ಸೇವೆ ಸಲ್ಲಿಸಿದ್ದರು. ರಾಮನಗರದಲ್ಲಿ ಮೊದಲ ಬಾರಿಗೆ ಪ್ರಥಮ ಚಿಕಿತ್ಸೆಯ ಹೆದ್ದಾರಿ ಘಟಕವನ್ನು ಪ್ರಾರಂಭಿಸಿ 2001 ರಿಂದ 2010ರ ವರೆಗೆ ರಸ್ತೆ ಅಪಘಾತದಲ್ಲಿ ಗಾಯಗೊಂಡ ವ್ಯಕ್ತಿಗಳಿಗೆ ಉಚಿತ ಚಿಕಿತ್ಸೆಯನ್ನು ನೀಡಿದ್ದರು. ಪ್ರಥಮ ಚಿಕಿತ್ಸೆ ತರಬೇತಿ ನೀಡುತ್ತಿದ್ದರು. ಇವರ ಬಳಿ ತರಬೇತಿ ಪಡೆದ ನೂರಾರು ಮಂದಿ ಇಂದು ಚಾಲಕರಾಗಿ, ನಿರ್ವಾಹಕರಾಗಿ ಉದ್ಯೋಗದಲ್ಲಿದ್ದಾರೆ.

**ಪಗ್ರತಿ ಶಾಲೆಯನ್ನು ಸ್ಥಾಪಿಸಿದ ಕೀರ್ತಿ**

ಸಮಾನ ಮನಸ್ಕರನೆಲ್ಲ ಒಗ್ಗೂಡಿಸಿ ನಗರದಲ್ಲಿ ಪ್ರಗತಿ ಶಾಲೆಯನ್ನು ಸ್ಥಾಪಿಸಿದ ಕೀರ್ತಿ. ಇಂದಿಗೂ ಕನ್ನಡ ಮಾಧ್ಯಮದ ಶಾಲೆಯಾಗಿ ಪ್ರಗತಿ ಶಾಲೆ ಕಾರ್ಯನಿರ್ವಹಿಸುತ್ತಿದೆ. ಸಂಸ್ಥಾಪಕ ಕಾರ್ಯದರ್ಶಿಯಾಗಿದ್ದ ಡಾ.ಕೆ.ಪಿ.ಹೆಗ್ಡೆ ಅವರ ನಿಧನದ ಹಿನ್ನೆಲೆಯಲ್ಲಿ ಅವರಿಗೆ ಗೌರವಪೂರ್ವಕವಾಗಿ ಬುಧವಾರ ತರಗತಿಗಳು ನಡೆಯಲಿಲ್ಲ. ಕನ್ನಡ ಸಾಹಿತ್ಯ ಪರಿಷತ್, ರೋಟರಿ ಕ್ಲಬ್, ಸೆಂಟ್ ಜಾನ್ ಆಂಬ್ಯುಲೆನ್ಸ್, ಕನ್ನಡ ಸಂಘರ್ಷ ಸಮಿತಿ, ಚುಟುಕು ಸಾಹಿತ್ಯ ಪರಿಷತ್, ಭಾರತ್ ಸೇವಾದಳ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ ನಲ್ಲಿ ಸೇವೆ ಸಲ್ಲಿಸಿದ್ದರು. ಹೆಗ್ಡೆ ಅವರು ಕನ್ನಡ ಮಾಧ್ಯಮದಲ್ಲಿ ಪ್ರಗತಿ ಶಾಲೆ ಪ್ರಾರಂಭಿಸಿ ಬಡ, ಮಧ್ಯಮ ವರ್ಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದರು. ಡಾ.ಕೆ.ಪಿ.ಹೆಗ್ಡೆ ಅವರ ನಿಧನಕ್ಕೆ ಸಮಾಜದ ಗಣ್ಯರು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಸಂತಾಪ ವ್ಯಕ್ತಪಡಿಸಿದ್ದಾರೆ.

# ಸಮಾಜಕ್ಕೆ ಪತ್ರಕರ್ತರ ಪಾತ್ರ ಮಹತ್ತರ

## ಮಾಧ್ಯಮ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಜಿ.ಎಂ.ರಾಜಶೇಖರ್ ಹೇಳಿಕೆ

ಎಚ್.ಡಿ.ಕೋಟೆ: ಬರವಣಿಗೆಯ ಮೂಲಕ ಪತ್ರಕರ್ತರು ಎಂದು ಗುರುತಿಸಿಕೊಳ್ಳಬೇಕೆ ಹೊರತು ಪ್ರಚಾರದಿಂದಲ್ಲ. ಪತ್ರಕರ್ತರು ವಿಷಯದ ಆಳಕ್ಕಿಳಿದು ನೈಜತೆಯ ಸುದ್ದಿ ಮಾಡಬೇಕು ಎಂದು ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಜಿ.ಎಂ.ರಾಜಶೇಖರ್ ತಿಳಿಸಿದರು.

ಯರಹಳ್ಳಿ–ಹ್ಯಾಂಡ್ ಪೋಸ್ಟ್ ಸಮೀಪದ ತಾರಕ ಫಂಕ್ಷನ್ ಹಾಲ್ ನಲ್ಲಿ ನಡೆದ ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘ ಎಚ್.ಡಿ.ಕೋಟೆ ಹಾಗೂ ಸರಗೂರು ಶಾಖೆಯ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿ, ಸರ್ಕಾರದಲ್ಲಿ ಭ್ರಷ್ಟಾಚರ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಇದನ್ನು ನಿಯಂತ್ರಿಸುವಲ್ಲಿ ಅಧಿಕಾರಿಗಳು ಹಾಗೂ ಪತ್ರಕರ್ತರ ಪಾತ್ರ ಬಹಳ ಮಹತ್ತರವಾಗಿದೆ ಎಂದರು.

ಯುವ ಪೀಳಿಗೆ ಸೇವಾ ಮನೋಭಾವದಿಂದ ಪತ್ರಿಕೋದ್ಯಮಕ್ಕೆ ಬರಬೇಕು. ಇತ್ತೀಚೆಗೆ ಎಲ್ಲ ವರ್ಗಗಳು ಕಲುಷಿತಗೊಂಡಿವೆ. ಅವುಗಳನ್ನು ಸರಿ ದಾರಿಗೆ ತರುವ ಜವಾಬ್ದಾರಿ ಪತ್ರಕರ್ತರ ಮೇಲಿರುವುದರಿಂದ ಬಹಳ ಎಚ್ಚರಿಕೆಯಿಂದ ಕೆಲಸ ಮಾಡಬೇಕು. ಸಮಾಜ ಸೇವೆಯ ಮೂಲಕ ಪತ್ರಕರ್ತರು ಸಾರ್ವಜನಿಕರೊಂದಿಗೆ ಬೆರೆಯುತ್ತಿದ್ದಾರೆ. ಸುದ್ದಿ ಪ್ರಸಾರದ ಒತ್ತಡದಲ್ಲಿ ಕಟುಂಬದೊಂದಿಗೆ ಬೆರೆಯಲು ಸಾಧ್ಯವಾಗುತ್ತಿಲ್ಲ. ಸರ್ಕಾರದಿಂದ ಪತ್ರಕರ್ತರಿಗೆ ಹಲವು ಸೌಲಭ್ಯಗಳನ್ನು ನೀಡಲಾಗುತ್ತಿದೆ. ಆದರೆ, ಕೆಲವು ಷರತ್ತುಗಳನ್ನು ವಿಧಿಸಲಾಗುತ್ತಿದೆ ಇವುಗಳನ್ನು ಸಡಿಲಗೊಳಿಸಲು ಸರ್ಕಾರದ ಮಟ್ಟದಲ್ಲಿ ಹೋರಾಟ ಮಾಡಲಾಗುತ್ತಿದೆ ಎಂದರು.



ಪತ್ರಕರ್ತರು ಸೇವಾ ಮನೋಭಾವದಿಂ ಕೆಲಸ ಮಾಡುವುದರ ಜೊತೆಗೆ ಒತ್ತಡದಿಂದ ಕಾರ್ಯ ನಿಭಾಯಿಸಬೇಕಿದೆ. ತಮ್ಮ ಸೇವೆಯ ಅವಧಿಯಲ್ಲು ಅನೇಕ ಕಷ್ಟ, ಎಲ್ಲ ತೊಡಕುಗಳನ್ನು ನಿಭಾಯಿಸುಕೊಂಡು ಸಮಾಜವನ್ನು ತಿದ್ದುವ ಕೆಲಸ ಮಾಡುತ್ತಿರುವ ಪತ್ರಕರ್ತರಿಗೆ ಹಲವು ರೀತಿಯ ತೊಂದರೆಗಳಿವೆ ಇವುಗಳನ್ನು ನಿವಾರಿಸುವ ನಿಟ್ಟಿನಲ್ಲಿ ರಾಜ್ಯ ಸಂಘ ಕಾರ್ಯಪ್ರವೃತ್ತವಾಗಿದೆ. ರಾಜ್ಯದ 28ಜಿಲ್ಲೆಯಲ್ಲಿ ಸಂಘ ಸಕ್ರಿಯವಾಗಿದೆ ಎಂದು ಹೇಳಿದರು.

ಎಚ್.ಡಿ.ಕೋಟೆ ತಹಸಿಲ್ದಾರ್ ಶ್ರೀನಿವಾಸ್ ಮಾತನಾಡಿ, ಸಮಾಜದಲ್ಲಿನ ಸರಿ, ತಪ್ಪುಗಳ ಅನಾವರಣ ಮಾಡುವ ಮಹತ್ತರ ಜವಾಬ್ದಾರಿಯನ್ನು ಪತ್ರಕರ್ತರು ಹೊಂದಿದ್ದಾರೆ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ನಂತರ ಪತ್ರಿಕಾರಂಗ ರಂಗಕ್ಕೆ ಶಾಸನ ಬದ್ಧ ಅಧಿಕಾರ ನೀಡಲಾಗಿದೆ. ಜನರು ಪತ್ರಿಕೆಯಲ್ಲಿ ಬರುವ ಸುದ್ದಿಗಳನ್ನು ಜನರು ನಂಬುವುದರಿಂದ ಬಹಳ ಎಚ್ಚರಿಕೆಯಿಂದ ಪತ್ರಕರ್ತರು ಸುದ್ದಿ ಮಾಡಬೇಕು ಎಂದರು.

ರಾಜ್ಯ ಉಪಾಧ್ಯಕ್ಷ ಕೃಷ್ಣನ್, ಕಾರ್ಯದರ್ಶಿಗಳಾದ ಮಂಜುನಾಥ್ ಹಾಗೂ ವಸಂತ್ ಕುಮಾರ್, ಎಚ್.ಡಿ.ಕೋಟೆ– ಸರಗೂರು ಅಧ್ಯಕ್ಷ ರಮೇಶ್ ಕೋಟೆ, ಉಪಾಧ್ಯಕ್ಷ ಸೋಮೇಶ್, ಕಾರ್ಯದರ್ಶಿ ಶಿವಲಿಂಗ, ಖಜಾಂಚಿ ರಘುರಾಮ್, ನಿರ್ದೇಶಕರಾದ ಉಮೇಶ್, ಶಿವಕುಮಾರ್, ಶ್ರೀಕಂಠ ಈಶ್ವರ್, ಮುರುಳೀಧರ, ಮಹದೇವಸ್ವಾಮಿ, ಕಬಿನಿ ಗೋವಿಂದರಾಜು, ತಿಮ್ಮರಾಜು, ಲಾವಣ್ಯ, ರಮ್ಯಾ ಸೇರಿದಂತೆ ತಾಲೂಕಿನ ಎಲ್ಲ ಸಂಘಟನೆಗಳ ಮುಖಂಡರು ಇದ್ದರು.

> **ನಾವು ಯಾರ ಪರವೂ ಅಲ್ಲ. ವಿರೋಧವು ಅಲ್ಲ. ಬಡವರ, ಧೀನದಲಿತರ, ನೊಂದವರ ಧ್ವನಿಯಾಗಿ ಕೆಲಸ ಮಾಡಲಿದ್ದೇವೆ. ಅರ್ಹ ಫಲಾನುಭವಿಗಳಿಗೆ ಸವಲತ್ತುಗಳನ್ನು ದೊರಕಿಸುವ ನಿಟ್ಟಿನಲ್ಲಿ ನಮ್ಮ ಸಂಘ ಕೆಲಸ ಮಾಡಲಿದೆ. ಪತ್ರಕರ್ತರ ಸವಲತ್ತುಗಳಿಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು.**
>
> **ರಮೇಶ್ ಕೋಟೆ** ಅಧ್ಯಕ್ಷ, ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘ.

> **ಸಾಮಾಜಿಕ ಜವಾಬ್ದಾರಿ ಮೈಗೂಡಿಸಿಕೊಂಡು ಪತ್ರಕರ್ತರು ಕೆಲಸ ಮಾಡಬೇಕು. ಸ್ಥಳೀಯವಾಗಿ ಕೆಲವು ಮಾಹಿತಿಗಳು ನಮಗೆ ಲಭ್ಯವಿಲ್ಲದಿದ್ದಾಗ, ಪತ್ರಕರ್ತರು ತಿಳಿಸುತ್ತಾರೆ. ಆ ಮೂಲಕ ನಾವು ಹಲವು ಕೆಲಸ, ಕಾರ್ಯಗಳನ್ನು ಅವರೊಟ್ಟಿಗೆ ಮಾಡಿದ್ದೇವೆ. ಎಲ್ಲ ವಿದ್ಯಮಾನಗಳ ಅರಿವು ಪ್ರತಿಯೊಬ್ಬರಿಗೂ ಇರಬೇಕಾಗಿರುವುದರಿಂದ ಪತ್ರಕರ್ತರು ಸಮಯದ ನಿಗದಿಯಿಲ್ಲದೆ ದಿನದ 24 ಗಂಟೆಯೂ, ಹಬ್ಬ–ಹರಿದಿನಗಳ ಪರಿವಿಲ್ಲದೆ, ಸಂಭ್ರಮವಿಲ್ಲದೆ ಸಮಾಜಕ್ಕೆ ಮಾಹಿತಿ ನೀಡುತ್ತಿದ್ದಾರೆ.**
>
> **–ಎಸ್. ಗಂಗಾಧರ್** ಆರಕ್ಷಕ ನಿರೀಕ್ಷಕ, ಹೆಚ್.ಡಿ.ಕೋಟೆ.

> **ಇತ್ತೀಚಿನ ದಿನಗಳಲ್ಲಿ ನ್ಯೂಸ್ ಚಾನಲ್ ಗಳು ಹೆಚ್ಚಳವಾಗುತ್ತಿವೆ. ಸುದ್ದಿ ಭಿತ್ತರಿಸುವ ಭರದಲ್ಲಿ ನೈಜತೆಯನ್ನು ಮರೆ ಮಾಚಬಾರದು. ಸರ್ಕಾರದ ಯಾವುದೇ ಕಾರ್ಯಕ್ರಮಗಳು ಜನರಿಗೆ ತಲುಪಬೇಕಾದರೆ, ಅವುಗಳು ಯಶಸ್ಸು ಕಾಣಬೇಕಾದರೆ ಪತ್ರಕರ್ತರ ಪಾತ್ರ ಬಹಳ ಮಹತ್ತರವಾಗಿದೆ. ಪ್ರಸಕ್ತ ವಿದ್ಯಮಾನಗಳ ಅರಿವು ಪತ್ರಕರ್ತರಿಗೆ ಇರುತ್ತದೆ. ಸಮಸ್ಯೆಗಳ ಸುದ್ದಿ ಮಾಡುವಾಗ ಸಂಬಂಧಪಟ್ಟವರ ಮಾಹಿತಿ ಪಡೆದು ಸುದ್ದಿ ಮಾಡಬೇಕು.**
>
> **ಮೋಹನಕುಮಾರಿ**ಸರಗೂರು ತಹಸಿಲ್ದಾರ್

## ಹೆಲ್ಮೆಟ್ ಬಳಕೆಗೆ ನ.28ರಿಂದ ಜಾಗೃತಿ ಮ್ಯಾರಥಾನ್

ಮೈಸೂರು: ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ಅಪಘಾತಗಳಲ್ಲಿ ಸಾವಿಗೀಡಾಗುವವರ ಸಂಖ್ಯೆ ಈಚಿನ ದಿನಗಳಲ್ಲಿ ಹೆಚ್ಚುತ್ತಿದೆ. ಹೀಗಾಗಿ ಬೈಕ್ ಸವಾರರಲ್ಲಿ ಹೆಲ್ಮೆಟ್ ಧರಿಸುವ ಬಗ್ಗೆ ಜಾಗೃತಿ ಮೂಡಿಸಲು ನ. 28 ಮತ್ತು 29 ರಂದು ಜೀವರಕ್ಷ ರೋಟರಿ ಮೈಸೂರು, ಸ್ವಾಮಿ ವಿವೇಕಾನಂದ ಯೂತ್ ಮೂವ್ಮೆಂಟ್ ಸಂಯುಕ್ತಾಶ್ರಯದಲ್ಲಿ ವಾರ್ಷಿಕ ಬೈಕಥಾನ್ ಆಯೋಜಿಸಲಾಗಿದೆ ಎಂದು ರೋಟರಿ ಅಧ್ಯಕ್ಷ ರವಿಶಂಕರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನ. 28 ರಂದು ಬೆಳಗ್ಗೆ 7ಕ್ಕೆ ಬಸವನಗುಡಿಯಲ್ಲಿ ಹಸಿರು ನಿಶಾನೆ ತೋರಲಾಗುವುದು, ನಂತರ ಅದು ಕನಕಪುರ ಮುಖ್ಯ ರಸ್ತೆ, ಮಳವಳ್ಳಿ ಮೂಲಕ ರಾತ್ರಿ 8ಕ್ಕೆ ಮೈಸೂರು ತಲುಪಲಿದೆ. ನ. 29 ರ ಬೆಳಗ್ಗೆ 7ಕ್ಕೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಮತ್ತೆ ಹಸಿರು ನಿಶಾನೆ ತೋರಿದ ಬಳಿಕ, ನಂಜನಗೂಡು, ಬೇಗೂರು, ಗುಂಡ್ಲುಪೇಟೆ ತಲುಪಲಿದೆ ಎಂದರು. ದಾರಿಯುದ್ದಕ್ಕೂ ಸಾರ್ವಜನಿಕರಿಗೆ ಸೀಟ್ ಬೆಲ್ಟ್ ಧರಿಸುವುದು, ಹೆಲ್ಮೆಟ್ ಧರಿಸುವುದರಿಂದ ಆಗುವ ಪ್ರಯೋಜನದ ಬಗ್ಗೆ ಅರಿವು ಮೂಡಿಸಲಾಗುವುದೆಂದರು. ಇನ್ನಿತರ ಪದಾಧಿಕಾರಿಗಳಾದ ತೇಜಸ್ವಿನಿ, ಚೇತನ್, ಜಸ್ವಂತ್, ಡಾ. ಪ್ರಶಾಂತ್ ಇದ್ದರು.



## ಏಕರೂಪದ ಕಬ್ಬು ದರ ನಿಗದಿಗೆ ಆಗ್ರಹ



ಮೈಸೂರು: ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದ ಕಬ್ಬು ಬೆಳೆಗಳಿಗೆ ಏಕರೂಪ ದರ ನಿಗದಿಗೊಳಿಸಬೇಕು ಎಂದು ಕರ್ನಾಟಕ ಕಬ್ಬು ಬೆಳೆಗಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ಎಲ್. ಭರತ್‌ರಾಜ್ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕಬ್ಬಿನ ಬೆಲೆಯಲ್ಲಿ ಏಕರೂಪ ಬೆಲೆ ನಿಗದಿಗೊಳಿಸಿ ಕಟಾವು ಮತ್ತು ಸಾಗಾಣಿಕೆ ವೆಚ್ಚ ಕಳೆದು ಪ್ರತಿ ಟನ್‌ಗೆ 3200 ರೂ., ಅಥವಾ ಕಟಾವು ಮತ್ತು ಸಾಗಾಣಿಕೆ ವೆಚ್ಚ ಸೇರಿಸಿ ಪ್ರತಿ ಟನ್‌ಗೆ 4 ಸಾವಿರ ರೂ. ರಿಕವರಿಗೆ ಮಾನದಂಡ ಕೈಬಿಟ್ಟು ರಾಜ್ಯದಾದ್ಯಂತ ಏಕರೂಪ ದರ ನಿಗದಿಗೊಳಿಸಬೇಕೆಂದು ತಮ್ಮ ಸಂಘ ಆಗ್ರಹಿಸುತ್ತದೆ ಎಂದರು. ರಾಜ್ಯದಲ್ಲಿ ಕಬ್ಬು ಬೆಳೆಗಾರರ ಹೋರಾಟ ತೀವ್ರವಾದಾಗ ರಾಜ್ಯ ಸರ್ಕಾರ ಮಧ್ಯ ಪ್ರವೇಶ ಮಾಡಿ ಟನ್ ಕಬ್ಬಿಗೆ ಕಟಾವು ಮತ್ತು ಸಾಗಾಣಿಕೆ ವೆಚ್ಚ ಕಳೆದು 3200 ರೂ. ಹಾಗೂ 3300 ರೂ. ನಿಗದಿ ಪಡಿಸಿದೆ. ಆದರೆ ಈ ದರವನ್ನು ದಕ್ಷಿಣ ಕರ್ನಾಟಕ ಜಿಲ್ಲೆಗಳ ಬೆಳೆಗಾರರಿಗೆ ನೀಡದೇ ತಾರತಮ್ಯ ಮಾಡಲಾಗುತ್ತಿದೆ. ಈ ರೀತಿ ಕಬ್ಬು ಬೆಳೆಗಾರರನ್ನು ಒಡೆದು ಆಳುವ ನೀತಿ ಅನುಸರಿಸಲಾಗುತ್ತಿದೆ. ಇದು ಸರಿಯಲ್ಲ. ಉತ್ತರ ಕನಾಟಕದ ಕಬ್ಬು ಬೆಳೆಗಾರರಿಗೆ ಹೋಲಿಸಿದರೆ ದಕ್ಷಿಣ ಕರ್ನಾಟಕದ ಕಬ್ಬು ಬೆಳೆಗಾರರಿಗೆ ಸುಮಾರು 1 ಸಾವಿರ ರೂ., ನಷ್ಟವುಂಟಾಗುತ್ತಿದೆ. ಆದರೆ ರಾಜ್ಯದ ಎಲ್ಲೆಡೆ ಕಬ್ಬು ಬೆಳೆಯಲು ತಗಲುವ ವೆಚ್ಚ ಒಂದೇ ಆಗಿರುತ್ತದೆ ಎಂದರು.

ನ್ಯಾಯಯುತ ಲಾಭದಾಯಕ ಬೆಲೆ ಎಫ್‌ಆರ್‌ಪಿ ನಿಗದಿ ಪಡಿಸುವಲ್ಲಿಯೂ ಕೇಂದ್ರ ಸರ್ಕಾರ ನಯವಂಚನೆ ಮಾಡಿದೆ. ಇನ್ನು, ಹರಿಯಾಣ, ಉತ್ತರ ಪ್ರದೇಶ, ತಮಿಳುನಾಡುಗಳ ಮಾದರಿಯಲ್ಲಿ ಪ್ರತಿ ಟನ್‌ಗೆ ಸರ್ಕಾರ 500 ರೂ., ಎಸ್‌ಎಪಿ ನಿಗದಿಗೊಳಿಸಬೇಕು. ಈ ಹಿಂದೆ ನಿಗದಿ ಮಾಡಿದ್ದ ಟನ್‌ಗೆ 150 ರೂ.ಗಳ ಬಾಕಿಯನ್ನು ಕೂಡಲೇ ಪಾವತಿಸಬೇಕು. ಕಬ್ಬಿನ ಉಪ ಉತ್ಪನ್ನಗಳಾದ ಮೊಲಾಸಸ್, ಕಾಕಂಬಿ, ಬಗಾಸ್, ಡಿಸ್ಟಿಲರಿ, ಕೋಜೆನ್ ಮೊದಲಾದವುಗಳ ಲಾಭಾಂಶದಲ್ಲಿ ಶೇ. 50 ಪಾಲು ರೈತರಿಗೆ ನೀಡಬೇಕು. ಈ ಬೇಡಿಕೆ ಈಡೇರಿಸದಿದ್ದರೆ ಹೋರಾಟ ನಡೆಸಲಾಗುತ್ತದೆ ಎಮದು ಎಚ್ಚರಿಸಿದರು. ಕರ್ನಾಟಕ ಪ್ರಾಂತ್ಯ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಇನ್ನಿತರ ಮುಖಂಡರಾದ ಚಿಕ್ಕಣ್ಣೇಗೌಡ, ಸತೀಶ್, ಸಣ್ಣ ನಾಯಕ, ಮಾದಪ್ಪ ಇದ್ದರು.

## ಸಾವಯವ ಕೃಷಿ ನಡಿಗೆಗೆ ಆಸಕ್ತರಿಗೆ ಆಹ್ವಾನ

ಮೈಸೂರು: ಪಿರಿಯಾಪಟ್ಟಣ ತಾಲೂಕಿನ ದೊರೆಕೆರೆಯಲ್ಲಿನ ವನಪ್ರಿಯ ಆರ್ಗ್ಯಾನಿಕ್ ಫಾರ್ಮ್ ವತಿಯಿಂದ ಸಾವಯವ ಕೃಷಿ, ಔಷಧ ಸಸ್ಯಗಳ ಅಧ್ಯಯನ, ಸಂರಕ್ಷಣೆ, ಹಸಿರುವ ಪರಿಸರ ವಲಯಗಳಲ್ಲಿ ಸುಂದರ ನಡಿಗೆ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದು ವ್ಯವಸ್ಥಾಪಕ ನಿರ್ದೇಶಕರಾದ ದೀಪ್ತಿ ರಾಜೇಶ್ವರಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಾಂಪ್ರದಾಯಿಕ ಒಳಾಂಗಣ ಆಟ, ಮಣ್ಣಿನ ಪಾತ್ರೆ ತಯಾರಿಕೆ ತರಬೇತಿ, ಮೀನು ಸಾಕುವಿಕೆ, ಅವುಗಳ ಸಂರಕ್ಷಣೆ, ಪಾರಂಪರಿಕ ಆಹಾರ ತಯಾರಿಕೆ ಮೊದಲಾದವುಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಹೀಗಾಗಿ ಆಸಕ್ತರು ಹೆಚ್ಚಿನ ಮಾಹಿತಿಗೆ ದೂ. 89705 52994 ನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು. ಡಾ.ಎಂ.ಜಿ.ಆರ್ ಅರಸ್, ಕವಿತಾ, ಉದಯ್ ಅರಸ್, ಸಂತೋಷ್ ಇದ್ದರು.



## ಮೃಗಾಲಯದಲ್ಲಿ ರಾಜನ್ ನಿಧನ

ಮೈಸೂರು: ಮೃಗಾಲಯದ 26 ವರ್ಷ 5 ತಿಂಗಳ "ರಾಜನ್" ಎಂಬ ಗಂಡು ಕೇಪ್ ಬಫಲೋ ನಿಧನ. ಇದನ್ನು 2011ರಲ್ಲಿ ತಿರುವನಂತಪುರ ಮೃಗಾಲಯದಿಂದ ದತ್ತು ಪಡೆಯಲಾಗಿತ್ತು. ಕೇಪ್ ಬಫಲೋ ವೃದ್ಧಾಪ್ಯದ ಕಾರಣ ಬಹು ಅಂಗಾಂಗ ವೈಫಲ್ಯದಿಂದ ಮರಣ ಹೊಂದಿದೆ ಎಂದು ಮೈಸೂರು ಮೃಗಾಲಯವು ಸಂತಾಪ ಸೂಚಿಸಿದೆ.



**ಅನೇಕ ಕಡೆಗಳಲ್ಲಿ ಸಂವಿಧಾನ ದಿನ**

# ನಗರದೆಲ್ಲೆಡೆ ಸಂವಿಧಾನ ಅರ್ಥಪೂರ್ಣ ದಿನಾಚರಣೆ

ಮೈಸೂರು: ಸಾಂಸ್ಕೃತಿನ ನಗರದ ಮೈಸೂರು ವಿವಿ, ಕರಾಮುವಿ, ವಿದ್ಯಾವರ್ಧಕ ಸಿಎಫ್ ಆರ್‌ಐ, ಚೆಸ್ಕಾಂ, ಸಂಗೀತ ವಿವಿ, ದಲಿತ ಸಂಘರ್ಷ ಸಮಿತಿ, ಕಾಂಗ್ರೆಸ್, ಬಿಜೆಪಿ ಸೇರಿ ಅನೇಕ ಕಡೆಗಳಲ್ಲಿ ಸಂವಿಧಾನ ದಿನವನ್ನು ಆಚರಿಸಲಾಯಿತು.

ಬೆಳಿಗ್ಗೆ ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಹೆಚ್ಚುವರಿ ಹಾಗೂ ಜಿಲ್ಲಾ ಸೆಷನ್ಸ್ ನ್ಯಾಯಾಧೀಶ್ ಗುರುರಾಜ್ ಸೋಮಕ್ಕಳವರ್, ಅತಿಥಿಯಾಗಿ ವಿದ್ಯಾವರ್ಧಕ ಸಂಘದ ಗೌರವ ಕಾರ್ಯದರ್ಶಿ ಪಿ.ವಿಶ್ವನಾಥ್, ವಿದ್ಯಾವರ್ಧಕ ಕಾನೂನು ಕಾಲೇಜು ಸಿಎಂಸಿ ಅಧ್ಯಕ್ಷ ಶಿವಲಿಂಗಯ್ಯ ಭಾಗವಹಿಸಿ ಸಂವಿಧಾನದ ಮುನ್ನುಡಿ ಪ್ರಾರ್ಥಿಸಿದರು.

ದಾರಿ ಫೌಂಡೇಶನ್ ವತಿಯಿಂದ ಸಂತ ಫಿಲೋಮಿನಾ ಕಾಲೇಜಿನಲ್ಲಿ ವಿಶ್ರಾಂತ ಕುಲಪತಿ ನಾಗೇಂದ್ರ ಪರಾಶರ ಕಾಲೇಜು ವ್ಯವಸ್ಥಾಪಕ ಡಾ.ಲೂರ್ದು ಪ್ರಸಾದ್ ಜೋಸೆಫ್ ನೇತೃತ್ವದಲ್ಲಿ ವಿಚಾರ ಸಂಕಿರಣ ನಡೆದಿ ಸಂವಿಧಾನದ ಮಹತ್ವ





ಸಾರಿದರು.

ಸಿಎಫ್‌ಟಿಆರ್‌ಐ ಮತ್ತು ಸಿಎಫ್‌ಟಿಆರ್ ಎಸ್ಸಿ, ಎಸ್ಟಿ ನೌಕರರ ಕಲ್ಯಾಣ ಸಂಘದಿಂದ ಚೆಲುವಾಂಬ ಹಾಲ್ ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಮೇಜರ್ ಜನರಲ್ ಎಸ್.ಐ.ಒಂಬತ್ಕೆರೆ ಸಂವಿಧಾನ ಕುರಿತು ತಿಳಿಸಿದರು. ಸಂಘದ ಅಧ್ಯಕ್ಷ ಶಿವಸ್ವಾಮಿ, ಸಿಎಫ್ ಟಿಆರ್‌ಐ ಆಡಳಿತ ನಿಯಂತ್ರಕ ಕೆ.ರವಿಕುಮಾರ್ ಇನ್ನಿತರರು ಇದ್ದರು. ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋದನಾ ಕೇಂದ್ರ ಹಾಗೂ ವಿಸ್ತರಣಾ ಕೇಂದ್ರದಿಂದ ಅಂಬೇಡ್ಕರ್ ಹಾಗೂ ಸಂವಿಧಾನದ ಮುನ್ನುಡಿಯ ಪ್ರತಿಜ್ಞಾ ವಿಧಿ ಭೋಧಿಸಿ ಅಂಬೇಡ್ಕರ್ ಮತ್ತು ಸಂವಿಧಾನ ಕುರಿತು ವಿಚಾರಸಂಕಿರಣ ನಡೆಯಿತು. ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ.ವಲಸೆ ಇನ್ನಿತರರು ಇದ್ದರು.

ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಕಾಂಗ್ರೆಸ್ ಭವನದಲ್ಲಿ ಭಾರತ ಸಂವಿಧಾನ ಬಚಾವೋ ದಿವಸ್ ಅನ್ನು ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ಶಾಸಕ ತನ್ವೀರ್ ಸೇಠ್ ಉದ್ಘಾಟಿಸಿದರು. ವಿಶ್ವಮೈತ್ರಿ ಬುದ್ಧವಿಹಾರದ ಡಾ. ಕಲ್ಯಾಣ ಸಿರಿ ಬಂತೇಜಿ, ಡಾ.ಬಿ.ಜೆ.ವಿಜಯಕುಮಾರ್ ಇನ್ನಿತರರು ಇದ್ದರು. ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಆಯೋಜಿಸಿದ್ದ ಸಂವಿಧಾನ ದಿನವನ್ನು ಸಂಸದ ಯಧುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು. ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಶಾಸಕ ಶ್ರೀವತ್ಸ ಮೊದಲಾದವರು ಉಪಸ್ಥಿತರಿದ್ದರು.

# ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ



ಗುಂಡ್ಲುಪೇಟೆ: ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಜೊತೆಗೆ ಸಂಸ್ಕಾರವು ಮುಖ್ಯ ಎಂದು ಅಂತರರಾಷ್ಟ್ರೀಯ ಪ್ರಖ್ಯಾತ ತಬಲ ವಾದಕರಾದ ವಿದ್ವಾನ್ ರಘುನಾಥ್ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಾಂಸ್ಕೃತಿಕ ಕ್ರೀಡೆ ರಾಸೇಯೋ, ರೋವರ್ಸ್ ಮತ್ತು ರೇಂಜರ್ಸ್, ರೆಡ್‌ಕ್ರಾಸ್ ಹಾಗೂ ವಿವಿಧ ಸಮಿತಿಯ ವತಿಯಿಂದ ಆಯೋಜಿಸಲಾಗಿದ್ದ ಕನ್ನಡ ರಾಜ್ಯೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪರಿಶ್ರಮದಿಂದ ಜೀವನ ಸಾರ್ಥಕ ಪಡಿಸಿಕೊಳ್ಳುವುದು ನಿಮ್ಮ ಕರ್ತವ್ಯ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಮದನಕುಮಾರ್ ಎ.ಆರ್. ಮಾತನಾಡಿ, ವಿದ್ಯಾರ್ಥಿಗಳಿಗೆ ಶಿಕ್ಷಣ ಎಷ್ಟು ಮುಖ್ಯವೋ ಹಾಗೆ ಸಂಸ್ಕೃತಿಯು ಅಷ್ಟೆ ಮುಖ್ಯ, ಕಲೆ ನಮ್ಮ ದೇಶದ ಸಂಪತ್ತು, ವಿದ್ಯಾರ್ಥಿಗಳು ಆತ್ಮ ವಿಶ್ವಾಸದಿಂದ ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರಿಂದ ತಮ್ಮ ಪ್ರತಿಭೆಯನ್ನು ಹೊರ ಹಾಕಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಂಚಾಲಕ ವಿಜಯ್ ಕುಮಾರ್, ಕಛೇರಿ ಅಧೀಕ್ಷಕ ಪುಟ್ಟಬುದ್ಧಿ ಎನ್, ಕ್ರೀಡಾ ಸಂಚಾಲಕ ಪುಟ್ಟರಾಜು ಎಸ್.ಜೆ, ರಾ.ಸೇ.ಯೋ ಸಂಚಾಲಕ ಕೃಷ್ಣಮೂರ್ತಿ, ರೋವರ್ಸ್, ಸಂಚಾಲಕ ಡಾ. ತುಳಸಿರಾಮ್ ಎಸ್, ರೇಂಜರ್ಸ್ ಘಟಕದ ಸಂಚಾಲಕ ದಿವ್ಯಾಭಾರತಿ ಜೆ, ರೆಡ್‌ಕ್ರಾಸ್ ಘಟಕದ ಸಂಚಾಲಕ ಸಂಯುಕ್ತ ಸಿಂಗ್.ಟಿ, ಗ್ರಂಥಪಾಲಕ ಶ್ರೀನಿವಾಸನಾಯಕ, ಡಾ. ರಶ್ಮಿ ಜೆ ಆರ್, ಲಕ್ಷ್ಮೀ ಎಸ್ ಎಸ್ ಹಾಗೂ ಎಲ್ಲಾ ಅಧ್ಯಾಪಕರು ಅಧ್ಯಾಪಕೇತರ ವರ್ಗದವರು ಇದ್ದರು.

# ಆರ್‌ಎಸ್‌ಎಸ್ ನಡೆ ವಿರೋಧಿಸಿ ಪ್ರತಿಭಟನೆ

ಚಾಮರಾಜನಗರ, ಆರ್‌ಎಸ್‌ಎಸ್‌ನ ಕಾನೂನು ಬಾಹಿರ ನಡೆಯನ್ನು ವಿರೋಧಿಸಿ ಹಾಗೂ ಸಚಿವ ಪ್ರಿಯಾಂಕ ಖರ್ಗೆ ಅವರನ್ನು ಬೆಂಬಲಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಡಾ.ಡಿ.ಜಿ.ಸಾಗರ ಬಣದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಸಮಾವೇಶ ಗೊಂಡ ಪ್ರತಿಭಟನಾನಿರತರು ಡಾ.ಬಿ.ಆರ್.ಅಂಬೇಡ್ಕರ್ ರವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.ಆರ್ ಎಸ್‌ಎಸ್ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಡಾ.ಡಿ.ಜಿ.ಸಾಗರ ಬಣದ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ ಮಾತನಾಡಿ, ಭಾರತದ ಸಂವಿಧಾನ, ಪ್ರಜಾಪ್ರಭುತ್ವ, ಒಕ್ಕೂಟ ವ್ಯವಸ್ಥೆ ಗಂಡಾಂತರದಲ್ಲಿದೆ. ಸರ್ವಾಧಿಕಾರವು ಪ್ರಜಾಪ್ರಭುತ್ವದ ಮುಖವಾಡ ಧರಿಸಿ ಅಟ್ಟಹಾಸ ಮೆರೆಯುತ್ತಿದೆ. ಮನುವಾದ, ಕೋಮುವಾದ, ಜಾತಿವಾದಗಳು ಸಮಾಜದಲ್ಲಿ ದ್ವೇಷ, ಪ್ರತಿಕಾರ, ಮತ್ಸರ, ಹಿಂಸೆಯ ವಿಷವನ್ನು ಬಿತ್ತುತ್ತ ಸಾಮಾಜಿಕ ಸ್ವಾಸ್ಥ್ಯವನ್ನು ಹಾಳುಮಾಡುತ್ತಿವೆ.




ಮತೀಯವಾದಿ, ರಾಷ್ಟ್ರವಿರೋಧಿ, ಸಂವಿಧಾನ–ಪ್ರಜಾಪ್ರಭುತ್ವ ವಿರೋಧಿ ಮನುವಾದಿ ಆರ್.ಎಸ್.ಎಸ್. ಸಂಘಟನೆಯು ತನ್ನ ಶತಮಾನೋತ್ಸವ ಸಂದರ್ಭದಲ್ಲಿ ಮನುಧರ್ಮಶಾಸ್ತ್ರವನ್ನು ಭಾರತದ ಕಾನೂ ನನ್ನಾಗಿಸಲು ಹೊಂಚು ಹಾಕುತ್ತಿದೆ ಎಂದು ಆರೋಪಿಸಿದರು.

ಸಾಮಾಜಿಕ ಜಾಲತಾಣಗಳಲ್ಲಿ ಪ್ರಿಯಾಂಕ್ ಖರ್ಗೆ ಅವರಿಗೆ, ಅವರ ಕುಟುಂಬದ ಸದಸ್ಯರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತ, ಜೀವಬೆದರಿಕೆ ಹಾಕಲಾಗುತ್ತಿವೆ. ಪ್ರಿಯಾಂಕ್ ಖರ್ಗೆ ಅವರ ರಾಜಕೀಯ ಏಳಿಗೆಯನ್ನು ಸಹಿಸದ ಮನುವಾದಿಗಳು ಅವರು ದಲಿತ ಸಮುದಾಯಕ್ಕೆ ಸೇರಿದವರು ಎನ್ನುವ ಕಾರಣಕ್ಕಾಗಿ ಪದೇಪದೇ ಅವರನ್ನು, ಅವರ ತಂದೆಯವರಾದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಉದ್ದೇಶಪೂರ್ವಕವಾಗಿ ಅವಮಾನಿಸಲಾಗುತ್ತಿದೆ. ಇದು ಖಂಡನಾರ್ಹ, ಮನುವಾದಿಗಳ ಈ ಧೋರಣೆಯು ದಲಿತ ಸಮುದಾಯ ವಿರೋಧಿಯಾಗಿರುವುದರಿಂದ, ದಲಿತ ಸಮುದಾಯವು ಸಂಘಟನಾತ್ಮಕವಾಗಿ ಕೋಮುವಾದಿ ಆರ್.ಎಸ್.ಎಸ್. ಸಂಘಟನೆಯನ್ನು ಪ್ರತಿರೋಧಿಸುತ್ತದೆ ಎಂದರು. ಸಂಘಟನಾ ಸಂಚಾಲಕ ರಂಗಸ್ವಾಮಿ, ಖಜಾಂಚಿ ರವಿಕುಮಾರ್, ತಾಲೂಕು ಅಧ್ಯಕ್ಷ ಕೊತ್ತಲವಾಡಿ ಶಿವು, ಕೊಳ್ಳೇಗಾಲ ತಾಲ್ಲೂಕು ಅಧ್ಯಕ್ಷ ಮರಿಸ್ವಾಮಿ, ಯಳಂದೂರು ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ, ಪುಟ್ಟಬಸಮ್ಮ, ಚಿಕ್ಕತಾಯಮ್ಮ, ನಾಗಮ್ಮ, ಹಾಜರಿದ್ದರು.

# ಅಂಧಕಾರಕ್ಕೆ ಸಂವಿಧಾನದಿಂದ ಮುಕ್ತಿ

## ಬಂಜಗೆರೆ ಜಯಪ್ರಕಾಶ್ ಹೇಳಿಕೆ । ನಗರಸಭೆಯಲ್ಲಿ ಸಂವಿಧಾನ ಪೀಠಿಕೆ ಫಲಕ ಅನಾವರಣ

ರಾಮನಗರ: ಭಾರತದಲ್ಲಿ ಸುಮಾರು 2 ಸಾವಿರ ವರ್ಷಗಳ ಕಾಲ ಕ್ರೂರವಾದ ಸಾಮಾಜಿಕ ನಿಯಮಗಳ ಆಚರಣೆ ಇತ್ತು. ಹೀಗೆ ಅಂಧಕಾರದಲ್ಲಿದ್ದ ಭಾರತಕ್ಕೆ ಮುಕ್ತಿ ಸಿಕ್ಕಿದ್ದು ಸಂವಿಧಾನ ಜಾರಿಯಾದ ನಂತರ ಎಂದು ಸಾಹಿತಿ ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್ ಅಭಿಪ್ರಾಯಪಟ್ಟರು.

ನಗರದ ನಗರಸಭೆ ಕಚೇರಿ ಆವರಣದಲ್ಲಿ ಸಂವಿಧಾನ ಪೀಠಿಕೆ ಅನಾವರಣ ಸಮಾರಂಭದಲ್ಲಿ ಅವರು ಮಾತನಾಡಿದರು. ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ನೀಡಿದ ಸಂವಿಧಾನ ಎಂಬ ಶ್ರೇಷ್ಠ ಗ್ರಂಥದಿಂದ ಭಾರತದ ಕೀರ್ತಿ ಪ್ರಪಂಚದಲ್ಲಿ ಬೆಳಗುತ್ತಿದೆ ಎಂದರು. ಮನು ಶಾಸ್ತ್ರದ ಪ್ರಕಾರ ಮನುಷ್ಯರು ಮಾಡುವ ಅಪರಾಧ, ಮನುಷ್ಯರ ಮೇಲೆ ಮನುಷ್ಯರು ಮಾಡುವ ಅಪರಾಧಕ್ಕೆ ಅವರ ಹುಟ್ಟಿನಿಂದ ಶಿಕ್ಷೆ ನಿಗದಿಯಾಗಿತ್ತು. ಬ್ರಾಹ್ಮಣರು, ಶೂದ್ರರು, ದಲಿತರು, ಕ್ಷತ್ರಿಯರಿಗೆ ಬೇರೆ ಬೇರೆ ರೀತಿಯ ಶಿಕ್ಷೆಗಳನ್ನು ವಿಧಿಸಲಾಗುತ್ತಿತ್ತು. ಶೂದ್ರರು, ದಲಿತರು ಹಾಗೂ ಮಹಿಳೆಯರಿಗೆ ಓದುವ ಹಕ್ಕಿರಲಿಲ್ಲ. ಕೆಲ ಜಾತಿಗಳು ಊರಿನಿಂದ ಹೊರಗೆ ಬದುಕುವ, ರಸ್ತೆಗಳಲ್ಲಿ ಓಡಾಡಬಾರದಿತ್ತು. ಇನ್ನೂ ಕೆಲ ಜಾತಿಯವರನ್ನು ನೋಡುವುದನ್ನೂ ನಿಷೇಧ ಮಾಡಿದ್ದ ಕಾಲವೂ ಇತ್ತು. ಮನುಷ್ಯರನ್ನು ಸಮಾನವಾಗಿ ನೋಡದೆ, ಪ್ರಾಣಿಗಳಿಗಿಂತಲೂ ಕೀಳಾಗಿ ನೋಡುವಂತಹ ಸಾಮಾಜಿಕ ನೀತಿಗಳನ್ನು ಅನುಸರಿಸಲಾಗುತ್ತಿತ್ತು.

ಮನುಧರ್ಮ ಶಾಸ್ತ್ರ ಎಂದು ಕರೆಯಲ್ಪಡುವ ಗ್ರಂಥ, ಅದನ್ನು ಜನರು ಬರೆದುಕೊಂಡು, ತಮಗೆ ತಾವೇ ಅರ್ಪಿಸಿಕೊಂಡಿದ್ದಲ್ಲ. ಅದನ್ನು ಗುಪ್ತರು ಜಾತಿವಾದಿ ವ್ಯವಸ್ಥೆ ನೆಲೆಗೊಳಿಸಲು, ವರ್ಣಾಶ್ರಮ ಪದ್ಧತಿ ಅನುಸರಿಸುವ ಮೂಲಕವಾಗಿ ಜನರನ್ನು ಮೇಲು ಕೀಳಾಗಿ ವಿಂಗಡಿಸಲು ಬರೆಸಿದರು. ಇದನ್ನೇ ಭಾರತದ ಅಧಿಕೃತವಾಗಿರುವ ಸಾಮಾಜಿಕ ಸೂತ್ರ ಎಂದು ಹೇಳಿಕೊಂಡಿದ್ದರು. ಅದರ ಪ್ರಕಾರವಾಗಿ ಯಾರೊ ತಲೆ ಭಾಗದಲ್ಲಿ, ಇನ್ಯಾರೊ ಪಾದದ ಭಾಗದಲ್ಲಿ ಇರುತ್ತಾರೆ. ತಲೆಯ ಭಾಗದಲ್ಲಿರುವವರು ಆಡಳಿತಾತ್ಮಕವಾಗಿ ಮೇಲಿರಬೇಕು. ಅವರು ಹೇಳಿದಂತೆಯೇ ಸಮಾಜ ನಡೆಯಬೇಕಿತ್ತು. ದೇವರ ಪೂಜೆಯಿಂದ ಹಿಡಿದು ಮಂತ್ರಿಗಳಾಗುವುದು, ರಾಜಪುರೋಹಿತರಾಗುವುದು, ರಾಜ ಗುರುಗಳಾಗುವುದು ಎಲ್ಲವೂ ಮೇಲ್ಜಾತಿಯವರ ಹಕ್ಕು. ಕೆಳ ಜಾತಿಯವರಿಗೆ ಹಕ್ಕಿಲ್ಲ ಎಂದು ಪ್ರತಿಪಾದಿಸಲಾಗಿತ್ತು ಎಂದು ಕಿಡಿಕಾರಿದರು.




### ರಾಮನಗರ ನಗರಸಭೆ ಎಲ್ಲರಿಗೂ ಮಾದರಿ

**ಸಂವಿಧಾನ ಪೀಠಿಕೆ ಫಲಕ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅನೇಕ ಗಣ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ ವೇಳೆ ರಾಜ್ಯದ ಬೇರೆ ಯಾವುದೇ ನಗರಸಭೆಗಳಲ್ಲಿ ಸಂವಿಧಾನ ಪೀಠಿಕೆ ಮತ್ತು ಅಂಬೇಡ್ಕರ್ ಪುತ್ಥಳಿ ಅನಾವರಣ ಮಾಡುವ ಕೆಲಸ ಮಾಡಿಲ್ಲ. ಹೀಗಾಗಿ ರಾಮನಗರ ನಗರಸಭೆ ರಾಜ್ಯಕ್ಕೆ ಮಾದರಿಯಾಗಿದೆ ಎಂದು ಅಭಿಪ್ರಾಯ ಪಟ್ಟರು.**

### ಕಾನೂನುಗಳಿಗೆ ಸಂವಿಧಾನದಿಂದ ಶಾಸನ ಬದ್ಧ ಮಾನ್ಯತೆ

1947ರ ಆಗಸ್ಟ್ 15ರ ಮೊದಲಿದ್ದ ಭಾರತ ಮತ್ತು ಅದರ ಆಶಯ, ಆಗ ನಡೆಯುತ್ತಿದ್ದ ಕಾನೂನುಗಳೇ ಬೇರೆಯಾಗಿತ್ತು. ಅದಕ್ಕೆ ಬದಲಿಯಾಗಿ ನಮಗೆ ನಾವೇ ಅರ್ಪಿಸಿಕೊಂಡಿರುವ ಸಂವಿಧಾನ ಮಹಾ ಕಾನೂನು ಗ್ರಂಥವಾಗಿದೆ. ಸಂವಿಧಾನ ಎಂಬುದು ಕಾನೂನುಗಳ ಕಾನೂನು. ಕಾನೂನುಗಳ ತಾಯಿ. ಭಾರತದಲ್ಲಿ ಯಾವುದೇ ಕಾನೂನು ಆಗಬೇಕಾದರೆ, ಅದಕ್ಕೆ ಶಾಸನ ಬದ್ಧತೆ, ಮಾನ್ಯತೆ ಸಂವಿಧಾನದ ಮೂಲಕವೇ ಸಿಗುತ್ತದೆ. ನಾವುಗಳು ಯಾವುದೇ ಕಾನೂನನ್ನು ಬೇಕಾದರು ಪ್ರಶ್ನಿಸಬಹುದು. ಸಂವಿಧಾನಕ್ಕೆ ಅದು ಬದ್ಧವಾಗಿ ಮತ್ತು ಅನುಸಾರವಾಗಿ ಇದೆಯೇ ಇಲ್ಲವೇ ಎಂಬುದನ್ನು ನೋಡಬೇಕಿದೆ. ಅದರ ಆಧಾರದ ಮೇಲೆ ಸುಪ್ರೀಂ ಕೋರ್ಟ್ ಅಥವಾ ಶಾಸ ಕಾಂಗ ತಾನು ಮಾಡುವ ಕಾನೂನುಗಳನ್ನು ತೀರ್ಮಾನ ಮಾಡಬೇಕಾಗುತ್ತದೆ. ಅಂತಹ ಸಂವಿಧಾನದ ಮಹಾ ಆಲಯ ಕರೆದೊಯ್ಯುವ ಸಂವಿಧಾನದ ಪೀಠಿಕೆ ಬೆಳಕಿನ ದೀವಿಗೆ ರೀತಿ ಇದೆ ಎಂದು ಬಂಜಗೆರೆ ಜಯಪ್ರಕಾಶ್ ತಿಳಿಸಿದರು.

### ಸಂವಿಧಾನ ಪಾಲನೆ ಎಲ್ಲರ ಕರ್ತವ್ಯ ? ಇಕ್ಬಾಲ್ ಹುಸೇನ್

ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಕೊಟ್ಟ ಸಂವಿಧಾನಕ್ಕೆ ಗೌರವ ಕೊಟ್ಟು ಪಾಲನೆ ಮಾಡುವ ಕರ್ತವ್ಯ ನಮ್ಮಗಳ ಮೇಲಿದೆ. ಸಂವಿಧಾನದ ನೆರಳಿನಡಿ ನಾವೆಲ್ಲರೂ ಬದುಕು ನಡೆಸುತ್ತಿದ್ದೇವೆ. ಸಂವಿಧಾನವು ನಾಗರಿಕರಿಗೆ ಮೂಲಭೂತ ಹಕ್ಕುಗಳನ್ನು ನೀಡುವುದರ ಜೊತೆಗೆ, ನಾಗರಿಕರ ಕರ್ತವ್ಯಗಳನ್ನು ಕೂಡ ವಿವರಿಸುತ್ತದೆ ಎಂದರು. ಭಾರತ ಸಂವಿಧಾನ ದೇಶದ ಅತ್ಯುನ್ನತ ಕಾನೂನು ಆಗಿದ್ದು, ಸರ್ಕಾರಿ ಸಂಸ್ಥೆಗಳ ಅಧಿಕಾರ ಮತ್ತು ಜವಾಬ್ದಾರಿಗಳನ್ನು ವ್ಯಾಖ್ಯಾನಿಸುತ್ತದೆ, ನಾಗರಿಕರ ಹಕ್ಕುಗಳನ್ನು ರಕ್ಷಿಸುತ್ತದೆ ಮತ್ತು ಆಡಳಿತಕ್ಕೆ ಮಾರ್ಗದರ್ಶನ ಸಹ ನೀಡುತ್ತದೆ. ಇದು ಪ್ರಜಾಪ್ರಭುತ್ವ, ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯದಂತಹ ಮೂಲಭೂತ ಮೌಲ್ಯಗಳ ಮೇಲೆ ಆಧಾರಿತವಾಗಿದೆ ಮತ್ತು ದೇಶದ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯ ಅಡಿಪಾಯವಾಗಿದೆ ಎಂದರು.

### ಸಂವಿಧಾನದ ಮೂಲಕ ಎಲ್ಲರಿಗೂ ಸಮಾನ ಅವಕಾಶ, ಹಕ್ಕು: ಕೆ.ಶೇಷಾದ್ರಿ

ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ (ಶಶಿ) ಮಾತನಾಡಿ, ಪ್ರತಿಯೊಬ್ಬರು ಸಮಾನವಾಗಿ ಬದುಕು ನಡೆಸಲು ಸಂವಿಧಾನ ಅವಕಾಶ ಕೊಟ್ಟಿದೆ. ಕೋಮುವಾದವನ್ನು ಎದುರಿಸುವ ಶಕ್ತಿಯಿರುವುದು ಭಾರತ ಸಂವಿಧಾನಕ್ಕೆ ಮಾತ್ರ. ಹಾಗಾಗಿ ಮುಂದಿನ ಪೀಳಿಗೆಗೆ ಇದರ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ರಾಜ್ಯದಲ್ಲಿಯೇ ಮೊದಲ ಬಾರಿಗೆ ನಗರಸಭೆ ಆವರಣದಲ್ಲಿ ಸಂವಿಧಾನ ಪೀಠಿಕೆ ಅನಾವರಣ ಮಾಡಿದ್ದೇವೆ ಎಂದು ತಿಳಿಸಿದರು. ಅಕ್ಕ ಅಕಾಡೆಮಿಯ ಡಾ.ಶಿವಕುಮಾರ್ ಸಂವಿಧಾನ ಪೀಠಿಕೆ ಭೋದಿಸಿ ಮಾತನಾಡಿದರು. ಮಾಜಿ ಶಾಸಕ ಸಿ.ಎಂ.ಲಿಂಗಪ್ಪ ಮಾತನಾಡಿದರು. ಜಿಲ್ಲಾ ಗ್ಯಾರಂಟಿ ಸಮಿತಿ ಜಿಲ್ಲಾಧ್ಯಕ್ಷ ಕೆ.ರಾಜು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧ್ಯಕ್ಷ ಗಾಣಕಲ್ ನಟರಾಜು, ಕೆಎಸ್‌ಎಂಬಿ ಅಧ್ಯಕ್ಷ ಎಸ್.ಗಂಗಾಧರ್, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಟಿಎಪಿಸಿಎಂಎಸ್ ಅಧ್ಯಕ್ಷ ಸುರೇಶ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೆ.ಸತೀಶ್, ಪ್ರಾಂಶುಪಾಲರ ಸಂಘದ ಜಿಲ್ಲಾಧ್ಯಕ್ಷ ಜಿ.ಶಿವಣ್ಣ, ರೈತ ಹೋರಾಟಗಾರ್ತಿ ಅನುಸೂಯಮ್ಮ, ನಗರಸಭೆ ಉಪಾಧ್ಯಕ್ಷೆ ಆಯಿಷಾಭಾನು, ಸ್ಥಾಯಿ ಸಮಿತಿ ಅಧ್ಯಕ್ಷ ಫೈರೋಜ್ ಪಾಷ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಶೇಖರ್, ಪೌರಾಯುಕ್ತ ಡಾ.ಜಯಣ್ಣ, ದಲಿತ ಸಂಘಟನೆಗಳ ಒಕ್ಕೂಟದ ಸಂಚಾಲಕ ಶಿವಕುಮಾರಸ್ವಾಮಿ, ಹಿಂದುಳಿದ ಒಕ್ಕೂಟದ ಜಿಲ್ಲಾಧ್ಯಕ್ಷ ನಾಗರಾಜು, ಜಿಲ್ಲಾ ಕಾಂಗ್ರೆಸ್ ಸಮಿತಿಯ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ನರಸಿಂಹಯ್ಯ, ಮತ್ತಿತರರು ಉಪಸ್ಥಿತರಿದ್ದರು.

# ಅವಧಿ ಪೂರ್ವ ಜನಿಸಿದ ಶಿಶುಗಳಲ್ಲಿನ ಸಮಸ್ಯೆಗೆ ಚಿಕಿತ್ಸಾ ಸೌಲಭ್ಯವಿದೆ, ಆತಂಕ ಬೇಡ

## ಡಾ.ಶೇಖರ್ ಸುಬ್ಬಯ್ಯ ಹೇಳಿಕೆ । ಕಾಂಗೊರು ಕೇರ್ ಆಸ್ಪತ್ರೆಯಲ್ಲಿ ವರ್ಲ್ಡ್ ಪ್ರಿಮೆಚ್ಯುರ್ ಡೇ ಆಚರಣೆ

ರಾಮನಗರ: ಇಂದು ವಿಶ್ವದಲ್ಲಿ 10 ಜನನಗಳ ಪೈಕಿ ಒಂದು ಶಿಶು ಅವಧಿಗೆ ಮುನ್ನ ಜನಿಸುತ್ತಿದೆ. ಅವಧಿ ಪೂರ್ವ ಜನಿಸಿದ ಶಿಶುಗಳಲ್ಲಿ ಕಂಡುಬರಬಹುದಾದ ಸಮಸ್ಯೆಗಳ ಬಗ್ಗೆ ತಾಯಂದಿರು ಮತ್ತು ನಾಗರೀಕರಲ್ಲಿ ಅರಿವು ಮೂಡಿಸಲು ವಿಶ್ವದೆಲ್ಲಡೆ ಪ್ರೀಮೆಚ್ಯುರ್ ಡೇ ಆಚರಿಸಲಾಗುತ್ತದೆ. ಬಹುಶಃ ರಾಮನಗರದಲ್ಲಿ ಪ್ರಥಮ ಬಾರಿಗೆ ತಮ್ಮ ಆಸ್ಪತ್ರೆಯಲ್ಲಿ ವರ್ಲ್ಡ್ ಪ್ರೀಮೆಚ್ಯುರ್ ಡೇ ಆಚರಿಸಲಾಗುತ್ತಿದೆ ಎಂದು ರಾಮನಗರದ ಕಾಂಗೊರು ಕೇರ್ ಆಸ್ಪತ್ರೆಯ ಸಂಸ್ಥಾಪಕ ಡಾ.ಶೇಖರ್ ಸುಬ್ಬಯ್ಯ ಹೇಳಿದರು.

ನಗರದಲ್ಲಿರುವ ಕಾಂಗೊರು ಕೇರ್ ಆಸ್ಪತ್ರೆಯ ಆವರಣದಲ್ಲಿ ಬುಧವಾರ ವರ್ಲ್ಡ್ ಪ್ರೀಮೆಚ್ಯೂರ್ ಡೇ ಆಚರಣೆಯ ವೇಳೆ ಅವರು ಮಾತನಾಡಿದರು. 36 ವಾರಗಳಿಗೂ ಮುನ್ನ ಜನಿಸುವ ಮಗುವನ್ನು ಅವಧಿ ಪೂರ್ವ ಜನಿಸಿದ ಮಗು ಎಂದು ಕರೆಯಲಾಗುತ್ತದೆ. ಹೀಗೆ ಅವಧಿಗೆ ಮುನ್ನ ಜನಿಸಿದ ಶಿಶುಗಳಲ್ಲಿ

ಶ್ವಾಸಕೋಶದ ಸಮಸ್ಯೆ, ಮೆದುಳಿನಲ್ಲಿ ರಕ್ತಸ್ರಾವ, ಹೃದಯದಲ್ಲಿ ಸಮಸ್ಯೆ ಹೀಗೆ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆಗಳಿವೆ. ತಮ್ಮ ಆಸ್ಪತ್ರೆಯಲ್ಲಿ ಈ ಸಮಸ್ಯೆಗಳಿಗೂ ಚಿಕಿತ್ಸೆ ಲಭ್ಯವಾಗುತ್ತಿದೆ ಎಂದರು.

ಅವಧಿಗೆ ಮುನ್ನ ಜನಿಸಿದ ಮಕ್ಕಳ ವಿಚಾರದಲ್ಲಿ ಆ ಮಕ್ಕಳ ಪೋಷಕರಲ್ಲಿ ಸಾಮಾನ್ಯವಾಗಿ ಆತಂಕ ಇರುತ್ತದೆ. ಈ ದಿನ ತಂದೆ–ತಾಯಂದಿರನೆಲ್ಲ ಆಹ್ವಾನಿಸಿ ಅವಧಿಗೆ ಮುನ್ನ ಜನಿಸುವ ಶಿಶುಗಳಲ್ಲಿ ಕಾಣಿಸಿಕೊಳ್ಳಬಹುದಾದ ಸಮಸ್ಯೆಗಳು, ಅದಕ್ಕೆ ಬೇಕಾಗಿರುವ ಚಿಕಿತ್ಸಾ ವಿಧಾನಗಳು, ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಲಾಗುತ್ತದೆ. ಅವರ ಆತಂಕವನ್ನು ದೂರ ಮಾಡುವ ಉದ್ದೇಶವೂ ಈ ದಿನದ ಆಚರಣೆಗೆ ಇದೆ ಎಂದರು.

ಗರ್ಭ ಧರಿಸಿದ 25–26 ವಾರಗಳ ನಂತರ ವೈದ್ಯಕೀಯವಾಗಿ ಹೆಚ್ಚು ಗಮನ ಹರಿಸಲಾಗುತ್ತದೆ. ಅವಧಿಗೆ ಮುನ್ನ ಜನಿಸುವ ಶಿಶುಗಳಲ್ಲಿ ಕೆಲವೊಂದು ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಹೀಗೆ ಕಾಣಿಸಿಕೊಳ್ಳುವ ಸಮಸ್ಯೆಗಳ ಚಿಕಿತ್ಸೆಗಾಗಿ ಪೋಷಕರು ಬೆಂಗಳೂರು ಸೇರಿದಂತೆ ಮಹಾನಗರಗಳಿಗೆ ಧಾವಿಸುತ್ತಾರೆ. ಹೀಗೆ ಪ್ರಯಾಣಿಸುವಾಗ ಮುಖ್ಯವಾಗಿ ಶಿಶುವಿಗೆ ಸೋಂಕು ತಗುಲಬಹುದು. ಸೋಂಕಿನಿಂದ ಸಮಸ್ಯೆಗಳು ಇನ್ನಷ್ಟು ಗಂಭೀರವಾಗುವ ಸಂದರ್ಭಗಳು ಬರಬಹುದು. ಇದನ್ನೆಲ್ಲ ತಪ್ಪಿಸಲು ರಾಮನಗರದ ಕಾಂಗೊರು ಆಸ್ಪತ್ರೆಯಲ್ಲಿ ನಿಯೋನಾಟಲ್ ಇಂಟೆನ್ಸಿವ್ ಕೇರ್ (ಎನ್.ಐ.ಸಿ) ಘಟಕದ ವ್ಯವಸ್ಥೆ ಸೇರಿದಂತೆ ಅಗತ್ಯ ಚಿಕಿತ್ಸಾ ಸೌಲಭ್ಯಗಳಿವೆ ಎಂದರು. ಇಂತಹ ಸೌಲಭ್ಯ ಪಡೆಯಲು ಆಸ್ಪತ್ರೆಗಳಿಗೆ ಸಾಕಷ್ಟು ವೆಚ್ಚವಾಗುತ್ತದೆ. ಸಾರ್ವಜನಿಕರು ಈ ವಿಚಾರಗಳನ್ನು ಅರ್ಥಮಾಡಿಕೊಳ್ಳಬೇಕು ಎಂದರು.

ರಾಮನಗರದ ಕಾಂಗೊರು ಆಸ್ಪತ್ರೆಯಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ದೊರಕಿಸಿಕೊಡಲಾಗುತ್ತಿದೆ. ದೊಡ್ಡ ನಗರಗಳ ಆಸ್ಪತ್ರೆಗಳಿಗೆ ಹೋಲಿಸಿದರೆ ರಾಮನಗರದ ಕಾಂಗೊರು ಆಸ್ಪತ್ರೆಯಲ್ಲಿ ಕಡಿಮೆ ವೆಚ್ಚದಲ್ಲಿ ಚಿಕಿತ್ಸಾ ಸೌಲಭ್ಯ ದೊರೆಯುತ್ತಿದೆ ಎಂದು ಮಾಹಿತಿ ಕೊಟ್ಟರು. ಆಚರಣೆಯಲ್ಲಿ ಭಾಗಿಯಾಗಿದ್ದ ಅನೇಕ ತಾಯಂದಿರು ಆಸ್ಪತ್ರೆಯಲ್ಲಿ ತಮಗೆ ಸಿಕ್ಕ ಭರವಸೆ ಮತ್ತು ಚಿಕಿತ್ಸೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ವೇಳೆ ತಜ್ಞ ವೈದ್ಯರುಗಳಾದ ಡಾ.ಸಂತೋಷ್, ಡಾ.ವರುಣ್.ಪಿ, ಡಾ.ಸುಬ್ರಹ್ಮಣ್ಯ, ಡಾ.ಪೂರ್ಣಿಮಾ ಮುಂತಾದವರು ಹಾಜರಿದ್ದರು.



# 100 ಕೋಟಿ ನೀಡಿದರೆ ನಾನೇ ಹೋಗುತ್ತೇನೆ

ಚಾಮರಾಜನಗರ, 100 ಕೋಟಿ ರು, ನೀಡಿದರೆ ನಾನೇ ಹೋಗುತ್ತೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ವ್ಯಂಗ್ಯವಾಡಿದರು.

ಸಂವಿಧಾನ ದಿನಾಚರಣೆ ಸಮಾರಂಭದಲ್ಲಿ ಭಾಗವಹಿಸಲು ಆಗಮಿಸಿದ್ದ ವೇಳೆ ಪತ್ರಕರ್ತರ ಪ್ರಶ್ನೆಗೆ ಮೇಲಿನಂತೆ ಪ್ರತಿಕ್ರಿಯಿಸಿ ಹಾಸ್ಯ ಚಟಾಕಿ ಹಾರಿಸಿದರು.



ಕಾಂಗ್ರೆಸ್ ನಲ್ಲಿ ಕುದುರೆ ವ್ಯಾಪಾರ ನಡೆಯುತ್ತಿದೆ. ಶಾಸಕರ ತಲೆಗೆ 1 ಕೋಟಿಕೊಟ್ಟು ಡೀಲ್ ಮಾಡಲಾಗುತ್ತಿದೆ ಎಂದು ಬಿಜೆಪಿಯವರು ಆರೋಪಿಸುತ್ತಿದ್ದಾರೆ ಎಂಬ ಪ್ರಶ್ನೆಗೆ ನಗುತ್ರಲೇ ಉತ್ತರಿಸಿದ ಸಚಿವರು ಕುದುರೆ ವ್ಯಾಪಾರ ನಡೆಯುತ್ತಿದೆ ಎಂಬುದೆಲ್ಲ ಸುಳ್ಳು. ಇದು ಬಿಜೆಪಿಯವರು ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಮುಖ್ಯಮಂತ್ರಿ ಬದಲಾವಣೆ ವಿಚಾರ ಹೈಕಮಾಂಡ್ ಗೆ ಬಿಟ್ಟಿದ್ದು ಎಂದು ಹೇಳಿದರಲ್ಲದೇ ನಾವು ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಇರುತ್ತಣೆವೆ ಎಂದು ತಿಳಿಸಿದರು. ಇದೇ ವೇಳೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಪ್ರತಿಕ್ರಿಯಿಸಿ 200 ಕೋಟಿ ಕೊಟ್ಟರೂ ಹೋಗಲ್ಲ ಎಂದರು.

ಸಚಿವ ಸ್ಥಾನ ಸಿಗುವ ವಿಶ್ವಾಸ: ಇದೇ ವೇಳೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ ಈ ಬಾರಿ ಸಚಿವ ಸ್ಥಾನ ಸಿಗುವ ವಿಶ್ವಾಸವಿದೆ ಎಂದು ಹೇಳಿದರು. ಕಳೆದ ಬಾರಿ ಕೊನೆಗಳಿಗೆಯಲ್ಲಿ ಸಚಿವ ಸ್ಥಾನದಿಂದ ವಂಚಿತನಾಗಿದ್ದೆ. ಈಗ ಮತ್ತೆ ಸಂಪುಟ ಪುನರ್ ರಚನೆಯಾದರೆ ಮಂತ್ರಿ ಸ್ಥಾನ ಸಿಗಬಹುದು ಆದರೆ ನಾನು ಡಿಮ್ಯಾಂಡ್ ಮಾಡಿಲ್ಲ. ಕ್ಷೇತ್ರದಲ್ಲಿ ಆರಾಮವಾಗಿ ಇರುವುದಾಗಿ ತಿಳಿಸಿದರು.

# ಶ್ರೀ ಸುಬ್ರಮಣ್ಯಸ್ವಾಮಿ ಮೆರವಣಿಗೆ



ಚಾಮರಾಜನಗರ, ಮಾರ್ಗದರ್ಶಿ ಮಾಸದ 6ನೇ ದಿನದಂದು ಸುಬ್ರಹ್ಮಣ್ಯ ಷಷ್ಠಿಯನ್ನು ಆಚರಿಸಲಾಗುತ್ತದೆ. ಈ ದಿನದಂದು ಸುಬ್ರಹ್ಮಣ್ಯ ಸ್ವಾಮಿಯನ್ನು ಪೂಜಿಸುವ ಸಂಪ್ರದಾಯವಿದೆ. ಕುಕ್ಕೆ ಸುಬ್ರಹ್ಮಣ್ಯ ಸೇರಿದಂತೆ ಇನ್ನಿತರ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಅದ್ದೂರಿ ಪೂಜೆ, ಉತ್ಸವ ನಡೆಯುತ್ತದೆ. ಚಾಮರಾಜನಗರದ ಚಾಮರಾಜೇಶ್ವರ ದೇವಸ್ಥಾನದಲ್ಲು ಸುಬ್ರಮಣ್ಯ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಭಕ್ತಾಧಿಗಳು ಮೆರವಣಿಗೆ ನಡೆಸಿದರು.

ಮೆರವಣಿಗೆಯಲ್ಲಿ ವರ್ತಕರಾದ ವೆಂಕಟನಾಗಪ್ಪಶೆಟ್ಟಿ ಹಾಗೂ ಕುಟುಂಬದವರು ಸೇರಿದಂತೆ ದೇವಸ್ಥಾನದ ಆಗಮಿಕರಾದ ಅನೀಲ್ ದಿಕ್ಷತ್, ನೌಕರರಾದ ಬಂಡುಗರ್ ಮಹೇಶ್, ಅಂಗಡಿ ರಮೇಶ್,ಸಂಜು, ಕಾರ್ದೇವರಾಜು, ಜಯಕುಮಾರ್ ಹಾಗೂ ಇನ್ನು ಮುಂತಾದವರು ಹಾಜರಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ನಾಡ ಕುಸ್ತಿ ಪೂರ್ವಭಾವಿ ಸಭೆ



ಗುಂಡ್ಲುಪೇಟೆ.ಪಟ್ಟಣದ ಹಳೆ ಪ್ರವಾಸಿ ಮಂದಿರದಲ್ಲಿ ಶಾಸಕ ಹೆಚ್ ಎಂ ಗಣೇಶ ಪ್ರಸಾದ್ ರವರ ಹುಟ್ಟು ಹಬ್ಬದ ಪ್ರಯುಕ್ತ ರಾಜ್ಯ ಮಟ್ಟದ ನಾಡ ಕುಸ್ತಿ ಪಂದ್ಯಾವಳಿ ಅಯೋಜಿಸಲು ರಾಜೇಶ್ (ರಾಸ) ನೇತೃತ್ವದಲ್ಲಿ ಹಾಗೂ ಹಿರಿಯ ಪೈಲ್ವಾನ್ ಗಳ ಜೊತೆಗೆ ಪೂರ್ವ ಭಾವಿ ಸಭೆ ನಡೆಯಿತು.

ಪೈಲ್ವಾನ್. ನಾಗೇಶ್. ಪೈಲ್ವಾನ್ ಶಿವಣ್ಣ. ಪೈಲ್ವಾನ್ ನಾಗನಾಯಕ (ಕಾಕಾಸುರ) ಪೈಲ್ವಾನ್ ಚಂದ್ರು (ಹುಲಿ ಮರಿ). ಪೈಲ್ವಾನ್ ಮಣಿನಾಯಕ. ಪೈಲ್ವಾನ್. ಶ್ರೀನಿವಾಸ್ (ಕಣ್ಣಪ್ಪ) ಪೈಲ್ವಾನ್ ಸುರೇಶ ನಾಯಕ. (ಚಿನ್ನು) ಪೈಲ್ವಾನ್ ಚಿಕ್ಕಣ್ಣ. ಪೈಲ್ವಾನ್ ಪಟ್ಟಾಬಿ (ರಂಗ ಸ್ವಾಮಿ) ಪೈಲ್ವಾನ್ ಇದಯ್. ಪೈಲ್ವಾನ್ ಎನ್ ಕುಮಾರ್. ಪೈಲ್ವಾನ್ ರಾಜು.( ಜಿಮ್) ಪೈಲ್ವಾನ್ ಸಿದ್ದಪ್ಪ. ಪೈಲ್ವಾನ್ ವಿಶ್ವ ನಾಥ್. ಪೈಲ್ವಾನ್ ರವಿ. ಪೈಲ್ವಾನ್ ರಾಜೇಂದ್ರ. ಪೈಲ್ವಾನ್ ಮಾಧುನಾಯಕ. ಪೈಲ್ವಾನ್ ಮೋಷಿನ್. ಪೈಲ್ವಾನ್ ನಾಸಿಮ್. ವಿಠ್ಠಲ್ ಕೆ ಎಸ್ ಆರ್ ಟಿ ಸಿ ಆನಂದ್ ಸ್ವಾಮಿ ಹಾಗೂ ಇನ್ನು ಇತರರು ಬಾಗವಹಿಸಿದರು.

## ಹಾಡಿರೇ ರಾಗಗಳ–ತೂಗಿರೇ ದೀಪಗಳ ಸಾಂಸ್ಕೃತಿಕ ಕಾರ್ಯಕ್ರಮ

# ಜನಪದ ಕಲೆಗೆ ಉತ್ತೇಜನ: ಪುಟ್ಟರಂಗಶೆಟ್ಟಿ

ಚಾಮರಾಜನಗರ, ಚಾಮರಾಜನಗರ ಜಿಲ್ಲೆಯು ಹೆಚ್ಚು ಜನಪದ ಕಲಾವಿದರನ್ನು ಹೊಂದಿದ್ದು, ಜನಪದ ಕಲೆಗಳ ತವರೂರು ಎನಿಸಿಕೊಂಡಿದೆ ಎಂದು ಎಂ.ಎಸ್.ಐ.ಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ವರನಟ ಡಾ. ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಹಾಡಿರೇ ರಾಗಗಳ–ತೂಗಿರೇ ದೀಪಗಳ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ, ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲೆಯು ಜಾನಪದ ಕಲೆಗಳ ತವರೂರು ಎಂದು ಹೆಸರಾಗಿದೆ. ಮಲೆ ಮಹದೇಶ್ವರ, ಸಿದ್ದಪ್ಪಾಜಿ, ಮಂಟೇಸ್ವಾಮಿ ಬಿಳಿಗಿರಿರಂಗನಾಥ ಕಾವ್ಯಗಳ ಹುಟ್ಟು ಮತ್ತು ಬೆಳವಣಿಗೆಗೆ ಜಿಲ್ಲೆಯು ಸಾಕ್ಷಿಯಾಗಿದ್ದು ಅತಿ ಹೆಚ್ಚು ಜನಪದ ಕಲಾವಿದರನ್ನು ಹೊಂದಿರುವ ಜಿಲ್ಲೆಯಾಗಿದೆ. ಇಲ್ಲಿನ ಜನಪದ ಕಲಾವಿದರು ರಾಜ್ಯಾದ್ಯಂತ ಹೆಸರಾಗಿದ್ದಾರೆ. ಜನಪದ ಕಲೆಯನ್ನು ಉಳಿಸಿ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವನ್ನು ಮಾಡಲಾಗುತ್ತಿದೆ ಎಂದರು.



ಹಿಂದೆ ಪೂರ್ವಜರು ತಮ್ಮ ಆಯಾಸವನ್ನು ಮರೆಯಲು ರಾಗಿ ಬೀಸುವಾಗ, ಭತ್ತ ಕುಟ್ಟುವಾಗ, ನಾಟಿ ಹಾಕುವ ಸಂದರ್ಭದಲ್ಲಿ ಹಾಡನ್ನು ಹಾಡುತ್ತಿದ್ದ ಗೀತೆಗಳು ಜಾನಪದ ಶ್ರೀಮಂತಿಕೆಯಾಗಿವೆ. ಇದಕ್ಕೆ ಯಾವುದೇ ರೀತಿಯ ಸಾಹಿತಿ ಇಲ್ಲದೆ ಬಾಯಿಂದ ಬಾಯಿಗೆ ಬಂದ ಬಳುವಳಿಯಾಗಿದೆ. ಮುಂದಿನ ಪೀಳಿಗೆಗೆ ಜನಪದ ಸಂಸ್ಕೃತಿ ಕಲೆಗಳನ್ನು ಉಳಿಸಿ ಬೆಳೆಸಿ ತಲುಪಿಸಬೇಕಿದೆ ಎಂದು ಹೇಳಿದರು. ಸ್ವಾಮಿ ವಿವೇಕಾನಂದ ಸದ್ಭಾವನ ರಾಜ್ಯಪ್ರಶಸ್ತಿ ಪುರಸ್ಕೃತರಾದ ಹರದನಹಳ್ಳಿಯ ಸುರೇಶ್ ನಾಗ್, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸದಸ್ಯರಾದ ಜಾನಪದ ಮಹೇಶ್ ಅವರು ಕಲಾತಂಡಗಳಿಗೆ ಪ್ರಶಸ್ತಿ ಪತ್ರ ವಿತರಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಬಿ.ಎಸ್. ರಾಜು ಇದ್ದರು.

### ಜಾನಪದದಿಂದ ಜಿಲ್ಲೆಗೆ ಹೆಸರು

**ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ವಿ. ಚಂದ್ರು ಮಾತನಾಡಿ ಜಿಲ್ಲೆಯು ಜನಪದಗಳ ವಿವಿಧ ಕಲಾಪ್ರಕಾರಗಳನ್ನು ಹೊಂದಿದ್ದು, ಜನಪದರು ಹುಟ್ಟಿನಿಂದಲೇ ಕಲೆಗಳನ್ನು ಮೈಗೂಡಿಸಿಕೊಂಡು ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಇಂದು ಪಾಶ್ಚಿಮಾತ್ಯ ಸಂಗೀತಗಳು ಹೆಚ್ಚಾಗಿದ್ದು ಜನಪದ ಕಲೆಗೆ ಹೆಚ್ಚು ಉತ್ತೇಜಿಸಬೇಕಿದೆ ಎಂದರು. ಕಲಾವಿದರು ತಾವು ಕಲಿತಿರುವ ಜನಪದ ಹಾಡು ಕಥೆಗಳಿಂದ ತಮ್ಮ ಜೀವನವನ್ನು ಕಟ್ಟಿಕೊಂಡಿದ್ದಾರೆ. ಜಿಲ್ಲೆಯ ಜನಪದ ಕಲಾವಿದರು ವಿವಿಧ ವೇದಿಕೆಗಳಲ್ಲಿ ತಮ್ಮ ಪ್ರತಿಭೆಯನ್ನು ಗುರುತಿಸಿಕೊಂಡು ಬೆಳೆಯುತ್ತಿದ್ದು, ಜಿಲ್ಲೆಗೆ ಹೆಸರು ತರುತ್ತಿದ್ದಾರೆ ಎಂದು ತಿಳಿಸಿದರು.**

### ಜಿಲ್ಲೆಯ ಕಲಾವಿದರಿಂದ ಶ್ರೀಮಂತಿಕೆ ವೈಭವ

**ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನ ಅವರು ಮಾತನಾಡಿ ಜಿಲ್ಲೆಯ ಕಲಾವಿದರು ವಿವಿಧೆಡೆ ಪ್ರತಿನಿಧಿಸಿದ್ದು, ಉತ್ತಮ ಪ್ರದರ್ಶನಗಳ ಮೂಲಕ ಗಮನಸೆಳೆದಿದ್ದಾರೆ. ಸ್ಥಳೀಯ ಜನಪದ ಕಲೆಯ ಶ್ರೀಮಂತಿಕೆ ವೈಭವವನ್ನು ಪಸರಿಸಿದ್ದಾರೆ ಎಂದರು.**

## ಗ್ರಾಮ ಪಂಚಾಯಿತಿ ನೌಕರರ ಸಂಘದ ಪ್ರತಿಭಟನಾ ಮೆರವಣಿಗೆ

ಮೈಸೂರು: ವೈಜ್ಞಾನಿಕ ಕನಿಷ್ಠ ವೇತನ ನಿಗದಿಗೆ ಒತ್ತಾಯಿಸಿ ಸಿಐಟಿಯು ಅಡಿಯಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಜಿಲ್ಲಾ ಸಮಿತಿಯು ನ. 29 ರಂದು ನಗರದ ಮುಖ್ಯಮಂತ್ರಿಗಳ ಕಾರ್ಯಾಲಯಕ್ಕೆ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧ್ಯಕ್ಷ ಕೆ. ಬಸವರಾಜು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಘನತ್ಯಾಜ್ಯ ಪಂಚಾಯಿತಿ ನೌಕರರಿಗೆ ಪಿಂಚಣಿ ಹಾಗೂ ಇಡಿಗಂಟು ನೀಡಬೇಕು, ಎಲ್ಲಾ ಗ್ರಾಪಂಗಳಿಗೆ ಲೆಕ್ಕ ಸಹಾಯಕರ ಹುದ್ದೆ ಮಂಜೂರು ಮಾಡಬೇಕು, ನೌಕರರ ಸೇವಾ ಹಿರಿತನ ಪರಿಗಣಿಸಿ ಭತ್ಯೆ ಹೆಚ್ಚಳ ಮಾಡಬೇಕು ಎಂದು ಆಗ್ರಹಿಸಿ, ನಗರದ ಸುಬ್ಬರಾಯನ ಕೆರೆಯ ಸ್ವಾತಂತ್ರ ?ಯ ಉದ್ಯಾನದಿಂದ ಬೆಳಗ್ಗೆ 11 ಕ್ಕೆ ಮೆರವಣಿಗೆ ಹೊರಡಲಿದೆ ಎಂದು ಮಾಹಿತಿ ನೀಡಿದರು. ಇದರಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಮತ್ತು ಕೊಡಗು ಜಿಲ್ಲೆಗಳ ಎಲ್ಲ ಗ್ರಾಪಂ ನೌಕರರು ಮತ್ತು ಸ್ವಚ್ಛವಾಹಿತಿ ಚಾಲಕರು, ಸಹಾಯಕರು ಪಾಲ್ಗೊಳ್ಳಲಿದ್ದಾರೆಂದರು. ವಿವಿಧ ಜಿಲ್ಲೆಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಾದ ಎಂ.ಎಂ. ಶಿವಕುಮಾರ್, ಪಿ. ಭರತ್, ಸಿದ್ದರಾಜು, ಕುಮಾರಸ್ವಾಮಿ ಹಾಗೂ ದಿನೇಶ್ ಹಾಜರಿದ್ದರು.

## ಇಂದು ಅಂತಾರಾಷ್ಟ್ರೀಯ ಸಮ್ಮೇಳನ

ಮೈಸೂರು: ಮರೆಗುಳಿತನ ರೋಗ ಹಾಗೂ ಸಂಬಂಧಿತ ಸಮಸ್ಯೆಗೆ ಸಂಬಂಧಿಸಿದ ಸಂಸ್ಥೆ ವತಿಯಿಂದ ನ. 27, 29 ರಂದು ಜೆಎಸ್‌ಎಸ್ ಆಸ್ಪತ್ರೆಯ ರಾಜೇಂದ್ರ ಸಭಾಂಗಣದಲ್ಲಿ ಬುದ್ಧಿಮಾಂದ್ಯತೆ: ನೀತಿ, ಅಭ್ಯಾಸ ಮತ್ತು ಪ್ರಗತಿ ವಿಷಯ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಚಾರ್ಯ ಡಾ. ಹನುಮಂತಾಚಾರ್ ಜೋಶಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನ. 28 ರ ಬೆಳಗ್ಗೆ 10ಕ್ಕೆ ಅಮೆರಿಕದ ತಜ್ಞ ವೈದ್ಯರಾದ ಡಾ. ಯೋಗೇಶ್ ಶಾ ಉದ್ಘಾಟಿಸುವರು, ಜೆಎಸ್‌ಎಸ್ ಎಎಚ್‌ಇಆರ್‌ನ ಪ್ರೊ. ಚಾನ್ಸಲರ್ ಡಾ.ಬಿ. ಸುರೇಶ್, ಕುಲಪತಿ ಡಾ. ಬಸವನಗೌಡಪ್ಪ, ಮೀರಾ ಪಟ್ಟಾಭಿರಾನ್, ಡಾ.ಬಿ. ಮಂಜುನಾಥ್ ಅತಿಥಿಗಳಾಗಿರುವರು, ರೇಣು ವೋಹ್ರಾ ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದರು.

ಅಲ್ಜ್ಹೈಮರ್ ಅಥವಾ ಮರೆಗುಳಿತನ ಕಾಯಿಲೆಯು ಬುದ್ಧಿಮಾನ್ಯತೆ ಬರಲು ಸಾಮಾನ್ಯ ಕಾರಣವಾಗಿರುವುದು ಶೇ. 50 ರಿಂದ 60 ರಷ್ಟು ಪ್ರಕರಣಗಳಲ್ಲಿ ದೃಢಪಟ್ಟಿದೆ. ಇದು ಅಸಹಜ ಮಿದುಳಿನ ಅಂಗಾಂಶ ಬದಲಾವಣೆಗಳಿಂದ ಉಂಟಾಗುತ್ತದೆ. ಒಂದು ಸಂಶೋಧನೆ ಪ್ರಕಾರ ಬುದ್ಧಿಮಾಂದ್ಯತೆ ಹೊಂದಿರುವ ಹೆಚ್ಚಿನ ಜನರು ತಮ್ಮ ಮನೆಗಳಲ್ಲಿ ವಾಸಿಸುತ್ತಾರೆ. ಈ ರೀತಿಯ ವಿಷಯಗಳಿಗೆ ಸಂಬಂಧಿಸಿದಂತೆ ಸಮ್ಮೇಳನದಲ್ಲಿ ಚರ್ಚಿಸಿ, ಈಚಿನ ಚಿಕಿತ್ಸಾ ಬೆಳವಣಿಗೆ ಮಾಹಿತಿ ವಿನಿಮಯವಾಗಲಿದೆ ಎಂದರು.

ಪ್ರೊ. ಪ್ರತಿಭಾ ಪೆರೇರಾ, ಜಿ.ಎಸ್. ಗಣೇಶ್, ಡಾ. ಶಿಲ್ಪಾ, ಜ್ಯೋತಿ, ಆರ್. ನಾಗೇಂದ್ರ ಇದ್ದರು.

## ಬಂಡೀಪುರದಲ್ಲಿ ಸಫಾರಿ ಆರಂಭಿಸುವಂತೆ ಮನವಿ



ಚಾಮರಾಜನಗರ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸ್ಥಗಿತಗೊಳಿರುವ ಸಫಾರಿಯನ್ನು ಮತ್ತೆ ಪುನರಾರಂಭಮಾಡಬೇಕು ಎಂದು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ವತಿಯಿಂದ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರಿಗೆ ಮನವಿ ಸಲ್ಲಿಸಲಾಯಿತು.ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿ ಸ್ಥಗಿತಗೊಳಿಸಿರುವುದು ಜಿಲ್ಲೆಯ ಪ್ರವಾಸೋದ್ಯಮಕ್ಕೆ ಹಾಗೂ ಸ್ಥಳೀಯ ಹೋಟೆಲ್, ರೆಸಾರ್ಟ್, ಪ್ರವಾಸಿ ಮಾರ್ಗದರ್ಶಕರು ಸೇರಿದಂತೆ ಇನ್ನೂ ಹಲವರ ಜೀವನೋಪಾಯಕ್ಕೆ ಬಹು ದೊಡ್ಡಮಟ್ಟದಲ್ಲಿ ಹಿನ್ನಡೆಯಾಗಿದೆ. ಆದ್ದರಿಂದ ವೈಜ್ಞಾನಿಕ ಹಾಗೂ ಪರಿಣಾಮಕಾರಿ ಸುರಕ್ಷಿತ ಕ್ರಮಗಳನ್ನು ಕೈಗೊಂಡು, ವನ್ಯಜೀವಿಗಳ ಸಂರಕ್ಷಣೆಗೆ ಯಾವುದೇ ಹಾನಿ ಆಗದಂತೆ ನಿಯಮಿತ ಮಾರ್ಗಸೂಚಿಗಳಡಿ ಸಫಾರಿಯನ್ನು ಶೀಘ್ರದಲ್ಲೇ ಪುನರಾರಂಭಿಸುವಂತೆ ಮನವಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಹೋಟೇಲ್ ಮಾಲೀಕರ ಸಂಘದ ಜಿಲ್ಲಾಧ್ಯಕ್ಷ ನಂದ್ಯಪ್ಪ ಶೆಟ್ಟಿ, ಉಪಾಧ್ಯಕ್ಷ ಶ್ರೀನಿವಾಸ್, ಕಾರ್ಯದರ್ಶಿ ಪ್ರತಾಪ್, ಜಂಟಿ ಕಾರ್ಯದರ್ಶಿ ಅಂಕಶೆಟ್ಟಿ, ಗುರುರಾಜ್, ವಿಜಯ್ ಕುಲಾಲ್, ಪ್ರಸನ್ನ ಸೇರಿದಂತೆ ಇನ್ನಿತರರಿದ್ದರು.

## ಡಿ.1ರಂದು ವಿಚಾರಣೆ

ರಾಮನಗರ: ರಾಮನಗರ ತಾಲ್ಲೂಕಿನ ಕಸಬಾ–2 ಹೋಬಳಿಯ ಮಾಯಗಾನಹಳ್ಳಿ ಗ್ರಾಮದ ಸ.ನಂ 57ರಲ್ಲಿನ ಮಂಜೂರಾತಿ ಜಮೀನಿಗೆ ಸಂಬಂಧಿಸಿದಂತೆ ಉಪವಿಭಾಗೀಯ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ನಂ: ಎಲ್‌ಎನ್‌ಡಿ/ಸಿಆರ್/05/2025ರಂತೆ ಪ್ರಕರಣ ದಾಖಲಾಗಿದ್ದು, ವಿಚಾರಣಾ ಹಂತದಲ್ಲಿರುತ್ತದೆ.

ಈ ಪ್ರಕರಣದ ಪ್ರತಿವಾದಿಗಳಿಗೆ ರಾಜಸ್ಥ ನಿರೀಕ್ಷಕರ ಮೂಲಕ ನೋಟಿಸ್ ಜಾರಿ ಮಾಡಲು ಕ್ರಮ ಕೈಗೊಳ್ಳಲಾಗಿದ್ದು, ಪ್ರತಿವಾದಿಗಳು ಗ್ರಾಮದಲ್ಲಿ ವಾಸವಿಲ್ಲದೇ ಇರುವುದು ಕಂಡುಬಂದಿರುತ್ತದೆ. ಮುಂದಿನ ವಿಚಾರಣಾ ದಿನಾಂಕ: 01–12–2025ರಂದು ಮಧ್ಯಾಹ್ನ 3 ಗಂಟೆಗೆ ನಿಗಧಿ ಪಡಿಸಲಾಗಿರುತ್ತದೆ. ವಾದಿಗಳುಅಥವಾ ವಕೀಲರ ಮೂಲಕ ಅದಕ್ಕೆ ದಾಖಲಾತಿಗಳನ್ನು/ಆಕ್ಷೇಪಣೆಗಳೊಂದಿಗೆ ತಪ್ಪದೇ ವಿಚಾರಣೆಗೆ ಹಾಜರಾಗುವಂತೆ ರಾಮನಗರ ಉಪವಿಭಾಗದ ಉಪವಿಭಾಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂವಿಧಾನದ ದಿನಾಚರಣೆ



ಗುಂಡ್ಲುಪೇಟೆ: ಭಾರತೀಯರಾದ ಪ್ರತಿಯೊಬ್ಬರಿಗೂ ಸಂವಿಧಾನದ ಅರಿವು ಅತ್ಯಗತ್ಯ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಬಸವರಾಜ ತಳವಾರ ಹೇಳಿದರು.

ಪಟ್ಟಣದ ಸರ್ಕಾರಿ ಆದರ್ಶ ಪದವಿ ಪೂರ್ವ ಕಾಲೇಜಿನಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ಸರ್ಕಾರಿ ಆದರ್ಶ ಪದವಿ ಪೂರ್ವ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ನಡೆದ ಸಂವಿಧಾನದ ದಿನಾಚರಣೆ ಅಂಗವಾಗಿ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇಂದಿನ ಮಕ್ಕಳೇ ಮುಂದಿನ ಪ್ರಜೆ. ದೇಶದ ಅಭಿವೃದ್ಧಿಗೆ ಒಳ್ಳೆಯ ಪ್ರಜೆಯಾಗುವುದು ಅತಿಮುಖ್ಯ. ಆ ನಿಟ್ಟಿನಲ್ಲಿ ಭವಿಷ್ಯದ ಉದ್ದೇಶಕ್ಕಾಗಿ ಸಂವಿಧಾನವನ್ನು ಓದಬೇಕು, ಯಾವುದೇ ಹುದ್ದೆ ಮತ್ತು ನೌಕರಿಯಲ್ಲಿದ್ದರೂ ಸಹ ಕಾನೂನಿನ ಬಗ್ಗೆ ಎಲ್ಲರೂ ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾದ ಡಾ.ಬಿ.ಆರ್.ಅಂಬೇಡ್ಕರ್ ಅವರು ಎಲ್ಲಾ ದೇಶಗಳ ಸಂವಿಧಾನವನ್ನು ಅಧ್ಯಯನ ಮಾಡಿ ಅಲ್ಲಿರುವ ಒಳ್ಳೆಯ ವಿಷಯಗಳನ್ನು ತೆಗೆದುಕೊಂಡು ರಚನೆ ಮಾಡಿರುವುದರಿಂದ ಭಾರತ ಸಂವಿಧಾನ ವಿಶ್ವದಲ್ಲಿಯೇ ಶ್ರೇಷ್ಠ ಸಂವಿಧಾನವಾಗಿದೆ.ವಿಶ್ವದ ಬೇರೆ ದೇಶಗಳಲ್ಲಿ ಹಲವಾರು ಕಾರಣಗಳಿಂದ ಸಂವಿಧಾನ ಬದಲಾಗಿದೆ ಆದರೆ ನಮ್ಮ ಭಾರತ ದೇಶ ಸಂವಿಧಾನ ಜಾರಿಗೆ ಬಂದ ದಿನದಿಂದ ಇಂದಿನವರೆಗೂ ಯಾವುದೇ ಬದಲಾವಣೆಯಾಗದೇ ಮೂಲ ಸ್ವರೂಪವನ್ನು ಉಳಿಸಿಕೊಂಡು ಶ್ರೇಷ್ಠ ಸಂವಿಧಾನವನ್ನು ಜಾರಿಗೊಳಿಸಿದ್ದೇವೆ ಎಂದು ಹೇಳಿದರು. ಈ ಹಿಂದೆ ನವೆಂಬರ್ 26ರಂದು ಕಾನೂನು ದಿನವನ್ನಾಗಿ ಆಚರಣೆ ಮಾಡಿಕೊಂಡು ಬರಲಾಗುತಿತ್ತು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಎಂ.ಟಿ ದೀಪು, ತಾಲೂಕು ವಕೀಲರ ಸಂಘದ ಅಧ್ಯಕ್ಷ ಟಿ.ಎಸ್ ವೆಂಕಟೇಶ್,ಕಾರ್ಯದರ್ಶಿ ಜವರಾಜು, ಕಾಲೇಜಿನ ಪ್ರಾಂಶುಪಾಲ ಬಸವನಾಯಕ, ಮುಖ್ಯೋಪಾಧ್ಯಾಯಿನಿ ಸುಕನ್ಯಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು

## ಅಂಬೇಡ್ಕರ್‌ರಿಂದ ವಿಶ್ವವೇ ಮೆಚ್ಚುವ ಸಂವಿಧಾನ



ಚಾಮರಾಜನಗರ. ಅಂಬೇಡ್ಕರ್ ಅವರು ತಮ್ಮ ಸಂಕಷ್ಟದ ನಡುವೆಯೂ ಭಾರತದಂತಹ ಬೃಹತ್ ರಾಷ್ಟ್ರಕ್ಕೆ ವಿಶ್ವವೇ ಮೆಚ್ಚುವ ಸಂವಿಧಾನ ಬರೆದು ಲೋಕಾರ್ಪಣೆ ಮಾಡಿದ್ದಾರೆ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ,ಕೆ, ರವಿಕುಮಾರ್ ಅಭಿಪ್ರಾಯಪಟ್ಟರು.

ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ನಡೆದ ಸಂವಿ ಧಾನ ದಿನಾಚರಣೆಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ನಂತರ ಸಂವಿಧಾನ ಪೀಠಿಕೆ ಭೋದಿಸಿ ಮಾತನಾಡಿದರು. ಪ್ರಪಂಚದ ನಾನಾದೇಶಗಳ ಸಂವಿಧಾನಗಳನ್ನು ಅಧ್ಯಯನ ಮಾಡಿ, ಭಾರತ ದೇಶದ ಅಭಿವೃದ್ದಿಗೆ ಪೂರಕವಾದ ಸುಭದ್ರ ಸಂವಿಧಾನ ರಚನೆಮಾಡಿ, ದೇಶಕ್ಕೆ ಅರ್ಪಣೆ ಮಾಡಿದ್ದಾರೆ. ಪ್ರತಿಯೂಬ್ಬರು ಅಂಬೇಡ್ಕರ್ ರಚಿಸಿರುವ ಸಂವಿಧಾನವನ್ನು ಅಧ್ಯಯನ ಮಾಡಬೇಕು ಎಂದು ಸಲಹೆ ನೀಡಿದರು. ಅಂಬೇಡ್ಕರ್ ಅವರು ಸತತ ಮೂರುವರ್ಷಗಳ ಕಾಲ ವಿವಿಧ ದೇಶಗಳ ಸಂವಿಧಾನ ಅಧ್ಯಯನ ಮಾಡಿ, ಭಾರತದ ಅಭಿವೃದ್ದಿಗೆ ಪೂರಕವಾದ ಅಮೂಲ್ಯವಾದ ಸಂವಿಧಾನವನ್ನು 1949 ನ.26 ರಂದು ಅಂಬೇಡ್ಕರ್ ದೇಶಕ್ಕೆ ಸಮರ್ಪಣೆ ಮಾಡಿದರು. 1950 ಜ.26 ರಂದು ಅದನ್ನು ಅಧಿಕೃತವಾಗಿ ಜಾರಿಗೆ ತರಲಾಯಿತು. ಮಾನ ವೀಯ ಮೌಲ್ಯಗಳ ಆಗರವಾಗಿರುವ ಸಂವಿಧಾನದ ಮೂಲ ಆಶಯಗಳನ್ನು ನಾವು ಪಾಲನೆ ಮಾಡುವ ಅಗತ್ಯವಿದೆ ಎಂದರು. ಸಂವಿಧಾನ ದಡಿಯಲ್ಲಿ ನಡೆದಾಗ ಪ್ರತಿಯೊಬ್ಬರು ಸಾಗಿದಾಗ ಉತ್ತಮ ಜೀವನ ನಡೆಸಬಹುದಾಗಿದೆ ಎಂದರು. ಪಕ್ಷದ ಕಾರ್ಯಕರ್ತರು ಮುಖಂಡರು ಡಾ, ಬಿ,ಆರ್, ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು.

ಚುಡಾ ಅಧ್ಯಕ್ಷ ಮಹಮದ್ ಅಸ್ಗರ್,ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚಿಕ್ಕ ಮಹದೇವ ,ಆರ್,ಮಹದೇವ್, ಜಿ,ಪಂ ಮಾಜಿ ಅಧ್ಯಕ್ಷೆ ಕಾವೇರಿ ಶಿವಕುಮಾರ್, ಸದಸ್ಯ ಕೆರಹಳ್ಳಿ ನವೀನ್, ಆಯ್ಯನಪುರ ಶಿವಕುಮಾರ್, ಗ್ರಾ,ಪಂ ಅಧ್ಯಕ್ಷ ರೋಪೇಶ್, ಗ್ಯಾರಂಟಿ ಯೋಜನೆಗಳ ತಾಲ್ಲೂಕು ಅಧ್ಯಕ್ಷ ನಲ್ಲೂರು ಸೋಮೇಶ್ವರ್, ಸದಸ್ಯರಾದ ಮರಿಯಾದಹುಂಡಿ ಕುಮಾರ್, ಮಾಧಾಪುರ ಕುಮಾರ್, ನಗರ ಪ್ರಾಧಿಕಾರದ ಸದಸ್ಯರಾದ ರಾಜು, ಪುಟ್ಟಸ್ವಾಮಿ, ಕೆ,ಪಿ,ಸಿ,ಸಿ, ಸದಸ್ಯ ಸೈಯದ್‌ರಫಿ, , ರಂಗಸ್ವಾಮಿ, ಎಸ್ಸಿ,ಎಸ್ಟಿ ಜಾಗೃತಿ ಉಸ್ತುವರಿ ಸಮಿತಿ ಸದಸ್ಯ ಸಿ,ಸಿದ್ದರಾಜು, ಶಕುಂತಲಾ, ನಸ್ರುಲ್ಲಾ ಖಾನ್, ಆಯಿಭ್‌ಖಾನ್, ನಾಯಜ್, ಚೂಡಾ ಮಾಜಿ ಅಧ್ಯಕ್ಷ ಸುಹೇಲ್‌ಆಲಿಖಾನ್, ಅಪ್ಸರಹಮದ್, ಸೈಯದ್ ಇರ್ಷದ್, ಮಹಮದ್ ಮುಸಯಿದ,ಸೈಯದ್‌ತೌಸಿಂತ್, ಹಿಂದುಳಿದ ವರ್ಗಗಳ ಘಟಕ ಅಧ್ಯಕ್ಷ ಚೇತನ್, ಮೋಹನ್‌ನಗು, ಅಕ್ಷಯ್, ಚಂಗುಮಣಿ , ಪೃಥ್ವಿ, ಮಾಜಿನಗರಸಭ ಸದಸ್ಯ ನಹದೇವಯ್ಯ, ರಾಮಸಮುದ್ರ ಕೆ,ನಾಗರಾಜು, ನಾಗಬಸವಣ್ಣ, ಶೇಷಣ್ಣ, ಪಾವನ್, ಸೇರಿದಂತೆ ಮುಖಂಡರು ಇದ್ದರು.

# 350 ಮಂದಿಗೂ ಲ್ಯಾಪ್‌ಟ್ಯಾಪ್ ವಿತರಣೆ

## ಯಶೋಧ ಕೃಷ್ಣ ಚಾರಿಟಬಲ್ ಟ್ರಸ್ಟ್ ವತಿಯಿಂದ ವಿತರಣೆ



ಮೈಸೂರು: ಶಾಸಕರ ಕೆ.ಹರೀಶ್‌ಗೌಡ ನೇತೃತ್ವದಲ್ಲಿ ಅವರ ಪೋಷಕರ ಹೆಸರಿನಲ್ಲಿ ಸ್ಥಾಪಿಸಿದ ಯಶೋಧ ಕೃಷ್ಣ ಚಾರಿಟಬಲ್ ಟ್ರಸ್ಟ್ ವತಿಯಿಂದ 350 ಮಂದಿಗೂ ಲ್ಯಾಪ್ ಟ್ಯಾಪ್ ವಿತರಿಸಲಾಯಿತು.

ನಗರದ ಕಲಾಮಂದಿರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 350 ಮಂದಿಗೂ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ವಿತರಿಸಲು ಚಾಲನೆ ನೀಡಿದರು. ಕಾರ್ಯಕ್ರಮ ಉದ್ಘಾಟಿಸಿದ ಮಂಡ್ಯ ಜಿಲ್ಲಾ ಉಸ್ತುವಾರಿ ಹಾಗೂ ಕೃಷಿ ಸಚಿವ ಚೆಲುವರಾಯಸ್ವಾಮಿ ಮಾತನಾಡಿ, ಸಿದ್ದಗಂಗಾ ಮಠ ನನ್ನ ಜೀವನದಲ್ಲಿ ಬದಲಾವಣೆ ತಂದಿದ್ದರೆ, ಜೀವನ ರಾಜಕೀಯ ಬದಲಾವಣೆ ತಂದಿದ್ದರೆ ಅದಕ್ಕೆ ಎರಡು ಶ್ರೀಮಠವೇ ಕಾರಣವಾಗಿದೆ. ಇಂದು ಎಲ್ಲರೂ ಓದುತ್ತಾರೆ, ವಿದ್ಯೆಗೆ ಅಂತಸ್ತು, ಕುಟುಂಬ ಕಟ್ಟುಪಾಡು ಇಲ್ಲ. ವಿಜ್ಞಾನಿ, ವೈದ್ಯರು ಎಲ್ಲರೂ ಸರ್ಕಾರಿ ಶಾಲೆ, ಬಡ ಕುಟುಂಬದಿಂದ ಬಂದವರೇ ಆಗಿದ್ದಾರೆ. ದೊಡ್ಡ ಶಾಲೆಗಳಲ್ಲಿ ಆಂಗ್ಲ ಭಾಷೆ ಮಾತನಾಡಬಹುದು. ಆದರೆ ಸಾಧಕರ ಸಂಖ್ಯೆ ಕಡಿಮೆ. ಸರ್ಕಾರಿ ಶಾಲೆ ಜೀವನ ಅವರಿಗೆ ಪಾಠ ಕಲಿಸುತ್ತದೆ. ಮಕ್ಕಳು ವಿದ್ಯಾಭ್ಯಾಸಕ್ಕಿಂತ ಸಂಸ್ಕಾರ ಜ್ಞಾನ ಬೆಳೆಸಿಕೊಳ್ಳಲು ಹೆಚ್ಚು ಗಮನಹರಿಸಬೇಕು ಎಂದರು.

ಹರೀಶ್ ಗೌಡ ಶಾಸಕನಾಗಲು ಅನೇಕರು ಹೋರಾಟ ಮಾಡಿದ್ದಾರೆ. ನೋಡಲು ಹೊರಟನಾಗಿದ್ದರೂ ಹೃದಯವಂತನಾಗಿದ್ದಾನೆ. ಅನೇಕ ಹಿರಿಯರ ಆಶೀರ್ವಾದದ ಜತೆಗೆ ಶಾಸಕರಾಗಲು ಸಿದ್ದರಾಮಯ್ಯ ಕಾರಣರಾಗಿದ್ದಾರೆ. ಶಾಸಕರಾದರೇ ದುಡ್ಡು ಬರುತ್ತದೆ ಎಂಬ ಮಾತಿದೆ. ಶಾಸಕರಾಗುವ ಮೊದಲು ಎಷ್ಟು ನಿವೇಶನ ಮಾರಿದ್ದನೋ ಗೊತ್ತಿಲ್ಲ ಶಾಸಕನಾದ ಮೇಲೂ ಮಾರಾಟ ಮಾಡುವ ಸ್ಥಿತಿಯಿದೆ. ಯಾರೋ ಒಬ್ಬ ರಾಜಕಾರಣಿ ಆರ್ಥಿಕವಾಗಿ ಮುನ್ನಡೆಯುತ್ತಾರೆ. ರಾಜಕೀಯದ ಬದುಕಿನಲ್ಲಿ ನಿತ್ಯ ನೆರವು ನೀಡಬೇಕಾದ ಸನ್ನಿವೇಶವಿದೆ. ಹೀಗಿದ್ದರೂ ರಾಜಕಾರಣಿಗಳು ಹಣ ಮಾಡುತ್ತಾರೆಂಬ ಟೀಕೆ ಬರುತ್ತವೆ. ನಮ್ಮನ್ನು ತೆಗೆಯುವ ಅಧಿಕಾರ ಜನರಿಗೆ ಮಾತ್ರ ಇದೆ. ಅಂಬೇಡ್ಕರ್, ಗಾಂಧಿ ನಿಮಗೆ ಅಧಿಕಾರ ಕೊಟ್ಟಿದ್ದಾರೆ. ಪ್ರಜಾಪ್ರಭುತ್ವದ ವ್ಯವಸ್ಥೆ ಯಲ್ಲಿ ನಾವೆಲ್ಲರೂ ಆಲೋಚನೆ ಮಾಡಿ ನಿರ್ಣಯಿಸುವ ಅಧಿಕಾರ ಜನರಿಗೆ ಮಾತ್ರ. ಸರಳತೆ, ಸಮಾಧಾನ ರೂಢಿಸಿಕೊಂಡು ಮೈಸೂರಿನಲ್ಲಿ ಒಂದು ಯುವ ನಾಯಕತ್ವಕ್ಕೆ ಶಕ್ತಿ ತುಂಬಿದೆ. ಮೈಸೂರು ಜಿಲ್ಲೆಯ ನಾಯಕತ್ವವನ್ನು ಅದೃಷ್ಟ ಇದ್ದವರು ವಹಿಸಿಕೊಳ್ಳುತ್ತಾರೆ. ಇಂದು ಶಿಕ್ಷಣ, ಉದ್ಯೋಗ ಎರಡನ್ನೂ ಲ್ಯಾಪ್‌ಟಾಪ್ ಇಲ್ಲದೆ ಮಾಡಲಾಗುವುದಿಲ್ಲ. ಸರ್ಕಾರಕ್ಕಿಂತಹ ಹರೀಶ್ ಗೌಡರು ವೈಯುಕ್ತಿಕವಾಗಿ ಕಾರ್ಯಕ್ರಮ ಸಂತೋಷ ತಂದಿದೆ. ಮತ್ತೊಮ್ಮೆ ಶಾಸಕನಾಗಬೇಕೆಂಬ ಆಶಯದಲ್ಲಿ ಸಾರ್ವಜನಿಕ ಕೆಲಸ ಮಾಡುತ್ತಿದ್ದಾನೆ. ಎಲ್ಲರೂ ಪ್ರೀತಿಸಿ ಕೈಬಿಡಬೇಕು. ರಾಜಕೀಯಕ್ಕೆ ಆಗಿದ ವೈಯಕ್ತಿಕ ಜೀವನಕ್ಕೆ ಹಾಕಿದ್ದರೆ ನೂರಾರು ಕೋಟಿ ಒಡೆಯ ಆಗಬಹುದಿತ್ತು. ನೀವೆಲ್ಲರೂ ಸಹ ಮತ್ತೊಮ್ಮೆ ರಕ್ಷಣೆ ಮಾಡುತ್ತೀರಾ ಎಂದು ನಂಬಿದ್ದೇನೆಂದರು.

ಶಾಸಕ ಹರೀಶ್ ಗೌಡ ಪ್ರಸ್ತಾವಿಕವಾಗಿ ಮಾತನಾಡಿ, ಅತ್ಯಂತ ಸಂತಸದ ದಿನ. ನನ್ನ ಹೆತ್ತ ತಂದೆ–ತಾಯಿ ಹೆಸರಿನಲ್ಲಿ ಟ್ರಸ್ಟ್ ಉದ್ಘಾಟನೆ ದಿನವಾಗಿದೆ. ಚಿಕ್ಕವಯಸ್ಸಿನಿಂದ ನಾ ಕಂಡ ಕನಸು ಇಂದು ನನಸಾಗುತ್ತಿದೆ. ಶ್ರೀ ನಿರ್ಮಲಾನಂದ ಸ್ವಾಮೀಜಿಗಳ ಪ್ರೇರಣೆ ಈ ಕಾರ್ಯಕ್ಕೆ ಸ್ಫೂರ್ತಿಯಾಗಿದೆ. ಮೂಲತಃ ನಾನು ರಾಜಕಾರಣಿ ಅಲ್ಲ. ವಿವಿಯ ಯೂನಿಯನ್ ಚುನಾವಣೆ ಯಲ್ಲಿ ನಿಂತು ಗೆದ್ದಾಗ 2008ರಲ್ಲಿ ವಿವಿಹುದ್ದೆಗೆ ರಾಜೀನಾಮೆ ನೀಡಿ ಸಾರ್ವಜನಿಕ ಜೀವನಕ್ಕೆ ಕಾಲಿಟ್ಟೇನು. ಸಾಮೂಹಿಕ ವಿವಾಹ, ಉದ್ಯೋಗಮೇಳ, ಆರೋಗ್ಯ ಮೇಳದಂತಹ ಕಾರ್ಯಕ್ರಮ ಮಾಡುತ್ತಾ ಬಂದಿದ್ದೇನೆ. ಸಿಎಂ ಸಿದ್ದರಾಮಯ್ಯ ಆಶೀರ್ವಾದದಿಂದ ಶಾಸಕನಾಗಿದ್ದೇನೆ. ಮದ್ಯಮ ವರ್ಗ, ಬಡತನದ ಮಕ್ಕಳಿಗೆ ಶಾಸಕನಾಗುವ ಮೊದಲ ಅನೇಕ ಮಂದಿ ಶಕ್ತಿ ಇಲ್ಲದವರು ಇದ್ದಾರೆ. ತಂತ್ರಜ್ಞಾನದಲ್ಲಿ ಮುಂದೆ ಇರುವವರು ಬೆಳವಣಿಗೆ ಕಾಣಲು ಸಾಧ್ಯ ಎಂಬ ನಿಟ್ಟಿನಲ್ಲಿ ಲ್ಯಾಪ್‌ಟಾಪ್ ನೀಡಲು ತೀರ್ಮಾನಿಸಿದೆ. 350 ಮಂದಿಗೆ ವಿತರಣೆ ಮಾಡುತ್ತಿದ್ದೇವೆ. ನಿಮ್ಮೆಲ್ಲರಿಗೂ ಸರ್ಕಾರಿ ನೌಕರಿ ಸಿಗುವ ಭರವಸೆ ಇಲ್ಲ. ವಿದ್ಯಾಭ್ಯಾಸ ಮಾಡಿದ ಎಲ್ಲರೂ ನಿಮ್ಮ ಭವಿಷ್ಯ ನೀವೇ ರೂಪಿಸಿಕೊಳ್ಳಬೇಕು. ನಿಮ್ಮೆಲ್ಲರಿಗೂ ಉತ್ತಮ ಭವಿಷ್ಯ ಸಿಗಲಿ ಎನ್ನುತ್ತೇನೆ. ಬಿಇ, ಎಂಎಸ್ಸಿಎ, ಎಂಬಿಎ ಎಲ್ಲಾ ಮಾಡಿಸುತ್ತೀರಿ. ಯಾವುದೇ ರಾಜಕಾರಣಿಯೂ ಮಲ್ಟಿನ್ಯಾಷನಲ್ ಕಂಪನಿ ಶಿಫಾರಸ್ಸು ಮಾಡಿದರೂ ಸೇರಿಸಿಕೊಳ್ಳಲ್ಲ. ನಿಮ್ಮ ಕೌಶಲ್ಯದ ಅರ್ಹತೆ ಇದ್ದರೆ ಕಂಪನಿ ನಿಮ್ಮನ್ನು ಕರೆದು ಉದ್ಯೋಗ ಕೊಡುತ್ತದೆ. ವಿದ್ಯಾಭ್ಯಾಸದ ಜತೆಗೆ ಬದುಕು ಕೊಡಿಸಿ. ವಿದ್ಯಾರ್ಥಿಗಳು ಐದಾರೂ ಮಂದಿ ಸೇರಿ ನೀವೇ ಕಂಪನಿ ಪ್ರಾರಂಭಿಸಿ. ನಾನು ಬದುಕಿರುವವರೆಗೂ ಟ್ರಸ್ಟ್ ಮೂಲಕ ಜನಸೇವೆ ಮಾಡುತ್ತೇನೆಂದರು. ಎಲ್ಲಾ ಕ್ಷೇತ್ರಕ್ಕೂ ನೀಡುವ ಶಕ್ತಿ ಕರುಣಿಸಲಿ ಎಂದು ಕೇಳಿಕೊಳ್ಳುತ್ತೇನೆ. ಇದನ್ನು ಸದುಪಯೋಗ ಪಡಿಸಿಕೊಳ್ಳಿ ಎಂದು ಕೇಳಿಕೊಳ್ಳುತ್ತೇನೆಂದು ಹೇಳಿದರು.

ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದ ನಾಥ ಸ್ವಾಮೀಜಿ, ಶಾಸಕರಾದ ತನ್ವೀರ್ ಸೇಠ್, ರಮೇಶ್ ಬಂಡಿಸಿದ್ದೇಗೌಡ, ದರ್ಶನ್ ದ್ರುವನಾರಾಯಣ್, ಡಿ.ರವಿಶಂಕರ್, ಗಣೇಶ್ ಪ್ರಸಾದ್, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಪತ್ತಿನ ಅಧ್ಯಕ್ಷ ಎಸ್.ಚಂದ್ರಶೇಖರ್, ಕೆಪಿಸಿಸಿ ಮಾಧ್ಯಮ ವಕ್ತಾರ ಎಂ.ಲಕ್ಷ್ಮಣ್, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಚೇಗೌಡನ ಕೊಪ್ಪಲು ರವಿ,ದೇವರಾಜ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ನಾಗಭೂಷಣ್, ದಿ ಸಿಟಿ ಕೋಅಪರೇಟಿವ್ ಬ್ಯಾಂಕ್ ಅಧ್ಯಕ್ಷ ಹರೀಶ್ ಇನ್ನಿತರರು ಉಪಸ್ಥಿತರಿದ್ದರು.

> **ಶಾಸಕ ಕೆ. ಹರೀಶ್‌ಗೌಡ ಅವರು ತಮ್ಮ ಪೋಷಕರ ಹೆಸರಿನಲ್ಲಿ ಟ್ರಸ್ಟ್ ಸ್ಥಾಪಿಸುವ ಮೂಲಕ ನಾನಾ ಸೇವಾ ಕಾರ್ಯ ನಡೆಸುತ್ತಿರುವುದು ಆದರ್ಶನೀಯ. ಈ ನಿಟ್ಟಿನಲ್ಲಿ ಅವರ ಸೇವಾ ಕಾರ್ಯ ನಿರಂತರವಾಗಿ ಮುಂದುವರೆಯಲಿ.**
>
> ▸▸ **ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ** ಆದಿಚುಂಚನಗಿರಿ ಮಠ

> **ರಾಜಕಾರಣಿ, ಉದ್ಯಮಿಗಳಾಗಿದ್ದರೂ ಕೊಡುವ ಮನಸ್ಥಿತಿ ಇರುವವರು ಕಡಿಮೆ. ಇಂತಹ ವೇಳೆ ಹರೀಶ್ ಗೌಡ ಆರೋಗ್ಯ ಶಿಬಿರ, ಉದ್ಯೋಗ ಮೇಳ ಈಗ ಲ್ಯಾಪ್‌ಟಾಪ್ ವಿತರಣೆಯಂತಹ ಕಾರ್ಯಕ್ರಮ ಮಾಡುತ್ತಿರುವುದು ಸ್ವಾಗತಾರ್ಹ. ವಿದ್ಯಾರ್ಥಿಗಳ ಕಷ್ಟ ಅರಿತು ಈ ಕಾರ್ಯಕ್ರಮ ಮಾಡಿದ್ದಾರೆ. ಮುಂದೆಯೂ ಇಂತಹ ಕಾರ್ಯಕ್ರಮ ನಡೆಸಲು ನಿಮ್ಮ ಪ್ರೋತ್ಸಾಹ ಇರಲಿ. ಮುಂದಿನ ಭವಿಷ್ಯಕ್ಕೆ ಪೂರಕವಾಗಿ ನಿಮ್ಮ ಕೊಡುಗೆ ಇರಲಿ.**
>
> ▸▸ **ಡಿ.ರವಿಶಂಕರ್** ಶಾಸಕ

> **ಈ ಕಾರ್ಯಕ್ರಮ ಅತಿ ಅವಶ್ಯಕ. ನನ್ನ ಉನ್ನತ ವ್ಯಾಸಂಗದ ವೇಳೆ ಕೋವಿಡ್ ಮಹಾಮಾರಿ ಸಂದರ್ಭದಲ್ಲಿ ಸಾಕಷ್ಟು ವಿದ್ಯಾಭ್ಯಾಸದ ಪರಿಣಾಮ ಬೀರಿತು. ಪ್ರಾಥಮಿಕ ಸಂಶೋಧನೆ ಮಾಡಲು ಅನುಕೂಲ ಇರಲಿಲ್ಲ. ಆನ್ ಲೈನ್ ಮೂಲಕವೇ ನೋಡಿ ಓದಬೇಕಾದ ಸಂದರ್ಭ ಲ್ಯಾಪ್‌ಟಾಪ್ ಅವಶ್ಯಕತೆ ಅರಿವಾಯಿತು. ಪ್ರಸ್ತುತ ಜಗತ್ತು ಎಐ ನಂಬಿ ನಡೆಯುತ್ತಿದೆ. ಇಂತಹ ವೇಳೆ ವಿದ್ಯಾಭ್ಯಾಸಕ್ಕೆ ಮೂಲವಾಗಿದೆ. ಇದನ್ನರಿತು ಶಾಸಕರು ಮಾಡುತ್ತಿರುವುದು ಶ್ಲಾಘನೀಯ.**
>
> ▸▸ **ದರ್ಶನ್ ದ್ರುವನಾರಾಯಣ್** ಶಾಸಕ

> **ಯಾವುದೇ ಚುನಾವಣೆ ಇಲ್ಲದ ಈ ಸಂದರ್ಭದಲ್ಲಿ ಉಚಿತವಾಗಿ ನೀಡುತ್ತಿರುವುದು ನಿಜಕ್ಕೂ ಮಾದರಿ ಕಾರ್ಯ. ಈ ಕಾರ್ಯಕ್ರಮವನ್ನು ಮುಂದುವರೆಸಿಕೊಂಡು ಹೋಗುವ ಕೆಲಸವನ್ನು ಮಾಡಿ. ಚಾಮರಾಜ ಕ್ಷೇತ್ರಕ್ಕೆ ಸಿಎಂ ಕೊಡುಗೆ ಮುಂದಿನ 50 ವರ್ಷಕ್ಕೆ ಆಗುವಷ್ಟಿದೆ. 15 ಆಸ್ಪತ್ರೆ, ಎರಡೂವರೆ ಸಾವಿರ ಕೋಟಿ ಅನುದಾನಕ್ಕೆ ಮನವಿ ಸಲ್ಲಿಸಿ ಒಂದೂವರೆ ಸಾವಿರ ಕೋಟಿ ಶಾಸಕರು ಅಭಿವೃದ್ಧಿ ತಂದಿದ್ದಾರೆ.**
>
> ▸▸ **ಲಕ್ಷ್ಮಣ್** ಕೆಪಿಸಿಸಿ ವಕ್ತಾರ

> **ಉದ್ಯೋಗ ಹರಸಿ ಬರುವವರ ಸಂಖ್ಯೆ ಹೆಚ್ಚಾಗಿದೆ. ನಿರುದ್ಯೋಗದ ಭಯ ಹೆಚ್ಚಾಗುತ್ತಿದೆ. ತಂತ್ರಜ್ಞಾನ ಮುಂದುವರೆದಂತೆ ಉದ್ಯೋಗ ಕುಂಠಿತ ಆಗುತ್ತಿದೆ. ಅಘಾತಕಾರಿ ವಿಚಾರ ಎಂದರೆ ಎಐನಿಂದ ಅಪಾಯಕಾರಿ ಸನ್ನಿವೇಶ ಸೃಷ್ಟಿಯಾಗುತ್ತಿದೆ. ದುರ್ಬಳಕೆ ತಡೆಬೇಕಿದೆ. ನಿಮ್ಮ ಮಕ್ಕಳ ಶಿಕ್ಷಣ ಬೆಳವಣಿಗೆ ಬಗ್ಗೆ ನಿಗಾವಹಿಸಿ. ಸ್ವಂತಹಣದಲ್ಲಿ ಸಹಾಯ ಮಾಡುವವರ ಸಂಖ್ಯೆ ತೀರ ಕಡಿಮೆ. ಅಂತಹ ಕೆಲಸ ಶಾಸಕರು ಮುಂದಾಗಿದ್ದಾರೆ ಬಳಸಿಕೊಳ್ಳಿ.**
>
> ▸▸ **–ಗಣೇಶ್ ಪ್ರಸಾದ್** ಶಾಸಕ

## ಸಂವಿಧಾನ ದಿನಾಚರಣೆ ಕಾರ್ಯಕ್ರಮ




ಗುಂಡ್ಲುಪೇಟೆ: ವಿದ್ಯಾರ್ಥಿಗಳು ಸಂವಿಧಾನ ರಕ್ಷಣೆ ಮಾಡುವಲ್ಲಿ ಜಾಗರೂಕತೆಯಿಂದ ಇರಬೇಕು. ಜೊತೆಗೆ ಸಂವಿಧಾನ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರಾಂಶುಪಾಲರಾದ ಡಾ. ಮದನಕುಮಾರ್ ಸಲಹೆ ನೀಡಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸಂವಿಧಾನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಸಮಾನತೆ ಕಲ್ಪಿಸಲಾಗಿದೆ. ಇಂದಿನ ಯುವಕರು ಸಂವಿಧಾನ ರಕ್ಷಣೆ ಮಾಡುವಲ್ಲಿ ಜಾಗರೂಕತೆಯಿಂದ ಇರಬೇಕು. ಜೊತೆಗೆ ಸಂವಿಧಾನ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪ ಮಾಡಬೇಕು ಎಂದು ತಿಳಿಸಿದರು.

ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಮನುಕುಮಾರ್ ಮಾತನಾಡಿ, ನ.26ರಂದು ಭಾರತದ ಸಂವಿಧಾನದ ಅಂಗೀಕಾರವನ್ನು ಸ್ಮರಿಸುವ ಸಲುವಾಗಿ ಸಂವಿಧಾನ ದಿವಸ್ ದೇಶಾದ್ಯಂತ ಆಚರಿಸಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ಕಾಲೇಜಿನ ಎಲ್ಲಾ ಬೋಧಕ ಸಿಬ್ಬಂದಿ, ಬೋಧಕೇತರ ಸಿಬ್ಬಂದಿ ಹಾಗೂ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಹಾಜರಿದ್ದರು.

### ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ

## ಟ್ರಾವೆಲ್ಸ್ ಅಸೋಸಿಯೇಷನ್‌ನಿಂದ ರಾಜ್ಯೋತ್ಸವ



ಮೈಸೂರು: ಕೃತಿಗಳು ಆಂಗ್ಲ ಸೇರಿದಂತೆ ಬೇರೆ ಬೇರೆ ರಾಜ್ಯ ಹಾಗೂ ದೇಶಗಳ ಭಾಷೆಗೆ ಅನುವಾದಗೊಂಡ ನಂತರ ರಾಷ್ಟ್ರಕವಿ ಕುವೆಂಪು ಅವರು ವಿಶ್ವಕ್ಕೆ ಹೆಚ್ಚು ಪರಿಚಿತರಾದರು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಹೇಳಿದರು.

ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ವತಿ ಯಿಂದ ಕಲಾಮಂದಿರ ಆವರಣದ ಕಿರುರಂಗಮಂದಿರ ದಲ್ಲಿ ಮಂಗಳವಾರ ಏರ್ಪಡಿಸಿದ್ದ ಕನ್ನಡ ರಾಜ್ಯೋ ತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಷ್ಟ್ರ ಗೀತೆ ರಚಿಸಿದ ರವೀಂದ್ರನಾಥ ಟ್ಯಾಗೋರ್ ಅವರಷ್ಟೇ ನಾಡಗೀತೆ ರಚಿಸಿದ ಕುವೆಂಪು ಅವರು ಸಮರ್ಥರಿದ್ದರೂ ಕೃತಿಗಳು ಕನ್ನಡ ಹೊರತು ಪಡಿಸಿ ಬೇರೆ ಭಾಷೆಗೆ ಅನುವಾದ ಆಗದಿದ್ದರಿಂದ ಹೆಚ್ಚು ಪರಿಚಿತರಾಗಿರಲಿಲ್ಲ ಎಂದರು. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ದೇಜಗೌ ನೇತೃತ್ವದಲ್ಲಿ ನಿಯೋಗ ಭೇಟಿ ಮಾಡಿ ಮನವಿ ಮಾಡಿದ ನಂತರ ಕುವೆಂಪು ಭಾಷಾ ಭಾರತಿ ಮೂಲಕ ಕುವೆಂಪು ಅವರ ಕೃತಿಗಳು ಆಂಗ್ಲ ಸೇರಿದಂತೆ ವಿವಿಧ ದೇಶಗಳ ಹಾಗೂ ನಮ್ಮ ಬೇರೆ ಬೇರೆ ಭಾಷೆಗಳಿಗೆ ಅನುವಾದವಾದವು. ಹೀಗಾಗಿ ಕುವೆಂಪು ಅವರ ವಿಶ್ವಮಾನವ ಸಂದೇಶ ಹೆಚ್ಚು ಜನರಿಗೆ ತಲುಪಿದೆ ಎಂದರು. ಮಕ್ಕಳಿಂದ ಮಹಾಕಾವ್ಯದವರೆಗೆ ಸಾಹಿತ್ಯ ರಚಿಸಿರುವ ಏಕೈಕ ವ್ಯಕ್ತಿ ಯಾರಾದರೂ ಇದ್ದರೇ ಅದು ಕುವೆಂಪು ಅವರು ಮಾತ್ರ. ಆದರೆ ನಾವು ಯುವಜನರಿಗೆ ನಮ್ಮ ಸಂಸ್ಕೃತಿ, ಪರಂಪರೆಯನ್ನು ಪರಿಚಯಿಸುವಲ್ಲಿ ಸೋತಿದ್ದೇವೆ ಎಂದು ಅವರು ವಿಷಾದಿಸಿದರು.


ಮುಂದಾದರೂ ಈ ಬಗ್ಗೆ ನಾವು ಅರಿವು ಮೂಡಿಸಬೇಕು ಎಂದು ಅವರು ಕಿವಿಮಾತು ಹೇಳಿದರು. ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಕನ್ನಡ ಭಾಷೆ ಬೆಳೆಸುವಲ್ಲಿ ಕೆಲಸ ಮಾಡುತ್ತಿದೆ ಎಂದು ಅವರು ಶ್ಲಾಘಿಸಿದರು. ಈ ಬಾರಿ ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ನೆಹರು ಯುವ ಕೇಂದ್ರದ ವಿಶ್ರಾಂತ ನಿರ್ದೇಶಕ ಎಂ.ಎನ್. ನಟರಾಜ್ ಅವರನ್ನು ಸನ್ಮಾನಿಸಲಾಯಿತು. ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್. ಪ್ರಶಾಂತ್, ಸ್ಕಾಲ್ ಇಂಟರ್ ನ್ಯಾಷನಲ್ ಅಧ್ಯಕ್ಷ ಸಿ.ಟಿ. ಜಯಕುಮಾರ್, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾ ಯಣಗೌಡ, ರಾಜ್ಯೋತ್ಸವ ಸಮಿತಿ ಉಪಾಧ್ಯಕ್ಷ ವಿನೋದ್, ಡೇವಿಡ್ ಇದ್ದರು. ಸಮಿತಿಯ ಅಧ್ಯಕ್ಷ ಎ.ಸಿ. ರವಿ ಸ್ವಾಗತಿಸಿದರು. ಧಾತ್ರಿ ಕಾರ್ಯಕ್ರಮ ನಿರೂಪಿಸಿದರು.ಶೃಂಗಾರ್ ಮೆಲೋಡಿಸ್ ತಂಡದವರಿಂದ ಸಂಗೀತ ಸಂಜೆ, ತನ್ವಿ ಸಿ. ಶೇಖರ್ ಅವರಿಂದ ಭರತನಾಟ್ಯ ಹಾಗೂ ನನಗ್ಯಾಕೋ ಡೌಟು! ನಗೆ ನಾಟಕ ಪ್ರದರ್ಶನ ಇತ್ತು.

# ಮೆಡಿಕಲ್ ಮತ್ತು ಖಾಸಗಿ ಆಸ್ಪತ್ರೆಗಳ ಮಾಫಿಯಾ ನಿರ್ಧಾರ ಖಂಡಿಸಿ ಬೂಕನಕೆರೆ ಬಂದ್

**ಕೆ.ಆರ್.ಪೇಟೆ:** ತಾಲ್ಲೂಕಿನ ಬೂಕನಕೆರೆ ಗ್ರಾಮದ ಸುಪುತ್ರ ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಬಿ.ಎಸ್. ಯಡಿಯೂರಪ್ಪ ಅವರು ತಮ್ಮ ಹುಟ್ಟೂರು ಬೂಕನಕೆರೆ ಗ್ರಾಮದಲ್ಲಿ ಸುಮಾರು 15ಕೋಟಿ ರೂ ಅನುಧಾನ ನೀಡಿ ನಿರ್ಮಿಸಿರುವ 24/7 ಹೈಟೆಕ್ ಸಮುದಾಯ ಆರೋಗ್ಯ ಆಸ್ಪತ್ರೆಯನ್ನು ಮುಚ್ಚಿ, ಸಾಮಾನ್ಯ ಆರೋಗ್ಯವನ್ನಾಗಿ ಕೆಳದರ್ಜೆಗೆ ಇಳಿಸಿ ಶಿಫಾರಸ್ಸು ಮಾಡಿರುವ ಆರೋಗ್ಯ ಇಲಾಖೆಯ ಮುಖ್ಯ ಕಾರ್ಯದರ್ಶಿ ಹರ್ಷಗುಪ್ತ ಅವರ ಮೆಡಿಕಲ್ ಮಾಫಿಯಾ ಹಾಗೂ ಖಾಸಗಿ ಆಸ್ಪತ್ರೆ ಮಾಫಿಯಾ ನಿರ್ಧಾರ ಖಂಡಿಸಿ, ಕೇವಲ ಹಣ ಉಳಿಸುವ ದೃಷ್ಟಿಯಿಂದ ಆಸ್ಪತ್ರೆಯನ್ನು ಮುಚ್ಚುವ ನಿರ್ಧಾರ ಮಾಡಿರುವ ರಾಜ್ಯ ಸರ್ಕಾರದ ತೀರ್ಮಾನವನ್ನು ವಿರೋಧಿಸಿ ಬೂಕನಕೆರೆ ಗ್ರಾಮದ ಹಾಗೂ ಹೋಬಳಿಯ ಸಾವಿರಾರು ನಾಗರೀಕರು, ಬೂಕನಕೆರೆ ನಾಗರೀಕ ಹಿತರಕ್ಷಣಾ ಸಮಿತಿ ವತಿಯಿಂದ ಬೂಕನಕೆರೆ ಬಂದ್ ನಡೆಸಿ, ಗ್ರಾಮ ದೇವತೆ ಗೋಗಾಲಮ್ಮ ದೇವಾಲಯದ ಮುಂದೆ ಬೃಹತ್ ಪ್ರತಿಭಟನೆ ನಡೆಸಿದರು.

ಬೆಳಿಗ್ಗೆಯಿಂದ ಮಧ್ಯಾಹ್ನ 2ಗಂಟೆಯವರೆಗೆ ಸಾರ್ವಜನಿಕರು ಸ್ವಯಂ ಪ್ರೇರಿತವಾಗಿ ಬೂಕನಕೆರೆ ಸಂಪೂರ್ಣ ಬಂದ್ ನಡೆಸಿ ಆರೋಗ್ಯ ಇಲಾಖೆಯ ಮುಖ್ಯ ಕಾರ್ಯದರ್ಶಿ ಹರ್ಷಗುಪ್ತ ಅವರ ಗ್ರಾಮೀಣ ಜನ ವಿರೋಧಿ ನೀತಿಯನ್ನು ತೀವ್ರವಾಗಿ ಖಂಡಿಸಿದರು. ಹರ್ಷಗುಪ್ತ ಅವರ ಭೂತದಹನ ಮಾಡಿ ಆಕ್ರೋಶ ವ್ಯಕ್ತಪಡಿಸಿದರು. ಆರೋಗ್ಯ ಇಲಾಖೆಯು ಸೇವಾ ಕ್ಷೇತ್ರ ಎಂಬುದನ್ನು ಮರೆತು, ಆಧಾಯ ತರುವ ಕ್ಷೇತ್ರವೆಂದು ತಿಳಿದಿರುವ ಹರ್ಷಗುಪ್ತ ಅವರು ನಗರ ಪ್ರದೇಶದ ಹೆರಿಗೆ ಆಸ್ಪತ್ರೆಗಳ ಲಾಭಿ, ಮೆಡಿಕಲ್ ಲಾಭಿ, ಖಾಸಗಿ ಆಸ್ಪತ್ರೆಗಳ ಲಾಭಿಗೆ ಮಣಿದು ನೂರಾರು ಕೋಟಿ ಕಿಕ್‌ಬ್ಯಾಕ್ ಪಡೆದುಕೊಂಡು ಗ್ರಾಮೀಣ ಜನರ ಆರೋಗ್ಯಕ್ಕೆ ಅತ್ಯಗತ್ಯವಾಗಿದ್ದ 24/7 ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 241ಸಮುದಾಯ ಆರೋಗ್ಯ ಕೇಂದ್ರಗಳನ್ನು ಬಂದ್ ಮಾಡಿಸಿದ್ದಾರೆ ಎಂದು ಪ್ರತಿಭಟನಾಕಾರರು ಗಂಭೀರ ಆರೋಪ ಮಾಡಿದರು. ಹರ್ಷಗುಪ್ತ ಅವರು ಗ್ರಾಮೀಣ ಪ್ರದೇಶದ ಸುಮಾರು 241ಸಮುದಾಯ ಆರೋಗ್ಯ ಆಸ್ಪತ್ರೆಗಳನ್ನು ಬಂದ್ ಮಾಡಿದರೆ ಸರ್ಕಾರಕ್ಕೆ ವಾರ್ಷಿಕ 1500ಕೋಟಿ ಉಳಿತಾಯವಾಗುತ್ತದೆ ಎಂದು ಹಾಗಾಗಿ ತಾವು ಶಿಫಾರಸ್ಸು ಮಾಡಿರುವ ಗ್ರಾಮೀಣ ಪ್ರದೇಶದ 241 ಸಮುದಾಯ ಆಸ್ಪತ್ರೆಗಳನ್ನು ಬಂದ್ ಮಾಡಿ ಸಮೀಪದ ಆಸ್ಪತ್ರೆಗೆ ವಿಲೀನಗೊಳಿಸುವ ಮೂಲಕ ಗ್ರಾಮೀಣ ಜನರ ಆರೋಗ್ಯದ ಜೊತೆಗೆ ಚೆಲ್ಲಾಟವಾಡಲು ಮುಂದಾಗಿದ್ದಾರೆ. ಸರ್ಕಾರವು ಹರ್ಷಗುಪ್ತ ಅವರು 1500ಕೋಟಿ ಹಣ ಉಳಿಯುತ್ತದೆ ಎಂದು ಹೇಳಿದ್ದೇ ತಡ ಗ್ಯಾರಂಟಿ ಯೋಜನೆಗಳಿಗೆ ಹಣಕಾಸು ಹೊಂದಿಸಲು ಪರದಾಡುತ್ತಿರುವ ಸರ್ಕಾರವು ರಾಜ್ಯಾದ್ಯಂತ ಗ್ರಾಮೀಣ ಭಾಗದ 241ಆಸ್ಪತ್ರೆಗಳನ್ನು ಮುಚ್ಚುವುದರಿಂದ ಉಂಟಾಗುವ ವ್ಯತಿರಿಕ್ತ ಪರಿಣಾಮವನ್ನು ಪರಿಶೀಲನೆ ಮಾಡದೇ ಸದನದಲ್ಲಿ ಯಾವುದೇ ಚರ್ಚೆಯನ್ನೂ ಸಹ ಮಾಡದೇ ಸದನದಲ್ಲಿ ಅಂಗೀಕಾರ ಮಾಡಿದಂತೆ ಮಾಡಿ ಆಸ್ಪತ್ರೆಗಳನ್ನು ಬಂದ್ ಮಾಡುವ ಬಗ್ಗೆ ಗೆಜೆಟ್ ನೋಟಿಫಿಕೇಷನ್ ಹೊರಡಿಸಿದೆ ಇದು ಗ್ರಾಮೀಣ ಜನರ ಪಾಲಿಗೆ ಮರಣ ಶಾಸನವಾಗಿದೆ ಹಾಗಾಗಿ ಕೂಡಲೇ ಈ ಗೆಜೆಟ್ ನೋಟಿಫಿಕೇಷನ್ ಅನ್ನು ರದ್ದು ಮಾಡಿ ಡಿನೋಟಿಫಿಕೇನ್ ಮಾಡಿ ನಮ್ಮ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಹುಟ್ಟೂರು ಬೂಕನಕೆರೆ ಗ್ರಾಮದಲ್ಲಿರುವ 24/7 ಹೈಟೆಕ್ ಸಮುದಾಯ ಆರೋಗ್ಯ ಆಸ್ಪತ್ರೆ ಸೇರಿದಂತೆ ರಾಜ್ಯದ ಎಲ್ಲಾ 241 ಸಮುದಾಯ ಆರೋಗ್ಯ ಕೇಂದ್ರಗಳನ್ನು ಪುನರ್ ಆರಂಭಿಸಬೇಕು. ಇಲ್ಲದಿದ್ದರೆ ಬೆಂಗಳೂರಿನ ಆರೋಗ್ಯ ಇಲಾಖೆಯ ಮುಖ್ಯ ಕಾರ್ಯದರ್ಶಿ ಅವರ ನಿವಾಸದ ಮುಂದೆ ಉಗ್ರ ಹೋರಾಟ ರೂಪಿಸಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಮಾಜಿ ಜಿಲ್ಲಾಧ್ಯಕ್ಷ ಎಂ.ವಿ.ರಾಜೇಗೌಡ, ಬೂಕನಕೆರೆ ಹೈಟೆಕ್ ಆಸ್ಪತ್ರೆ ಉಳಿಸಿ ಹೋರಾಟ ಸಮಿತಿಯ ಸಂಚಾಲಕ ಜ್ಞಾನಸಿಂಧು, ಅಂಗಡಿ ನಾಗರಾಜು, ಬೂಕನಕೆರೆ ಗ್ರಾ.ಪಂ. ಅಧ್ಯಕ್ಷ ಶ್ಯಾಂಪ್ರಸಾದ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಮೀನಾಕ್ಷಿಪುಟ್ಟರಾಜು, ಹೆಳವೇಗೌಡ (ಹುಲ್ಲೇಗೌಡ), ಬಿ.ಜವರಾಯಿಗೌಡ, ಗ್ರಾ.ಪಂ.ಸದಸ್ಯೆ ರಾಜೇಶ್ವರಿ, ಮುಖಂಡರಾದ ಬಿ.ಎಸ್. ಮಹೇಶ್ ಅಡಿಕೆಸ್ವಾಮೀಗೌಡ, ಬೂಕನಕೆರೆ ಮಧುಸೂಧನ್, ಶಂಭುಲಿಂಗಶೆಟ್ಟಿ, ಬಿ.ಬಾಚಹಳ್ಳಿ ಪ್ರಸನ್ನ, ತಾಲ್ಲೂಕು ರೈತ ಸಂಘದ ಅಧ್ಯಕ್ಷ ಕಾರಿಗನಹಳ್ಳಿ ಪುಟ್ಟೇಗೌಡ, ಜಿಲ್ಲಾ ರೈತ ಸಂಘದ ಉಪಾಧ್ಯಕ್ಷ ಮರುವನಹಳ್ಳಿ ಶಂಕರ್, ಗಂಜಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ.ನಾಗೇಶ್, ಚೋಕನಹಳ್ಳಿ ಪ್ರಕಾಶ್ ಸೇರಿದಂತೆ ಎಲ್ಲಾ ಗ್ರಾಮ ಪಂಚಾಯಿತಿ ಸದಸ್ಯರು, ಮಾಜಿ ಗ್ರಾ.ಪಂ.ಸದಸ್ಯರು, ಸೊಸೈಟಿ ಹಾಗೂ ಹಾಲಿನ ಡೇರಿ ನಿರ್ದೇಶಕರು ಸೇರಿದಂತೆ ವಿವಿಧ ಗ್ರಾಮಗಳ ಮುಖಂಡರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.



# ಸಂವಿಧಾನ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ

## ಪ್ರಜಾಪ್ರಭುತ್ವದ ಹೃದಯ ಭಾಗ ಭಾರತೀಯ ಸಂವಿಧಾನ: ಡಾ.ಕುಮಾರ





**ಮಂಡ್ಯ:** ಪ್ರಜಾಪ್ರಭುತ್ವದ ಹೃದಯ ಭಾರತೀಯ ಸಂವಿಧಾನ ಆಗಿದ್ದು ಸಂವಿಧಾನವನ್ನು ರಕ್ಷಣೆ ಮಾಡಬೇಕಾದದ್ದು ಭಾರತೀಯರ ಹೊಣೆಗಾರಿಕೆ ಎಂದು ಜಿಲ್ಲಾಧಿಕಾರಿ ಡಾ ಕುಮಾರ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಬುಧವಾರ ಆಯೋಜಿಸಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ನವೆಂಬರ್ 26 ಭಾರತೀಯರಿಗೆ ಪತ್ರವಾದ ಪುಣ್ಯ ದಿನ. ವಿವಿಧ ಧರ್ಮಗಳ ಪವಿತ್ರ ಗ್ರಂಥಗಳ ತರಹವೇ ಭಾರತೀಯ ಸಂವಿಧಾನವು ಮಾನವಿಯತೆಯ ಪವಿತ್ರ ಗ್ರಂಥ ಎಂದು ಹೇಳಿದರು.

ಸಂವಿಧಾನ ಭಾರತೀಯರ ಬದುಕಿನ ಅವಿಭಾಜ್ಯ ಅಂಗವಾಗಿದೆ. ಕೇವಲ ಸಂವಿಧಾನ ದಿನಾಚರಣೆ ದಿನದಿಂದು ಸಂವಿಧಾನದ ಆಚರಣೆಗೆ ಸಿಮೀತವಾಗದೆ ಸಂವಿಧಾನದ ಆಶಯಗಳಿಗನುಗುಣವಾಗಿ ಬದುಕು ಕಟ್ಟಿಕೊಳ್ಳಬೇಕು. ಸೂರ್ಯ ಚಂದ್ರರಿರುವವರೆಗೂ ಭಾರತೀಯ ಸಂವಿಧಾನ ಅಜರಾಮರವಾಗಿ ಇರುತ್ತದೆ. ಭಾರತೀಯ ನಾಗರೀಕರ ರಕ್ಷಣೆಯನ್ನು ಸಂವಿಧಾನ ಮಾಡುತ್ತಿದೆ ಅದರಂತೆ ನಾವು ಸಹ ಮುಂದಿನ ಪೀಳಿಗೆಗೆ ಸಂವಿಧಾನದ ಆಶಯ, ಮಹತ್ವವನ್ನು ಸಾರುವ ಮೂಲಕ ಸಂವಿಧಾನವನ್ನು ರಕ್ಷಣೆ ಮಾಡಬೇಕು ಎಂದು ತಿಳಿಸಿದರು.

ಯುವ ಸಮೂಹ ಸಂವಿಧಾನವನ್ನು ತಿಳಿದುಕೊಂಡು ಅರ್ಥೈಸಿಕೊಳ್ಳಬೇಕು. ಸಂವಿಧಾನವನ್ನು ಅರ್ಥೈಸಿಕೊಳ್ಳಲು ಹೃದಯ ವೈಶಾಲ್ಯತೆ ಅಗತ್ಯ. ಜಗತ್ತಿನ ಅತಿ ದೊಡ್ಡ ಸಂವಿಧಾನವನ್ನು ವಿಶ್ವಜ್ಞಾನಿ ಡಾ. ಬಿಆರ್ ಅಂಬೇಡ್ಕರ್ ಅವರು ಭಾರತೀಯರಿಗೆ ನೀಡಿದ್ದಾರೆ. ಬಾಬಾ ಸಾಹೇಬ್ ಅಂಬೇಡ್ಕರ್ ಭಾರತದಲ್ಲಿ ಜನ್ಮ ನೀಡದೇ ಇದ್ದಿದ್ದರೆ ಭಾರತ ಇನ್ನೂ ಸಹ ಬಡತನದಿಂದ ಕೂಡಿರುತ್ತಿತ್ತು ಎಂದು ಅಭಿಪ್ರಾಯಪಟ್ಟರು.

ಸಂವಿಧಾನವನ್ನು ರಚಿಸಲು ಅನೇಕ ಶ್ರಮವಿದೆ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷತೆ ವಹಿಸಿ ಪ್ರಪಂಚದ ಎಲ್ಲಾ ಸಂವಿಧಾನಗಳನ್ನು ಅಧ್ಯಯನ ಮಾಡಿ ನಮ್ಮ ದೇಶದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗೆ ಹೊಂದುವಂತೆ ಒಂದು ಸಮಗ್ರವಾದ ಸಂವಿಧಾನವನ್ನು ಸಿದ್ಧಪಡಿಸಿದ್ದಾರೆ ಎಂದು ತಿಳಿಸಿದರು.

ವಿದ್ಯಾರ್ಥಿಗಳಿಂದ ಸಂವಿಧಾನದ ಆಶಯಗಳು ಉಳಿಸಲು ಸಾಧ್ಯ. ವಿದ್ಯಾರ್ಥಿಗಳು ಸಂವಿಧಾನದ ಮಹತ್ವಗಳ ಕುರಿತು ತಿಳಿಯಬೇಕು. ಎಲ್ಲರೂ ಸಂವಿಧಾನದ ಮೂಲಭೂತ ಹಕ್ಕುಗಳು ಎಂದಾಗ ಧ್ವನಿ ಎತ್ತುತ್ತಾರೆ ಆದರೆ ಮೂಲಭೂತ ಕರ್ತವ್ಯಗಳನ್ನು ಪಾಲಿಸಲು ಮುಂದೆ ಬರುವುದಿಲ್ಲ. ಮೂಲಭೂತ ಹಕ್ಕುಗಳನ್ನು ಕೇಳುವುದರ ಜೊತೆಗೆ ಮೂಲಭೂತ ಕರ್ತವ್ಯಗಳನ್ನು ನಿಭಾಯಿಸೋಣ. ಭಾರತೀಯರಾದ ನಮ್ಮೆಲ್ಲರ ಮನೆಗಳಲ್ಲೂ ಸಂವಿಧಾನದ ಪ್ರತಿ ಇರಬೇಕು ಅದನ್ನು ಓದುವ ಅರ್ಥೈಸಿಕೊಳ್ಳುವ ಹವ್ಯಾಸವನ್ನು ರೂಡಿಸಿಕೊಳ್ಳಬೇಕು ಎಂದು ಹೇಳಿದರು.

ಪಿ .ಇ. ಎಸ್ ಕಾನೂನು ಕಾಲೇಜಿನ ಪ್ರಾಧ್ಯಾಪಕರಾದ ಸುಭಾಷ್ ಎನ್.ಸಿ.ಅವರು ಮಾತನಾಡಿ 1949 ನವೆಂಬರ್ 26 ರಂದು ಸಂವಿಧಾನವನ್ನು ಜಾರಿಗೆ ತರಲಾಯಿತು. 1950 ಜನವರಿ 26 ರಂದು ಭಾರತೀಯ ಸಂವಿಧಾನವನ್ನು ಅಂಗೀಕರಿಸಲಾಯಿತು. ಭಾರತೀಯ ಸಂವಿಧಾನ ಸರ್ಕಾರವನ್ನು ಹೇಗೆ ರಚಿಸಬೇಕು. ಸಮಾಜದ ಕರ್ತವ್ಯಗಳು ಏನು ಎಂಬುದನ್ನು ತಿಳಿಸುತ್ತದೆ.

ಭಾರತೀಯ ಸಂವಿಧಾನದಲ್ಲಿ 395 ಅನುಚ್ಛೇದಗಳು, 28 ಭಾಗಗಳು ಹಾಗೂ 8 ಷೆಡ್ಯೂಲ್ ಗಳು ಇವೆ. ಪ್ರಪಂಚದ ಯಾವುದೇ ದೇಶದ ಸಂವಿಧಾನಕ್ಕೂ ಭಾರತ ಸಂವಿಧಾನ ಹೊಂದಿರುವಷ್ಟು ಅನುಚ್ಛೇದಗಳನ್ನು ಹೊಂದಿಲ್ಲ. ವಿಶ್ವದಲ್ಲೇ ಅತಿ ದೊಡ್ಡ ಲಿಖಿತ ಸಂವಿಧಾನವಾಗಿ ಭಾರತ ಸಂವಿಧಾನ ಇದೆ. ಇದರ ಸಂಪೂರ್ಣ ರಚನೆಯ ಜವಾಬ್ದಾರಿ ಡಾ. ಬಿ .ಆರ್ ಅಂಬೇಡ್ಕರ್ ಅವರದ್ದು ಹಾಗಾಗಿಯೇ ಅವರನ್ನು ಭಾರತ ಸಂವಿಧಾನದ ಪಿತಾಮಹ ಎಂದು ಕರೆಯಲಾಗುತ್ತದೆ.

ಭಾರತೀಯ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳು, ಕರ್ತವ್ಯಗಳು ಹಾಗೂ ರಾಜ್ಯ ನೀತಿ ನಿರ್ದೇಶಕ ತತ್ವಗಳ, ಮತದಾನ ಸೇರಿದಂತೆ ಅನೇಕ ವಿಚಾರಗಳ ಕುರಿತು ತಿಳಿಸಲಾಗಿದೆ. ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಅಳವಡಿಸಿಕೊಂಡ ರಾಜ್ಯಗಳು ಅಭಿವೃದ್ಧಿ ಹೊಂದುತ್ತವೆ. ಸಂವಿಧಾನದಲ್ಲಿ 11 ಮೂಲಭೂತ ಕರ್ತವ್ಯಗಳಿವೆ ಇವುಗಳನ್ನು ಭಾರತೀಯರಾದ ನಾವು ಪಾಲನೆ ಮಾಡಬೇಕು ಇಲ್ಲವಾದಲ್ಲಿ ನಮ್ಮ ಮೇಲು ಸಹ ಕಾನೂನು ಕ್ರಮ ಜರುಗಿಸಬಹುದು ಎಂದು ಹೇಳಿದರು.

ನಂತರ ಜಿಲ್ಲಾಧಿಕಾರಿ ಡಾ ಕುಮಾರ ಅವರು ನೆರೆದಿದ್ದ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಗೆ ಸಂವಿಧಾನ ಪ್ರತಿಜ್ಞಾ ವಿಧಿ ಬೋಧಿಸಿದರು

ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಹಾಗೂ ಸನ್ಮಾನ ಮಾಡುವ ಮೂಲಕ ಅವರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಶ್ರೀನಿವಾಸ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ.ಚಲುವಯ್ಯ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಕಾವ್ಯ, ಡಿ.ದೇವರಾಜ್ ಅರಸು ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಎಲ್. ಸಂದೇಶ್, ಡಾ. ಬಾಬು ಜಗಜೀವನರಾಂ ಒಕ್ಕೂಟದ ಅಧ್ಯಕ್ಷ ಎನ್.ಆರ್. ಚಂದ್ರಶೇಖರ್, ಮುಖಂಡರುಗಳಾದ ಅಮ್ಜದ್ ಪಾಷಾ, ಕೃಷ್ಣ ಶ್ರೀಧರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಂವಿಧಾನ ದಿನಾಚರಣೆ ಅಂಗವಾಗಿ ಅದ್ದೂರಿ ಮೆರವಣಿಗೆ: ಸಂವಿಧಾನ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿಯಿಂದ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದ ವರೆಗೆ ಅದ್ದೂರಿ ಮೆರವಣಿಗೆ ಆಯೋಜಿಸಲಾಗಿತ್ತು.

ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್. ನಂದಿನಿ, ಜಿಲ್ಲಾ ಪೊಲೀಸ್ ಅಧೀಕ್ಷಕ ಮಲ್ಲಿಕಾರ್ಜುನ ಬಾಲದಂಡಿ ಅವರು ವರ್ಣರಂಜಿತ ಬೆಳ್ಳಿರಥದ ಮೇಲೆ ಇರಿಸಲಾಗಿದ್ದ ಡಾ.ಬಿ.ಆರ್ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಿದರು. ಮೆರವಣಿಗೆಯಲ್ಲಿ ಪೂರ್ಣ ಕುಂಭ ಹೊತ್ತು ಮಹಿಳೆಯರು. ಡೊಳ್ಳು ಕುಣಿತ, ವಿದ್ಯಾರ್ಥಿಗಳು ಸಂವಿಧಾನದ ಕುರಿತಾಗಿ ನಾಮಫಲಕಗಳನ್ನು ಪ್ರದರ್ಶಿಸುವ ಮೂಲಕ ಜನರಿಗೆ ಜಾಗೃತಿ ಮೂಡಿಸಲಾಯಿತು.

# ನ.28ರಿಂದ 30ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು



**ಮಂಡ್ಯ:** ಮುದ್ದನಘಟ್ಟ ಗ್ರಾಮದಲ್ಲಿ ಪುರಾತನ ಶ್ರೀ ಬಾಲದಂಡೆ ಹನುಮಂತರಾಯಸ್ವಾಮಿ ದೇವಾಲಯವನ್ನು ನೂತನವಾಗಿ ಜೀರ್ಣೋದ್ಧಾರ ಮಾಡಿದ್ದು, ನ.28ರಿಂದ 30ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಆಂಜನೇಯಸ್ವಾಮಿ ದೇವಾಲಯ ಸೇವಾ ಟ್ರಸ್ಟ್ ಅಧ್ಯಕ್ಷ ಮಹಾಲಿಂಗೇಗೌಡ ಮುದ್ದನಘಟ್ಟ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, ಈ ದೇವಾಲಯವು ಹೊಯ್ಸಳ ದೊರೆ 2ನೇ ವೀರ ನರಸಿಂಹ ಅವರ ದಂಡನಾಯಕ ಹರಿಹರ ಅವರಿಂದ ಸ್ಥಾಪಿತವಾಗಿತ್ತು ಎಂಬುದು ಗ್ರಾಮದ ಸುತ್ತಮುತ್ತಲ ಜಾನಪದರ ಹಾಡುಗಳಲ್ಲಿ ತಿಳಿಯುತ್ತದೆ ಎಂದರು.

ನ.28ರಿಂದ ದೇವಾಲಯದಲ್ಲಿ ಬಿಂಬಪ್ರಾಣ ಪ್ರತಿಷ್ಠಾಪನೆ, ವಿಮಾನಗೋಪುರ, ಕಳಸ ಪ್ರತಿಷ್ಠಾಪನೆ, ಕುಂಭಾಭಿಷೇಕ, ಸಂಪ್ರೋಕ್ಷಣಾ ಮಹೋತ್ಸವ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ನ.30ರಂದು ಮಧ್ಯಾಹ್ನ 1 ಗಂಟೆಗೆ ಆದಿಚುಂಚನಗಿರಿ ಪೀಠಾಧಿಪತಿಗಳಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ ಮೂರ್ತಿ ಪ್ರತಿಷ್ಠಾಪನೆ ನೆರವೇರಿಸಿ, ಲೋಕಾರ್ಪಣೆ ಮಾಡಲಿದ್ದಾರೆ. ನಂತರ ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಲಿದ್ದಾರೆ ಎಂದು ಹೇಳಿದರು.

ಶಾಶ್ವತಿ ಧಾರ್ಮಿಕ ಕ್ರಿಯಾ ಸಮಿತಿ ಅಧ್ಯಕ್ಷ ಭಾನುಪ್ರಕಾಶ್ ಸರ್ಮ, ಮೇಲುಕೋಟೆ ಚಲುವರಾಯಸ್ವಾಮಿ ದೇವಾಲಯದ ಸ್ಥಾನಿಕ ಶ್ರೀಗಳಾದ ಶ್ರೀನಿವಾಸ ನರಸಿಂಹನ್ ಗುರೂಜಿ ಹಾಗೂ ಪಾಂಚರಾತ್ರ ಆಗಮ ಪುರೋಹಿತರಾದ ಕೃಷ್ಣಮೂರ್ತಿ ತಂಡದಿಂದ ಪೂಜಾ ವಿಧಿವಿಧಾನಗಳು ನೆರವೇರಲಿವೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದಿಂದ ಸಾಂಸ್ಕೃತಿಕ ಕಾರ್ಯಕ್ರಮ, ಶಿವಾರ್ ಉಮೇಶ್ ತಂಡದಿಂದ ಗೀತಗಾಯನ ಕಾರ್ಯಕ್ರಮಗಳು ನೆರವೇರಲಿದೆ. ಇದೇ ವೇಳೆ ಕೆಂಪೇಗೌಡ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ರಾಜ್ಯ ಒಕ್ಕಲಿಗರ ಸಂಘದ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ದೇವಾಲಯದ ಕಾರ್ಯಕ್ರಮಕ್ಕಾಗಮಿಸುವ ಎಲ್ಲರಿಗೂ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದು ವಿವರಿಸಿದರು.

ಗೋಷ್ಠಿಯಲ್ಲಿ ಗ್ರಾಮದ ಪರಮೇಶ್ವರ್, ಶಶಿಕುಮಾರ್, ತೇಜಸ್‌ಗೌಡ ಇದ್ದರು.

# ‘40,000 ಸರಕಾರಿ ಶಾಲೆಗಳ ಮುಚ್ಚುವ ಹುನ್ನಾರ’

**ಮಂಡ್ಯ:** ರಾಜ್ಯ ಸರಕಾರವು ‘ಕೆಪಿಎಸ್ ಮ್ಯಾಗ್ನೆಟ್’ ಯೋಜನೆಯ ಮೂಲಕ ರಾಜ್ಯ 40,000 ಸರಕಾರಿ ಶಾಲೆಗಳನ್ನು ಮುಚ್ಚುವ ಹುನ್ನಾರ ನಡೆಸುತ್ತಿದ್ದು, ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಡ್ಸ್ ಆರ್ಗನೈಜೇಷನ್(ಎಐಡಿಎಸ್‌ಓ) ಈ ಯೋಜನೆಯನ್ನು ತೀವ್ರವಾಗಿ ವಿರೋಧಿಸುತ್ತದೆ ಎಂದು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಸ್ವಾತಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರಕಾರದ ಈ ‘ಕೆಪಿಎಸ್ ಮ್ಯಾಗ್ನೆಟ್’ ಯೋಜನೆಯು ಗ್ರಾಮೀಣ ಭಾಗದ ಮಕ್ಕಳ ಶಿಕ್ಷಣದ ಹಕ್ಕನ್ನು ಕಸಿಯುವ ಯೋಜನೆಯಾಗಿದೆ. ಈ ಮೂಲಕ ಬಡವರ್ಗದ ಶಿಕ್ಷಣ ಹಕ್ಕಿನ ಮೇಲೆ ಪ್ರಹಾರ ನಡೆಸಲಾಗುತ್ತಿದೆ ಎಂದು ಖಂಡಿಸಿದರು.

ಕರ್ನಾಟಕ ಪಬ್ಲಿಕ್ ಶಾಲೆ(ಕೆಪಿಎಸ್) ಮೂಲಕ ಹೆಚ್ಚಿನ ಶಿಕ್ಷಣಕ್ಕೆ ಆದ್ಯತೆ ನೀಡಿರುವುದು ಸ್ವಾಗತಾರ್ಹ. ಆದರೆ ‘ಕೆಪಿಎಸ್ ಮ್ಯಾಗ್ನೆಟ್’ ಯೋಜನೆಯನ್ನು ತಂದು ಪ್ರತಿ ಗ್ರಾಮ ಪಂಚಾಯಿತಿಯ 1ರಿಂದ 6 ಕಿ.ಮೀ ವ್ಯಾಪ್ತಿಯಲ್ಲಿನ ಶಾಲೆಗಳನ್ನು ವಿಲೀನಗೊಳಿಸುವುದು ಬಡವರನ್ನು ಶಿಕ್ಷಣದಿಂದ ವಿಮುಖ ಮಾಡಿದಂತಾಗುತ್ತದೆ. ಗ್ರಾ.ಪಂ ಒಂದರಂತೆ 6000 ‘ಕೆಪಿಎಸ್ ಮ್ಯಾಗ್ನೆಟ್" ಶಾಲೆಗಳನ್ನು ತೆರೆಯುವ ಗುರಿ ನಿಗದಿಪಡಿಸಿದೆ. ಮೊದಲ ಹಂತದಲ್ಲಿ ರಾಜ್ಯದ 800 ಶಾಲೆಗಳನ್ನು ‘ಕೆಪಿಎಸ್ ಮ್ಯಾಗ್ನೆಟ್’ ಶಾಲೆಗಳೆಂದು ಗುರುತಿಸಿ ಇದೇ ಅ.15ರಂದು ಸುತ್ತೋಲೆ ಹೊರಡಿಸಿದೆ ಎಂದು ಹೇಳಿದರು.

ಚನ್ನಪಟ್ಟಣ ತಾಲೂಕಿನ ಹೊಂಗನೂರು ಗ್ರಾಮದ ಶಾಲೆಯನ್ನು ‘ಕೆಪಿಎಸ್ ಮ್ಯಾಗ್ನೆಟ್’ ಶಾಲೆಯೆಂದು ಗುರುತಿಸಿ, 6 ಕಿ.ಮೀ ವ್ಯಾಪ್ತಿಯ ಶಾಲೆಗಳನ್ನು ತುರ್ತಾಗಿ



ವಿಲೀನಗೊಳಿಸಲು ಅ.23ರಂದು ಆದೇಶ ನೀಡಲಾಗಿದೆ. ಈ ರೀತಿ ಮುಂದುವರೆದರೆ ರಾಜ್ಯದ 40 ಸಾವಿರಕ್ಕೂ ಅದಿಕ ಶಾಲೆಗಳು ವಿಲೀನಗೊಂಡು ಮುಚ್ಚಲ್ಪಡುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು. ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯಲ್ಲಿಯೂ ‘ಕೆಪಿಎಸ್ ಮ್ಯಾಗ್ನೆಟ್’ ಶಾಲೆಯನ್ನು ಆರಂಭಿಸಿ ಇತರ ಸರಕಾರಿ ಶಾಲೆಗಳ 900 ವಿದ್ಯಾರ್ಥಿಗಳನ್ನು ವಿಲೀನಗೊಳಿಸಲಾಗಿದೆ. ಶಿಕ್ಷಕರ ನೇಮಕಕ್ಕೆ ಶಾಲೆಗಳಲ್ಲಿ ಪ್ರತಿ ವಿದ್ಯಾರ್ಥಿಯಿಂದ 5000 ರೂ ಪಡೆಯಲಾಗುತ್ತಿರುವುದಾಗಿ ಎಐಡಿಎಸ್‌ಓಗೆ ಮಾಹಿತಿ ದೊರೆತಿದೆ ಎಂದು ಗಂಭೀರ ಆರೋಪ ಮಾಡಿದರು.

ಗೋಷ್ಠಿಯಲ್ಲಿ ಜಿಲ್ಲಾ ಸಂಚಾಲಕ ವಿ.ಚಂದ್ರಿಕ ಇದ್ದರು.

# ನ.28ರಂದು ಪ್ರತಿಭಾ ಪುರಸ್ಕಾರ ಹಾಗೂ ಗಣ್ಯರಿಗೆ ಅಭಿನಂದನಾ ಸಮಾರಂಭ



**ಮಂಡ್ಯ:** ಜಿಲ್ಲಾ ಕುರುಬರ ಸಂಘದ ವತಿಯಿಂದ 2023–24 ಹಾಗೂ 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.90ರಷ್ಟು ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಗಣ್ಯರಿಗೆ ಅಭಿನಂದನಾ ಸಮಾರಂಭವನ್ನು ನ.28ರ ಮಧ್ಯಾಹ್ನ 2 ಗಂಟೆಗೆ ಆಯೋಜಿಸಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಎಂ.ಎಲ್.ಸುರೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿಯ 45, ದ್ವಿತೀಯ ಪಿಯುಸಿಯ 50 ವಿದ್ಯಾರ್ಥಿಗಳು ಸೇರಿ 90 ಮಂದಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು.

ಕಾಗಿನೆಲೆ ಕನಕಗುರು ಪೀಠದ ಶ್ರೀ ಶಿವಾನಂದಪುರಿ ಸ್ವಾಮೀಜಿಗಳ ದಿವ್ಯ ಸಾನಿಧ್ಯದ ಕಾರ್ಯಕ್ರಮದಲ್ಲಿ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸುವರು. ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸುವರು. ಬೆನಕ ಬಿಲ್ಡರ್ಸ್ & ಡೆವಲಪರ್ಸ್‌ನ ಡಿ.ನರಹರಿ ಹಾಗೂ ರಾಜ್ಯ ಆರ್‌ಟಿಓ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಅವರು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಿದ್ದಾರೆ. ಸಂಘದ ಅಧ್ಯಕ್ಷ ಎಂ.ಎಲ್.ಸುರೇಶ್ ಅಧ್ಯಕ್ಷತೆ ವಹಿಸುವರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ, ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಹಾಗೂ ಶಾಸಕ ಪಿ.ಎಂ.ನರೇಂದ್ರಸ್ವಾಮಿ, ರಾಮಮನೋಹರ ಲೋಹಿಯಾ ವಿಚಾರ ವೇದಿಕೆಯ ಅಧ್ಯಕ್ಷ ಬಿ.ಎಸ್.ಶಿವಣ್ಣ, ಕೆ.ಆರ್.ನಗರ ಶಾಸಕ ಡಿ.ರವಿಶಂಕರ್, ಚೆಸ್ಕಾಂ ಅಧ್ಯಕ್ಷ ಹಾಗೂ ಶಾಸಕ ರಮೇಶ್ ಬಂಡಿಸಿದ್ದೇಗೌಡ ಸೇರಿದಂತೆ ಜಿಲ್ಲೆಯ ಎಲ್ಲ ಶಾಸಕರು, ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳ ಅಧ್ಯಕ್ಷ, ಸಮಾಜ ಸೇವಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ವಿವರಿಸಿದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಅಧಿಕಾರಿಗಳು, ಸಾಧಕರು, ಸಮಾಜ ಸೇವಕರು, ಜನಪ್ರತಿನಿಧಿಗಳಿಗೆ ಸನ್ಮಾನಿಸಿ ಅಭಿನಂದಿಸಲಾಗುವುದು ಎಂದು ಮಾಹಿತಿ ನೀಡಿದರು. ಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಶ್ರೀನಿವಾಸ್, ಖಜಾಂಚಿ ಎಸ್.ಎನ್. ರಾಜು, ಸಂಘಟನಾ ಕಾರ್ಯದರ್ಶಿ ಎಂ.ಲೋಕೇಶ್, ಆಂತರಿಕ ಲೆಕ್ಕಪರಿಶೋಧಕ ಎಂ.ಮಹೇಶ್ ಇತರರಿದ್ದರು.

# ಗೋವಾದಲ್ಲಿ ಶ್ರೀರಾಮನ ಪ್ರತಿಮೆ: ನವೆಂಬರ್ 28ರಂದು ಪ್ರಧಾನಿ ಮೋದಿ ಅನಾವರಣ

ಕಾರವಾರ: ನವೆಂಬರ್ 28 ರಂದು ಗೋವಾದ ಗೋಕರ್ಣ ಪಾರ್ಥಗಲಿ ಜೀವೋತ್ತಮ ಮಠದಲ್ಲಿ 77 ಅಡಿ ಎತ್ತರದ ಶ್ರೀರಾಮನ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ. ಗೌಡ ಸಾರಸ್ವತ ಬ್ರಾಹ್ಮಣ ಸಮುದಾಯದ ಅತ್ಯಂತ ಪೂಜ್ಯ ಮಠಗಳಲ್ಲಿ ಒಂದಾದ ಮಠ, ತನ್ನ 550 ನೇ ಸಂಸ್ಥಾಪನಾ ವಾರ್ಷಿಕೋತ್ಸವವನ್ನು ಸಾರ್ಥ ಪಂಚ ಶತಮಾನೋತ್ಸವ (550 ನೇ ವಾರ್ಷಿಕೋತ್ಸವ) ದೊಂದಿಗೆ ಆಚರಿಸಲು ಸಜ್ಜಾಗಿದೆ. ಮಾರ್ಗಶಿರ ಶುಕ್ಲ ಸಪ್ತಮಿಯಿಂದ ಮಾರ್ಗಶಿರ ಕೃಷ್ಣ ತೃತೀಯಾ ಅವಧಿಗೆ ಹೊಂದಿಕೆಯಾಗುವ 11 ದಿನಗಳ ಆಚರಣೆಯು ಪಾರ್ತಗಲಿಯ ಕೇಂದ್ರ ಮಠದಲ್ಲಿ ನವೆಂಬರ್ 27 ರಿಂದ ಡಿಸೆಂಬರ್ 7 ರವರೆಗೆ ನಡೆಯಲಿದೆ ಎಂದು ಸಾರ್ಥ ಪಂಚ ಶತಮಾನೋತ್ಸವ ಸಮಿತಿಯ ಜಂಟಿ ಸಂಚಾಲಕ ಮುಕುಂದ್ ಕಾಮತ್ ಹೇಳಿದ್ದಾರೆ.

# ಅರುಣಾಚಲ ಪ್ರದೇಶ ಭಾರತದ "ಅವಿಭಾಜ್ಯ–ಅಳಿಸಲಾಗದ" ಭಾಗ: ಚೀನಾಗೆ ಭಾರತ ತಿರುಗೇಟು

**ನವದೆಹಲಿ:** ಅರುಣಾಚಲ ಪ್ರದೇಶದ ಮಹಿಳೆಯನ್ನು ಚೀನಾ ಬಂಧನಕ್ಕೊಳಪಡಿಸಿರುವುದಕ್ಕೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಅರುಣಾಚಲ ಪ್ರದೇಶ ಭಾರತದ ಅವಿಭಾಜ್ಯ ಮತ್ತು ಅಳಿಸಲಾಗದ ಭಾಗವಾಗಿದೆ ಎಂದು ಪುನರುಚ್ಚರಿಸಿದೆ.

ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರರ ಇತ್ತೀಚಿನ ಹೇಳಿಕೆಗಳ ಕುರಿತು ಮಾಧ್ಯಮ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು, ಅರುಣಾಚಲ ಪ್ರದೇಶ ಭಾರತದ ಅವಿಭಾಜ್ಯ, ಎಂದಿಗೂ ಬೇರ್ಪಡಿಸಲಾಗದ ಭಾಗವಾಗಿದೆ. ಇದು ಸ್ವಯಂ–ಸ್ಪಷ್ಟ ಹಾಗೂ ಸತ್ಯ. ಚೀನಾದ ಕಡೆಯಿಂದ ಎಷ್ಟೇ ನಿರಾಕರಣೆ ಬಂದರೂ ಈ ನಿರ್ವಿವಾದದ ವಾಸ್ತವವನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ತಿರುಗೇಟು ನೀಡಿದ್ದಾರೆ.

ಇದೇ ವೇಳೆ ಚೀನಾದ ಅಧಿಕಾರಿಗಳ ವಿರುದ್ಧ ನವದೆಹಲಿಯಲ್ಲಿರುವ ಕಚೇರಿಗೆ ಬಲವಾದ ಪ್ರತಿಭಟನೆ ದಾಖಲಿಸಲಾಗಿದೆ ಎಂದೂ ತಿಳಿಸಿದ್ದಾರೆ.

ಕಾನೂನುಬದ್ಧವಾಗಿ ಮಾನ್ಯ ಭಾರತೀಯ ಪಾಸ್‌ಪೋರ್ಟ್‌ನಲ್ಲಿ ಸಾಗುತ್ತಿದ್ದ ಪ್ರಯಾಣಿಕರ ನಡವಳಿಕೆ ಸಮರ್ಥಿಸಲು ಚೀನಾ ಅಧಿಕಾರಿಗಳು ವಿಫಲರಾಗಿದ್ದಾರೆಂದು ಹೇಳಿದ್ದಾರೆ. ಚೀನಾದ ಕ್ರಮಗಳು ಸಮರ್ಥನೀಯವಲ್ಲ. ಅಂತಾರಾಷ್ಟ್ರೀಯ ವಿಮಾನಯಾನ ಶಿಷ್ಟಾಚಾರವನ್ನ ನೇರವಾಗಿ ಉಲ್ಲಂಘಿಸಿದೆ. ಈ ಬಗ್ಗೆ ಇನ್ನೂ ವಿವರಣೆ ಕೊಡಲು ಸಾಧ್ಯವಾಗಿಲ್ಲ ಎಂದಿದ್ದಾರೆ. ಸಾಮಾನ್ಯವಾಗಿ ಎಲ್ಲಾ ದೇಶಗಳ ನಾಗರಿಕರಿಗೆ 24 ಗಂಟೆಗಳವರೆಗೆ ವೀಸಾ–ಮುಕ್ತ ಸಾರಿಗೆಯನ್ನ ಅನುಮತಿಸುತ್ತದೆ. ಆದಾಗ್ಯೂ, ಈ ಪ್ರಕರಣದಲ್ಲಿ, ಅಧಿಕಾರಿಗಳು ವಿವರಿಸಲಾಗದಂತೆ ಪ್ರಯಾಣಿಕರ ಜನ್ಮಸ್ಥಳವಾದ ಅರುಣಾಚಲ ಪ್ರದೇಶವನ್ನ ಗುರಿಯಾಗಿಸಿಕೊಂಡು, ಅದು ಚೀನಾಕ್ಕೆ ಸೇರಿದ್ದು ಎಂದು ಹೇಳಿಕೊಂಡು, ಅವರ ಭಾರತೀಯ ಪಾಸ್‌ಪೋರ್ಟ್ ಅನ್ನು ?ಅಮಾನ್ಯ? ಎಂದು ಘೋಷಿಸಿದ್ದಾರೆ. ಇದರೊಂದಿಗೆ ಚೀನಾ ತನ್ನದೇ ಆದ ನಿಯಮಗಳನ್ನು ಉಲ್ಲಂಘಿಸಿದೆ ಎಂದು ಒತ್ತಿ ಹೇಳಿದ್ದಾರೆ. ಇದಕ್ಕೂ ಮೊದಲು, ಶಾಂಘೈ ವಿಮಾನ ನಿಲ್ದಾಣದಲ್ಲಿ ಭಾರತೀಯ ಮಹಿಳೆಯೊಬ್ಬರಿಗೆ ಚೀನಾದ ಅಧಿಕಾರಿಗಳು ಕಿರುಕುಳ ನೀಡಿದ್ದಾರೆ ಎಂಬ ಆರೋಪಗಳನ್ನು ಚೀನಾ ನಿರಾಕರಿಸಿತ್ತು. ಶಾಂಗ್ಸ್ ನಿಲ್ದಾಣದಲ್ಲಿ ವಲಸೆ ಅಧಿಕಾರಿಗಳು ತಮ್ಮ ಪಾಸ್‌ಪೋರ್ಟ್ ಅನ್ನು ಪರಿಗಣಿಸಲು ನಿರಾಕರಿಸಿ 18 ತಾಸು ವಶಕ್ಕೆ ಪಡೆದಿದ್ದರು ಎಂದು ಬ್ರಿಟನ್‌ನಲ್ಲಿ ನೆಲಸಿರುವ ಅರುಣಾಚಲ ಪ್ರದೇಶದ ಪೆಮಾ ವಾಂಗ್‌ಮ್ ತೊಂಗ್‌ಡಾಕ್ ಎಂಬವರು ಸೋಮವಾರ ಆರೋಪಿಸಿದ್ದರು.

# ದೇಶ ಸುಭದ್ರವಾಗಿರಲು ಸಂವಿಧಾನ ಕಾರಣ: ಎಚ್ ಎಂ ಗಣೇಶ್ ಪ್ರಸಾದ್



ಗುಂಡ್ಲುಪೇಟೆ: ತಾಲ್ಲೂಕು ಆಡಳಿತ ಮತ್ತು ಸಮಾಜಕಲ್ಯಾಣ ಇಲಾಖೆ ವತಿಯಿಂದ ಪಟ್ಟಣದ ಗುರು ಭವನದಲ್ಲಿ ಸಂವಿಧಾನ ದಿನ ಆಚರಿಸಲಾಯಿತು ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಕಾರ್ಯಕ್ರಮ ಉದ್ಘಾಟಿಸಿದರು.

ಎಚ್ ಎಂ ಗಣೇಶ್ ಪ್ರಸಾದ್ ಮಾತನಾಡಿ ನಮ್ಮ ದೇಶ ಸುಭದ್ರ ಮತ್ತು ಸುಭೀಕ್ಷವಾಗಿರಲು ಮುಖ್ಯ ಕಾರಣ ಸಂವಿಧಾನ, ಡಾ.ಬಿ ಅರ್ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ರಚನೆಯಾದ ಸಂವಿಧಾನ ಪ್ರಪಂಚದಾದ್ಯಂತ ಮಹತ್ವವನ್ನು ಪಡೆದಿದೆ, ಇತ್ತೀಚಿನ ದಿನಗಳಲ್ಲಿ ಮನುಷ್ಯನ ಜೀವನ ಶೈಲಿ ಬದಲಾಗುತ್ತಿದೆ ಸೈಬರ್ ಕ್ರೈಂ, ಸಾಮಾಜಿಕ ಜಾಲತಾಣಗಳ ಮೂಲಕ ಅಪಪ್ರಚಾರ, ಬೇಡದೆ ಇರುವ ವಿಚಾರಗಳು ಪ್ರಚೋದನಕಾರಿ ಹೇಳಿಕೆಗಳು ನಮ್ಮ ದೇಶದಲ್ಲಿ ಚರ್ಚೆಯಾಗುತ್ತಿವೆ, ಇದಕ್ಕೆ ಕಡಿವಾಣ ಹಾಕುವ ಕೆಲಸವಾಗಬೇಕಿದೆ ಎಂದರು.


ಭಾರತದ ಸಂವಿದಾನಕ್ಕೆ ತನ್ನದೆಯಾದ ಶಕ್ತಿ ಇದೆ ಕಾನೂನು ಚೌಕಟ್ಟಿನಲ್ಲಿ ದೇಶ ನಡೆಯುತ್ತಿದೆ ಅಂಬೇಡ್ಕರ್ ರವರಿಗೆ ಒಂದು ದೂರದೃಷ್ಟಿ ಇತ್ತು ನಮ್ಮ ಸಮಾಜ ಮುಂದೆ ಬರಬೇಕು ದೇಶಕ್ಕೆ ಕೊಡೆಗೆ ಕೊಡಬೇಕು ಎಂಬ ಚಿಂತನೆ ಇತ್ತು, ಸಾಮಾಜಿಕವಾಗಿ ಯೋಚನೆ ಮಾಡಬೇಕು ಸ್ವಾರ್ಥಿಗಳಾಗಬಾರದು ಅಗಾಗಿಯೇ ಎಲ್ಲರಿಗೂ ಅನುಕೂಲವಾಗುವ ಸಂವಿಧಾನವನ್ನು ಅಂಬೇಡ್ಕರ್ ರವರು ರಚಿಸಿದ್ದಾರೆ ಎಂದರು.

75 ವರ್ಷಗಳಿಂದ ಸಂವಿಧಾನ ಪಾಲಿಸುತ್ತ ಬರುತಿದ್ದು ಅದು ಯಾವುದೇ ಕಾರಣಕ್ಕೂ ಬದಲಾವಣೆಯಾಗುವುದಿಲ್ಲ, ಕಾರ್ಮಿಕರ ಕೆಲಸಗಳನ್ನು, ತಂತ್ರಜ್ಞಾನ ಮೂಲಕ ಮಾಡಲಾಗುತ್ತದೆ ಅದರೆ ಸಂವಿಧಾನ ಎಂದಿಗು ಪ್ರಸ್ತುತ ಅಗಾಗಿ ನಾವು ಸಂವಿಧಾನದ ಅಡಿಯಲ್ಲಿ ಬದುಕುತಿದ್ದು ಸಂವಿಧಾನ ಗೌರವಿಸಬೇಕಿದೆ ಎಂದರು.

ನಂತರ ತಹಶೀಲ್ದಾರ್ ತನ್ಮಯ್ ಸಂವಿಧಾನದ ದಿನದ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯತ ಆಡಳಿತಾಧಿಕಾರಿ ಬಸವರಾಜು, ತಹಶೀಲ್ದಾರ್ ತನ್ಮಯ್, ತಾ.ಪಂ ಇಓ ಷಣ್ಮುಗಂ, ಪುರಸಭೆ ಮುಖ್ಯಾಧಿಕಾರಿ ಶರವಣ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಕುಮಾರ್, ಪುರಸಭೆ ಮಾಜಿ ಅಧ್ಯಕ್ಷ ಶಶಿಧರ್ ದೀಪು, ವಾಲ್ಮೀಕಿ ಪ್ರಶಸ್ತಿ ಪುರಸ್ಕೃತ ಡಾ ರತ್ನಮ್ಮ ಮಾಜಿ ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ನಾ ಕುಮಾರ್ ಮತ್ತಿತರರಿದ್ದರು. ಸರ್ಕಾರಿ ಕಾರ್ಯಕ್ರಮಗಳಲ್ಲಿ ಪ್ರೋಟೋಕಾಲ್ ನಿಯಮ ಅನುಸರಿಸುತ್ತಿಲ್ಲ, ಅಹ್ವಾನ ಪತ್ರಿಕೆಯಲ್ಲಿ ಇಲ್ಲದವರು ವೇದಿಕೆ ಮೇಲೆ ಕುಳಿತುಕೊಳ್ಳುತ್ತಾರೆ, ಅಧಿಕಾರಿಗಳು ಪ್ರಶ್ನಿಸುವ ಧೈರ್ಯ ಮಾಡುತ್ತಿಲ್ಲ ಇತ್ತ ಮುಂದಿನ ದಿನಗಳಲ್ಲಿ ಜನಪ್ರತಿನಿಧಿ ಅಲ್ಲದವರು ಅಧಿಕಾರಿಗಳು ಬಿಟ್ಟು ರಾಜಕಾರಣಿಗಳ ಹಿಂಬಾಲಕರು ಸರ್ಕಾರಿ ವೇದಿಕೆ ಏರದಂತೆ ಶಾಸಕರು, ಅಧಿಕಾರಿಗಳು ಗಮನಹರಿಸಬೇಕು.

### ‘ಪ್ರೋಟೋಕಾಲ್ ನಿಯಮ ಅನುಸರಿಸುತ್ತಿಲ್ಲ’

**ಸರ್ಕಾರಿ ಕಾರ್ಯಕ್ರಮಗಳಲ್ಲಿ ಪ್ರೋಟೋಕಾಲ್ ನಿಯಮ ಅನುಸರಿಸುತ್ತಿಲ್ಲ, ಅಹ್ವಾನ ಪತ್ರಿಕೆಯಲ್ಲಿ ಇಲ್ಲದವರು ವೇದಿಕೆ ಮೇಲೆ ಕುಳಿತುಕೊಳ್ಳುತ್ತಾರೆ, ಅಧಿಕಾರಿಗಳು ಪ್ರಶ್ನಿಸುವ ಧೈರ್ಯ ಮಾಡುತ್ತಿಲ್ಲ ಇತ್ತ ಮುಂದಿನ ದಿನಗಳಲ್ಲಿ ಜನಪ್ರತಿನಿಧಿ ಅಲ್ಲದವರು ಅಧಿಕಾರಿಗಳು ಬಿಟ್ಟು ರಾಜಕಾರಣಿಗಳ ಹಿಂಬಾಲಕರು ಸರ್ಕಾರಿ ವೇದಿಕೆ ಏರದಂತೆ ಶಾಸಕರು, ಅಧಿಕಾರಿಗಳು ಗಮನಹರಿಸಬೇಕು.**




# ಡಾ. ನಾ ಮೊಗಸಾಲೆ ಅವರ "ಕೊಪ್ಪರಿಗೆ ಮನೆ"


ಕೇರಳದ ಕಾಸರಗೋಡು ಜಿಲ್ಲೆಯ ಉತ್ತರ ತುದಿ ಮಂಜೇಶ್ವರದ ಕೋಳಿಯೂರು ಹುಟ್ಟೂರಾಗಿ ಕಾರ್ಕಳದ ಕಾಂತಾವರದಲ್ಲಿ ಜನಪ್ರಿಯ ವೈದ್ಯರಾಗಿ ಇಪ್ಪತ್ತೈದಕ್ಕೂ ಮಿಕ್ಕು ಕಾದಂಬರಿಗಳು, ಹಲವಾರು ಕಥಾ, ಕವನ ಸಂಕಲನಗಳನ್ನು ಕೊಡುತ್ತ ಉತ್ತಮ ಸಾಹಿತ್ಯ ಸಂಘಟಕನಾಗಿಯೂ ಹೆಸರಾಗಿರುವ ಡಾಟ ನಾ ಮೊಗಸಾಲೆಯವರ "ಕೊಪ್ಪರಿಗೆಮನೆ" ಇತ್ತೀಚಿನದು. ಇದರ ಮಂಜೇಶ್ವರ ಪರಿಸರದ ಕಥಾನಕದ ಕಾಲ 1870 ರಿಂದ 1930 ರ ಒಳಗಿನದು. ಕಾದಂಬರಿಯನ್ನು ಮೆಚ್ಚಿದ ಕೆಲವರು ಹೇಳುವಂತೆ ಮುಚ್ಚಿಹಾಕಿದ ನಮ್ಮ ಹಿರೀಕರ ಸಚ್ಚರಿತೆಗಳು ಇಲ್ಲಿ ಅಡಗಿವೆ.


ನಮ್ಮೆಲ್ಲ ಪೂರ್ವಜರು ದುಷ್ಟರೆಂದೂ, ಹಿಂಸಕರೆಂದೂ ಸುಳ್ಳು ಹೇಳುವ ಚರಿತ್ರೆಗೆ ಈ ಕೃತಿ ಸಡ್ಡು ಹೊಡೆದಿದೆ ಎಂದು ತಿಳಿದಿದ್ದೇನೆ. ಇದನ್ನು ಪುಟ್ಟ ಲೇಖನದ ಮೂಲಕ ವಿವರಿಸುವುದು ಕಷ್ಟ. ಅದಕ್ಕೆ ಮೊದಲು ಇದರೊಳಗಿನ ಕಥಾಂಶವನ್ನು ಸಂಗ್ರಹಿಸಿ ಹೇಳುತ್ತೇನೆ.

ಹಿಂದೆ ಪಟೇಲಿಕೆ ನೋಡುವ ಹತ್ತಾರು ಮನೆತನಗಳಿದ್ದುವಷ್ಟೆ. ಮಣ್ಣಿನ ಸಂಸ್ಕೃತಿಯಾದ ಅಳಿಯಕಟ್ಟು ಹಾಗೂ ಮಕ್ಕಳ ಕಟ್ಟು ಆಗ ಇತ್ತು. ಎಲ್ಲೆಲ್ಲೂ ಕಾಡು. ಅಲ್ಲಲ್ಲಿ ಸಾಹಸದಿಂದ ನಿರ್ಮಿಸಿದ ಕೃಷಿ ಭೂಮಿ. ಅದರೊಳಗೊಂದಿಷ್ಟು ನಾಡು. ಅಂಥ ಪರಿಸರದ ಹೆಸರಾಂತ ಅದೊಂದು ಕೊಪ್ಪರಿಗೆ ಮನೆ.

ಕ್ರೂರ ಪ್ರಾಣಿಗಳಿಂದ ರಕ್ಷಣೆಗಾಗಿಯೇ ಮನೆಗಳಿಗೆ ಆ ಗಾತ್ರವಿತ್ತು. ಪುಟ್ಟ ತಗ್ಗಾದ ದಿಡ್ಡಿಬಾಗಿಲು, ಒಳಮುಖಿ ಕೋಣೆಗಳು. ಹತ್ತಿರ ಹರಿಯುವ ನೀರ ಸೆಲೆ. ಅಂತಹ ಮನೆತನವೊಂದರ ಶಂಕರಭಟ್ಟ ಮತ್ತು ಮಡದಿ ಗಂಗಮ್ಮ. ಅವರಿಗೆ ಮೂವರು ಮಕ್ಕಳು. ಎರಡು ಹೆಣ್ಣು, ನಂತರದ್ದು ಗಂಡು. ಹೆಮ್ಮಕ್ಕಳಲ್ಲಿ ಒಬ್ಬಳ ಗಂಡ ತೀರಿಕೊಂಡಿದ್ದಾನೆ. ಇನ್ನೊಬ್ಬಳನ್ನು ಗಂಡ ಬಿಟ್ಟಿದ್ದಾನೆ. ಶಂಕರ ಭಟ್ಟರಿಗೆ ಪಟೇಲಿಕೆಯ ಜೊತೆಗೆ ದೇವಾಲಯದ ಮೊಕ್ತೇಸರ ಸ್ಥಾನವೂ ಉಂಟು. ಬ್ರಿಟಿಷ್ ಆಳಿಕೆಯನ್ನು ಬೆಂಬಲಿಸುವ ಶಿರಸ್ತೇದಾರರ ಕೈಕೆಳಗಿರುವ ಪಟೇಲರು ತಾನು ಮತ್ತು ಒಕ್ಕಲಿಗರು ಮಾಡಿದ ಕೃಷಿ ವಸ್ತು ಉತ್ಪನ್ನಗಳನ್ನು ಗೇಣಿಅಂಥವರ ತಮ್ಮನಾಗಿ ಕೇಶವ.

ಶಂಕರ ಭಟ್ಟರು ಊರ ಪಟೇಲರು. 1870 ರ ಆ ಕಾಲಘಟ್ಟ ಗೊತ್ತಲ್ಲ- ಬ್ರಿಟಿಷ್ ಆಳಿಕೆಯ ಬೆಂಗಾವಲಾದ ಶಿರಸ್ತೇದಾರರ ಕೈ ಕೆಳಗಿರುವ ಪಟೇಲರು ತಾನು ಮತ್ತು ಒಕ್ಕಲಿಗರು ಮಾಡಿದ




ಕೃಷಿ ವಸ್ತುಗಳನ್ನು ಒಟ್ಟುಗೂಡಿಸಿ ಗೇಣಿಯ ರೂಪದಲ್ಲಿ ಬ್ರಿಟಿಷ್ ಅಧಿಕಾರಿಗಳಿಗೆ ಒಪ್ಪಿಸಬೇಕು. ವಿಧೇಯನಾಗಿ ನಡಕೊಳ್ಳದಿದ್ದರೆ ಮರಣದಂತಹ ಘೋರ ಶಿಕ್ಷೆ ಖಂಡಿತಾ ಇರುತ್ತದೆ.

ಒಂದರ್ಥದಲ್ಲಿ ಅಂದಿನ ನಾಯಕರನ್ನು ಸೃಷ್ಟಿಸುವವರು ಸಾಮಾನ್ಯ ಪ್ರಜೆಗಳೇ. ಅಧಿಕಾರಶಾಹಿಯ ಕೈಕೆಳಗೆ ಎಲ್ಲರೂ ದಿಗ್ಬಂಧಿತರೇ. ಸಹಜವಾಗಿಯೇ ಎಲ್ಲರೂ ಭಟ್ಟರನ್ನು ಮುಂದಿಟ್ಟು ತಾಮ್ರದ ಮಾಡು ಹೊದಿಸಿ ದೇವಾಲಯದ ಜೀರ್ಣೋದ್ಧಾರ ಮಾಡಿಸುತ್ತಾರೆ. ಪಟೇಲರು ಸ್ವಯಂ ಸ್ಫೂರ್ತಿಯಿಂದ ಪ್ರಭುಗಳ ಹೆಸರಿಗೆ ತನ್ನ ಆಸ್ತಿಯನ್ನೇ ಅಡವಿಟ್ಟು ಇದ್ದಬದ್ದ ಆಭರಣಗಳನ್ನೂ ಮಾರುತ್ತಾರೆ. ಹೀಗೇ ನಾಡಿನ ಉದ್ಧಾರ ಆಗುತ್ತದೆನ್ನಿ. ಯಾರನ್ನಾದರೂ ಹೊಗಳಿ ಅಟ್ಟಕ್ಕೇರಿಸಿದರೆ ಕೆಲಸ ಆಗುತ್ತದೆಂಬುದಂತೂ ಸಾರ್ವಕಾಲಿಕ ಸತ್ಯ. ಅದು ಉಳ್ಳವರನ್ನೆ ಆದರೆ ಇನ್ನಷ್ಟು ಫಲಪ್ರದ. ನಾನ್ನೂರು ಪುಟಗಳುಳ್ಳ, ಸಲೀಸಾಗಿ ಓದಿಸಿಕೊಂಡು ಹೋಗುವ ಈ ಕಾದಂಬರಿ ಎಷ್ಟೊಂದು ಲಾಘವದಿಂದ ಒಂದು ಮನೆತನದ ಅಧೋಮುಖಿ ಚಲನೆಯನ್ನು ಸಂಕೇತಿಸುತ್ತದೆಂದರೆ ಓದುಗನ ಮತಿಗೆ ಅದು ಹೊಳೆಯುವುದೇ ಇಲ್ಲ. ಪಟೇಲರ ಉದಾರ ನೀತಿ ಜನಪ್ರೀತಿ, ವ್ಯವಹಾರ ಸುಭಗತೆ ಪ್ರಾಮಾಣಿಕತೆ ಮುಂತಾದ್ದು ಮಾನವೀಯತೆಯ ಉತ್ತುಂಗತೆಯನ್ನು ಪರಿಚಯಿಸುತ್ತ ಹೋಗುತ್ತದೆ. ಅದರಲ್ಲೆ ಓದುಗ ಮುಳುಗಿಬಿಡುತ್ತಾನೆ. ಓದುಗ ಅದರಲ್ಲೆ ಮುಳುಗಿಬಿಡುತ್ತಾನೆ.

ಇದ್ದಕ್ಕಿದ್ದಂತೆ ರೋಗಕ್ಕೆ ಬಲಿಯಾಗುವ ಅಪ್ಪನ ನಂತರ ಮಗ ಕೇಚಣ್ಣ ಅಧಿಕಾರಕ್ಕೆ ಬರುತ್ತಾರೆ. ತನ್ನ ಅಕ್ಕನ ಆತ್ಮಹತ್ಯೆಯ ನೋವು ಒಂದೆಡೆ ಇದ್ದರೂ ಕೇಶವ ಭಟ್ಟರು ಅಮ್ಮನ ಒತ್ತಾಯ ಮತ್ತು ಸಲಹೆಯಂತೆ ಸೋದರಿಕೆಯ ವಿವಾಹವಾಗುತ್ತಾರೆ. ಚೆಲುವೆ ಮತ್ತು ಸಾಧ್ವಿಯಾದ ಗೌರಿಯೊಂದಿನ ಅವರ ಪ್ರೀತಿ ಪ್ರೇಮ ಸರಸ ಮುಂತಾದ್ದನ್ನು ಕಾದಂಬರಿಕಾರ ತೆರೆದಿಟ್ಟ ರೀತಿ ಅನನ್ಯ. ಆದರೆ ದುರಂತವೆಂದರೆ ಮತ್ತೆ ಮತ್ತೆ ಗರ್ಭಪಾತವಾಗಿ ಗೌರಿ ಗಂಡನಿಗೇಕೆ ತೊಂದರೆ ಎಂದು ಮುದುಡಿ ಮುದುಡಿ ಕೊನೆಗೆ ಆತ್ಮಹತ್ಯೆಗೆ ಶರಣಾಗುತ್ತಾಳೆ.

ಕಾದಂಬರಿಯಲ್ಲಿ ಹಳ್ಳಿಯ ಯಾವತ್ತೂ ಕ್ರಿಯಾಶೀಲತೆ, ಪರಸ್ಪರ ಸಹಕಾರದಿಂದ ನಡೆಯುವ ಜೀರ್ಣೋದ್ಧಾರ, ಧಾರ್ಮಿಕ ಆಚರಣೆ, ದೈವಾರಾಧನೆ, ಭೂತನರ್ತಕನ ಕೊರಳಿಗೆ ಬೆಳ್ಳಿಯ ಆಭರಣಗಳು, ತಲೆಪಟ್ಟಿ, ಬೆಳ್ಳಿಯ ಆಣಿ, ತೋಳು ಬಂದಿ, ಬಳೆ ಮುಂತಾದುವುಗಳ ಪ್ರಸ್ತಾಪ, ಜನರನ್ನು ಕಾಡುವ ರೋಗರುಜಿನ, ಅದಕ್ಕೆ ಮಂಜೇಶ್ವರದ ಕೇಳು ಪಂಡಿತರಿಂದ ಶುಶ್ರೂಷೆ, ದವಾಖಾನೆಯ ಮದ್ದು- ಹೀಗೆ ಅನೇಕ ಪ್ರಸ್ತಾಪಗಳಿದ್ದು ಅದೆಲ್ಲ ತುಳುನಾಡಿನ ವೈಭವಕ್ಕೆ ಸಾಕ್ಷಿ ಆಗುತ್ತವೆ.


ಕೇಶವ ಭಟ್ಟರು ಹಿಡಿದದ್ದು ಅಪ್ಪನದೇ ಹಾದಿ. ಮೊದಲ ಬಾರಿ ಊರವರು ಸಜ್ಜುಗೊಳಿಸಿದ ಕಂಬಳಕ್ಕೆ ಅತಿಥಿಯಾಗುತ್ತಾರೆ. ಮರುಮದುವೆಗೆ ಮನಸ್ಸು ಮಾಡದ ಅವರಕಣ್ಣಿಗೆ ಬಿದ್ದ ಭುಜಬಲಿ ಬಂಗರೆಂಬವರು ಇಡಿಸಿಕೊಂಡಿದ್ದ ಕಾವೇರಿ ಎಂಬ ಹೆಣ್ಣಿನಿಂದ ಆಕರ್ಷಿತರಾಗಿ ತನ್ನ ಇಂಗಿತವನ್ನು ಅವಳಿಗೆ ತಿಳಿಸಿ ತನ್ನ ಬಳಿಗೆ ಕರೆಸಿಕೊಳ್ಳುತ್ತಾರೆ.

ಆ ಕಾಲಕ್ಕೆ ಇಂತಹ ಸಂಬಂಧ ಸಹಜವಾಗಿತ್ತು. ಮುಂದೆ ಸ್ವಾತಂತ್ರ್ಯ ಹೋರಾಟಗಾರನಾದ ಅವಳ ಸಹೋದರನ ಒತ್ತಾಯಕ್ಕೆ ಕಟ್ಟುಬಿದ್ದು ಕಾವೇರಿ ಕೊಟ್ಟ ಸಲಹೆಗಳನ್ನೂ ಸ್ವೀಕರಿಸಿ ಪಟೇಲಿಕೆ ತ್ಯಜಿಸಿ ಸ್ವಾತಂತ್ರ್ಯಾಂದೋಲನಕ್ಕಾಗಿ ಎಲ್ಲವನ್ನೂ ದಾನ




ಮಾಡುತ್ತಾರೆ. ಕಾವೇರಿಯಲ್ಲಾದ ಮಕ್ಕಳಿಗೆ ಮನೆತನ ಮತ್ತು ಸೊತ್ತು ಸರ್ವಸ್ವವನ್ನು ಒಪ್ಪಿಸುವ ಸ್ಥಿತಿಗೆ

ಒಪ್ಪಿಸುವಂತಾಗುವುದು ಕಾದಂಬರಿಯ ಗತಿಗೆ ನಿಲುದಾಣ. ನಾ ಮೊಗಸಾಲೆ ಈ ಕಾದಂಬರಿಯ ಬಗ್ಗೆ ಹೇಳಿಕೊಂಡ " ಒಂದು ವಸ್ತು ತನ್ನನ್ನು ಆವರಿಸಿ ಕಾಡಿದಾಗ ಅನಿವಾರ್ಯವಾಗಿ ಬರೆದಿದ್ದೇನೆ. ಮತ್ತು ಈ ಕಾದಂಬರಿಯೂ ಅದಕ್ಕೆ ಅಪವಾದವಾಗಿ ಇಲ್ಲ" ಎಂಬ ಮಾತು ಚಿಂತನೀಯ. ಮುಚ್ಚಿ ಹಾಕಿದ ಕಾಸರಗೋಡು ಪ್ರದೇಶದ ಚರಿತ್ರೆಯೂ ಇಲ್ಲಿ ಅಡಗಿದೆ ಎನ್ನಬಹುದು. ಈ ಕಾದಂಬರಿಯ ಓದೇ ಒಂದು ವಿಶಿಷ್ಟ ರಂಜನೆಯನ್ನೂ ಕೊಡುತ್ತದೆ. ಸ್ವಾತಂತ್ರ್ಯಪೂರ್ವ ಭಾರತ ಅಥವಾ ನಮ್ಮ ಪರಿಸರ ಜೊತೆಗೆ ಕಣ್ಣಿಗೆ ಕಟ್ಟಿದಂತಾಗುತ್ತದೆ. ಅವಿಭಕ್ತ ಕುಟುಂಬಗಳು ಅಂತ್ಯಕಾಣುವುದಕ್ಕೆ ಏನೇನು ಕಾರಣಗಳಿದ್ದುವು ಎಂಬ ವಿವರ ಕಾಸರಗೋಡು ಪರಿಸರದ ಇಂತಹ ಕತೆ ಕಾದಂಬರಿಗಳಿಂದ ತಿಳಿಯುವಂತಾಗುತ್ತದೆ ಎಂಬುದು ಸತ್ಯ.




ಪ್ರೊ. ಪಿ ಎನ್ ಮೂಡಿತ್ತಾಯ

# ಕಾರಂತರ ಕಾದಂಬರಿಗಳಲ್ಲಿ ಪ್ರಕೃತಿ



ದಕ್ಷಿಣ ಕನ್ನಡ ಜಿಲ್ಲೆಯ ಕೋಟ ಕಾರಂತರ ಹುಟ್ಟೂರು. ಅವರು ಬಾಲ್ಯ ಕಳೆದ ಊರು. ಅಲ್ಲಿಯ ಪರಿಸರ ಅವರಿಗೆ ಅತ್ಯಂತ ಪ್ರಿಯವಾದದ್ದು. ಕಾರಂತರ ನಿಸರ್ಗ ಪ್ರೇಮ ಹುಟ್ಟೂರಿನಿಂದಲೇ ಪ್ರಾರಂಭವಾಗಿದೆ ಎನ್ನುವುದು ಅವರು ತಮ್ಮ ಊರಿನ ಪರಿಸರವನ್ನು ವರ್ಣಿಸಿರುವ ಪರಿಯಿಂದ ಅರಿವಾಗುತ್ತದೆ. "ನಾನು ಜನಿಸಿದ ಊರು ನಿಸರ್ಗ ಸುಂದರವಾದ ಒಂದು ಸಮತಟ್ಟಾದ ನೆಲ. ಅಲ್ಲಿ ತಾವಾಗಿ ಬೆಳೆದ ಗಿಡಮರಗಳಿವೆ. ಜನರು ನೆಟ್ಟ ಸಸ್ಯಗಳೂ ಪೈರುಗಳೂ ಇವೆ. ಅನುಕೂಲವಾದ ಹವೆ ಇದೆ. ಪ್ರತಿ ವರ್ಷವೂ ವಂಚನೆ ಮಾಡದಷ್ಟು ಮಳೆ ಇದೆ. ಊರಲ್ಲಿ ಕೊಳಗಳಿವೆ. ನದಿಯ ಖಾರಿಗಳು ಇವೆ. ಮಳೆಗಾಲದಲ್ಲಿ ತುಂಬಿ ಹರಿಯುವ ತೋಡುಗಳಿವೆ. ಭೂಮಿಯನ್ನಾವರಿಸುವ ಬಾನಿದೆ. ಒಂದೆರಡು ಮೈಲುಗಳ ದೂರದಲ್ಲಿ ಸಹಸ್ರಾರು ಚದರ ಮೈಲು ವಿಸ್ತಾರಕ್ಕೆ ಪಸರಿಸಿದ ಕಡಲಿದೆ. ಬಾನಿನ ನೀಲಕ್ಕೂ ದೂರದ ಪರ್ವತಗಳ ನೀಲಕ್ಕೂ ವ್ಯತ್ಯಾಸವನ್ನು ಗುರಿತಿಸಬಲ್ಲ ಬಡಗಿಂದ ತೆಂಕಣಕುಡಿಯ ತನಕ ದಿಗಂತದ ಅಂಚಿನಲ್ಲಿ ಸಹ್ಯಾದ್ರಿಯ ಗೋಡೆ ಇದೆ. ಮತ್ತೇನು ಬೇಕು? ಸಸ್ಯ ಸಮೃದ್ಧಿಯ ಸೊಗಸಿದೆ. ಊರಿನ ಕೊಳಗಳಲ್ಲೂ ಅಂತಹ ವೈವಿಧ್ಯವಿದೆ. ಕಾಲಕಾಲಕ್ಕೆ ತಪ್ಪದೇ ವಿವಿಧ ತೆರನ ಬಣ್ಣ ಬೆಳಗುಗಳಿಂದ ಅಸಂಖ್ಯ ಜಾತಿಯ ಕೀಟಗಳನ್ನು ಆಕರ್ಷಿಸುವ ಹೂವುಗಳಿವೆ". ಚಿಂಡಿನಿಂದಲೇ ಪ್ರಕೃತಿಯ ಸೂಕ್ಷ್ಮ ಸೌಂದರ್ಯವನ್ನು ಸವಿಯುತ್ತಾ ಸಾಗಿದ ಕಾರಂತರನ್ನು ನಿಸರ್ಗ ಮತ್ತು ಮಾನವನ ಅವಿನಾಭಾವ ಸಂಬಂಧ ಬೆರಗುಗೊಳಿಸಿದೆ. ಅವರ ನಿಸರ್ಗ ಪ್ರೇಮ ಅವರ ಕೆಲವು ಕಾದಂಬರಿಗಳಲ್ಲೂ ಒಡಮೂಡಿದೆ.





ಕಾರಂತರು 1966ರಲ್ಲಿ ಬರೆದ ಸ್ವಪ್ನದ ಹೊಳೆ ಅಂತಹ ಒಂದು ಕಾದಂಬರಿ. ಸೊಪ್ಪಿನ ಹಳ್ಳಿಯ ಪರಮೇಶ್ವರಯ್ಯನವರ ಮಗ ಕಿಟ್ಟಣ್ಣ ಬಾಲ್ಯದಿಂದಲೂ ನಿಸರ್ಗದ ಚೆಲುವಿಗೆ ಮನಸೋತು, ನಿಸರ್ಗದೊಂದಿಗೆ ಒಂದಾಗಿ ಬೆರೆತು ಕಣ್ಮನಗಳ ಸೌಂದರ್ಯ ಗ್ರಹಣ ಶಕ್ತಿಯನ್ನು ಬೆಳೆಸಿಕೊಂಡವನು. ಅವರ ಮನೆಯ ವಕ್ಕಲು ತಿಮ್ಮನ ಮಗ ಮಾದ ಕಿಟ್ಟಿಯ ದೋಸ್ತಿ. ಅವರಿಬ್ಬರೂ ಸೇರಿ ಆ ಹಳ್ಳಿಯ ಹಕ್ಕಿ, ಹೂವು, ಹಣ್ಣು, ಹಳ್ಳದ ನೀರು, ಹಾವು, ಹುಳು ಹುಪ್ಪಟೆಗಳ ಕುರಿತು ಆ ಶಕ್ತಿಯನ್ನು ತಳೆಯುತ್ತಾರೆ. ಇಟ್ಟಿಯ ಬದುಕಿನಲ್ಲಿ ಪ್ರಕೃತಿಯ ಮೋಹ ಅವನಿಗೆ ತಿಳಿಯದಂತೆ ಬಳಿಯ ತೊಡಗುತ್ತದೆ. ಸೊಪ್ಪಿನ ಹಳ್ಳಿಯಲ್ಲಿ ಹರಿಯುತ್ತಿದ್ದ ಹಳ್ಳ ಕಿಟ್ಟಣ್ಣನ ಬಾಯಿಯಲ್ಲಿ ಸ್ವಪ್ನದ ಹೊಳೆ ಎನಿಸಿಕೊಳ್ಳುತ್ತದೆ.

ಕಾರಂತರು ತಮ್ಮ ತಾರುಣ್ಯದ ದಿನಗಳಲ್ಲಿ ಕೆಲವು ಉಪಾಧ್ಯಾಯರೊಡಗೂಡಿ ಮಕ್ಕಳಿಗೂ ಮತ್ತು ತರುಣರಿಗು ಶಾಂತಿ ಶಿಬಿರವನ್ನು ನಡೆಸುತ್ತಿದ್ದರು. ಶಾಂತಿ ಶಿಬಿರದ ಸಮಯದಲ್ಲಿ ಎಂಟು ಹತ್ತು ದಿನಗಳ ಮಟ್ಟಿಗೆ ಸುತ್ತಮುತ್ತಲಿನ ಕಾಡಿನ ಅಲೆದಾಟ ಮತ್ತು ಕುದುರೆಮುಖ, ಕುಟ್ಟಚಾದ್ರಿ, ಕುಮಾರಧಾರ ದಂತಹ ಪರ್ವತಗಳ ಆರೋಹಣ ಕಾರ್ಯಕ್ರಮಗಳು ಇರುತ್ತಿದ್ದವು. ಇಂತಹ ಚಾರಣಗಳು ಬಹಳ ಕಷ್ಟಕರವಾಗಿರುತ್ತಿದ್ದವು. ಕನ್ನಡ ಜಿಲ್ಲೆಯ ಎಲ್ಲಾ ಗಿರಿ ಶಿಖರಗಳನ್ನು ಅವರು ಹಲವಾರು ಬಾರಿ ಹತ್ತಿ ಇಳಿದಿದ್ದಾರೆ. ಇಂತಹ ಚಾರಣಗಳ ಸಮಯದಲ್ಲಿ ಬೆಟ್ಟದ ಗೋಡೆಗಳಲ್ಲಿ ವಾಸಿಸುವ ಮಲೆಕುಡಿಯರ ಜೀವನವನ್ನು ಕಯಡು ಅಭ್ಯಸಿಸಿದ್ದಾರೆ. ಅದೇ ಅನುಭವವನ್ನು ಅವರು1951ರಲ್ಲಿ ಬರೆದ ಕುಡಿಯರ ಕೂಸು ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಈ ರೀತಿಯ ಕಾಡುಮೇಡುಗಳ ಸುತ್ತಾಟದಿಂದ ನೆಲ, ನೀರು, ಮರ, ಗಿಡ, ಬೆಟ್ಟ, ಬಯಲು, ಕಾಡು, ಮನುಷ್ಯರೊಡನೆ ಮಾತನಾಡಬಲ್ಲವು ಎಂದು ಆಗ ಅನಿಸತೊಡಗಿತು ಎನ್ನುತ್ತಾರೆ ಕಾರಂತರು.

ಕಾರಂತರು ಸಾಮಾನ್ಯವಾಗಿ ಒಂಟಿಯಾಗಿಯೇ ತಮ್ಮ ಸಂಚಾರ ಕೈಗೊಳ್ಳುತ್ತಿದ್ದರು. ದಾರಿಯಲ್ಲಿ ಕಾಣಸಿಗುವ ಮರ ಗಿಡ, ಗುಡ್ಡ, ಬೆಟ್ಟ, ತೋಡು, ಹಳ್ಳ, ನದಿ, ಮುಗಿಲು, ಹಕ್ಕಿಗಳ ಕಲರವ ಪ್ರತಿಯೊಂದು ವೀಕ್ಷಿಸಿ ಹಿಗ್ಗುತ್ತಿದ್ದರು. ಅವರ ಕಾದಂಬರಿಗಳಾದ ಬೆಟ್ಟದ ಜೀವ, ಮತ್ತು ಶನೀಶ್ವರನ ನೆರಳಿನಲ್ಲಿ ಅವರೇ ಒಂದು ಪಾತ್ರವಾಗಿ ಸುಬ್ರಹ್ಮಣ್ಯ ದ ಹತ್ತಿರ ಕಾಡಿನ ನಡುವೆ ಕೆಳಬೈಲಿನಲ್ಲಿ ಕೃಷಿ ಮಾಡಿಕೊಂಡು ಸಾಹಸಿ ಜೀವನ ನಡೆಸುತ್ತಿದ್ದ ಗೋಪಾಲಯ್ಯನವರನ್ನು ಸಂಧಿಸುತ್ತಾರೆ. ದಾರಿತಪ್ಪಿ ಅವರ ಮನೆ ಸೇರಿದ ಲೇಖಕರು ಅಲ್ಲಿಯ ಪ್ರಕೃತಿಯ ರುದ್ರ ರಮಣೀಯತೆಯನ್ನು ಸವಿಯುತ್ತಾರೆ. ಅದೇ ರೀತಿ ನೂರಕ್ಕಲು ಗ್ರಾಮದ ಶನೀಶ್ವರ ದೇವಾಲಯವನ್ನು ವೀಕ್ಷಿಸಲು ಹೋಗಿ, ಪರಮೇಶ್ವರಯ್ಯನವರ ಮನೆಯಲ್ಲಿ ಉಳಿದು, ಗಾಣಗುದ್ದಿಗೆ ಜ್ವರದಿಂದಾಗಿ ಪಾಳು ಬಿದ್ದಿದ್ದ ಊರನ್ನು, ಅಲ್ಲಿಯ ಜಲಪಾತವನ್ನು ಕಾಡುಮೇಡುಗಳನ್ನು ಕಂಡು ಆನಂದಿಸುತ್ತಾರೆ.

ಪಟ್ಟಣದಲ್ಲೆಯೇ ಹುಟ್ಟಿ ಬೆಳೆದ ಶಂಕರ ತನ್ನ ಯೌವ್ವನ ಅವಸ್ಥೆಯಲ್ಲಿ ತನ್ನ ಹುಟ್ಟೂರನ್ನು ಕಂಡು ಅಲ್ಲಿಯ ಪ್ರಕೃತಿಗೆ ಮರುಳಾಗಿ, ಹಳ್ಳಿಯಲ್ಲಿಯೇ ನೆಲಸಿ ಕೃಷಿಕನಾಗುತ್ತಾನೆ. ಅವರ ಬಹಳಷ್ಟು ಕೌಟುಂಬಿಕ ಕಾದಂಬರಿಗಳಲ್ಲಿ ಕರಾವಳಿಯ ಪ್ರಕೃತಿ ಸೌಂದರ್ಯ ಬಹಳ ಸುಂದರವಾಗಿ ಮೂಡಿಬಂದಿದೆ.

ಕಾರಂತರು ಹೇಳುವಂತೆ ಅವರ ಪಾಲಿಗೆ ನದಿ ಎಂಬುದು ಜಡವಲ್ಲ, ಜಡವಲ್ಲ, ಬೆಟ್ಟವೂ ಬಂಡೆಗಳೂ ಜಡವಲ್ಲ. ಅವು ಚಲಿಸಲಿ, ಚಲಿಸದಿರಲಿ, ಅವುಗಳೊಳಕ್ಕೆ ನನ್ನ ಮೇಲೆ ಪರಿಣಾಮ ಬೀರಬಲ್ಲ ಯಾವುದೋ ಅದ್ಭುತ ಶಕ್ತಿ ಇದೆ. ಅವು ಜೀವಂತ ವಸ್ತುಗಳು ಎಂಬ ಭಾವನೆ ನನ್ನ ಮನಸ್ಸಿನಲ್ಲಿ ಪುಟ್ಟ ತೊಡಗಿತು. ಅಲ್ಲಿಂದ ಇಲ್ಲಿಯ ತನಕ ನನ್ನ ಜಿಲ್ಲೆಯಲ್ಲಿ ದೇಶದಲ್ಲಿ ವಿದೇಶಗಳಲ್ಲಿ ಕಂಡ ವಿವಿಧ ನೈಸರ್ಗಿಕ ದೃಶ್ಯಗಳು ನನ್ನಲ್ಲಿ ನಿಸರ್ಗ ಜಡವಲ್ಲ ಚೈತನ್ಯಮಯ ಎಂಬ ಸಂವೇದನೆಯನ್ನು ಉಂಟು ಮಾಡಿವೆ. ಅಂತಹ ಒಂದೊಂದು ದೃಶ್ಯವು ಉಂಟುಮಾಡುವ ಸಂವೇದಗಳ ಸ್ವರೂಪ ವಿಭಿನ್ನ. ಆ ಪ್ರತಿಯೊಂದು ನಿಸರ್ಗ ದೃಶ್ಯಕ್ಕೂ ಸ್ವಂತ ವ್ಯಕ್ತಿತ್ವವಿದ್ದಂತೆ ಬೋದೆಯಾಗುತ್ತದೆ ಎನ್ನುವ ಮಾತುಗಳು ಕಾರಂತರ ವ್ಯಕ್ತಿತ್ವದ ಪ್ರತೀಕವಾಗಿದೆ. ಕಲ್ಲು ದೇವರಲ್ಲಿ ನಂಬಿಕೆ ಇರದ ಕಾರಂತರು ಚೈತನ್ಯಮಯವಾದ ನಿಸರ್ಗದ ವಿಭಿನ್ನ ರೂಪಗಳನ್ನು ಕಂಡು ಅವುಗಳಿಗೆ ಕೃತಜ್ಞರಾಗಿದ್ದಾರೆ.



ರಮಾ ಉಡುಪ, ಮುಂಬಯಿ

**ಕೇಳಿಸದೆ ಕಲ್ಲು ಕಲ್ಲಿನಲಿ**
**ಕನ್ನಡ ನುಡಿ......ಕನ್ನಡ ನುಡಿ......**
**ಕಾಣಿಸದೆ ಹೊನ್ನ ಚರಿತೆಯಲಿ**
**ಹಂಪೆಯ ಗುಡಿ......ಹಂಪೆಯ ಗುಡಿ.....**
**ವೈಭವದ ತವರು ಕೂಗಿದೆ**
**ಪ್ರೀತಿಸುವ ಹೃದಯ ಬೇಡಿದೆ,**
**ಕೇಳು ನೀನು**
**ಭೂರಮೆಯೆ ಆ..ಧರ ಈ ಕಲೆಯೆ ಸಿಂಗಾರ**
**ಬಂಗಾರ ತೆರೇರಿ ಮೂಡಣವೆ ಸಿಂಧೂರ**
**ದಿನ ದಿನ ದಿನ ಹೊಸದಗಿದೆ**
**ಇಂದಿಗು ಜೀವಂತ ಶಿಲೆಯೊಳಗೆ**
**ಸಂಗೀತ**
**ಸ್ವರ ಸ್ವರದ ಏರಿಳಿತ ತುಂಗೆಯಲಿ**
**ಶ್ರಿಮಂತ**
**ಕಣ ಕಣ ಕಣ ಕರೆ ನೀಡಿದೆ**
**ನೀನೊಮ್ಮೆ ಬಂದಿಲ್ಲಿ ಹಿತವಾಗಿ**

# ಮುಸ್ಲಿಂ ಸುಲ್ತಾನರ ಆಕ್ರಮಣದ ಕರಾಳ ಕಾಲದಲ್ಲಿ ಉದಯಿಸಿದ ಸೂರ್ಯ ಹರಿಹರ

**ಕನ್ನಡದ ರಾಜ-ಮಾಹಾರಾಜರು**

ವಿ ಜಯನಗರದ ಮೊದಲನೆಯ ಹರಿಹರ.

ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರಾದ ಪ್ರಥಮ ಹರಿಹರ (ಕ್ರಿ.ಶ. 1336–1356) ಅವರ ವೈಭವಪೂರ್ಣ ಸಾಹಸಗಳು ಮತ್ತು ಕರುನಾಡಿನ ಜನತೆಗೆ ಇತ್ತ ಮಹತ್ತರ ಕೊಡುಗೆಗಳ ಕುರಿತಾಗಿ ತಿಳಿದುಕೊಳ್ಳೋಣ.

ವಿಜಯನಗರದ ಪ್ರಥಮ ಹರಿಹರನ ಸಾಹಸಗಾಥೆಯನ್ನು ಹೇಳುವುದಾದರೆ, ಮೊದಲನೆಯ ಹರಿಹರ, ಇವರನ್ನು 'ಹಕ್ಕ' ಮತ್ತು 'ವೀರ ಹರಿಹರ ಖ' ಎಂದೂ ಕರೆಯಲಾಗುತ್ತದೆ. ಇವರು ದಕ್ಷಿಣ ಭಾರತದ ಮೇಲೆ ಮುಸ್ಲಿಂ ಸುಲ್ತಾನರ ಆಕ್ರಮಣದ ಕರಾಳ ಛಾಯೆ ದಟ್ಟವಾಗಿದ್ದ ಕಾಲದಲ್ಲಿ ಉದಯಿಸಿದ ಸೂರ್ಯ. ಬಲದ ಜೊತೆಗೆ ಬುದ್ಧಿಶಕ್ತಿಯನ್ನೂ ಮೇಳೈಸಿ, ಇವರು ಆರಂಭಿಸಿದ ಕಾರ್ಯ ಇತಿಹಾಸದಲ್ಲಿ ಒಂದು ಹೊಸ ಶಕೆಯನ್ನೇ ಸೃಷ್ಟಿಸಿತು.

ಹರಿಹರನ ದಿಗ್ವಿಜಯದ ಸಾಹಸಗಳು

- **ಭದ್ರಬುನಾದಿಯ ಸ್ಥಾಪನೆ** :

ಇಡೀ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯೇ ಅವರ ಬಹುದೊಡ್ಡ ಸಾಹಸ. ತಮ್ಮ ಸಹೋದರ ಬುಕ್ಕರಾಯ ಮತ್ತು ಗುರುಗಳಾದ ವಿದ್ಯಾರಣ್ಯ ಸ್ವಾಮಿಗಳ ಮಾರ್ಗದರ್ಶನದಲ್ಲಿ ತುಂಗಭದ್ರಾ ನದಿಯ ದಡದಲ್ಲಿ "ವಿಜಯದ ನಗರ" (ವಿಜಯನಗರ)ವನ್ನು 1336 ರಲ್ಲಿ ಸ್ಥಾಪಿಸಿದರು. ಇದು ಕೇವಲ ಹೊಸ ರಾಜ್ಯವಾಗಿರದೆ, ಸಮಸ್ತ ಹಿಂದೂ ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಗೆ ಹುಟ್ಟಿದ "ಧರ್ಮದ ಕೋಟೆ" ಯಾಗಿತ್ತು.

- **ಹೊಯ್ಸಳರ ಪರಂಪರೆಯ ಸ್ವೀಕಾರ**:

ಹೊಯ್ಸಳ ಸಾಮ್ರಾಜ್ಯದ ಕೊನೆಯ ದಿನಗಳಲ್ಲಿ ಪ್ರಬಲ ಮಾಂಡಲಿಕರಾಗಿದ್ದ ಹರಿಹರನು, ಮೂರನೆಯ ವೀರ ಬಲ್ಲಾಳನ ಮರಣಾನಂತರ (1343) ತಡಮಾಡದೆ ಹೊಯ್ಸಳರ ವಿಶಾಲ ರಾಜ್ಯದ ಉತ್ತರದ ಭಾಗಗಳ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದರು. ಇದು ದಕ್ಷಿಣ ಭಾರತದ ರಾಜಕೀಯ ಶೂನ್ಯವನ್ನು ತುಂಬುವಲ್ಲಿ ಮಹತ್ವದ ಪಾತ್ರ ವಹಿಸಿತು.

- **ಸಮುದ್ರಗಳ ಅಧಿಪತ್ಯದತ್ತ ವಿಸ್ತರಣೆ**:

ತಮ್ಮ ರಾಜಧಾನಿ ವಿದ್ಯಾನಗರದಿಂದ ಆಡಳಿತ ನಡೆಸುತ್ತಿದ್ದ ಹರಿಹರನು, ಕೇವಲ ಒಳನಾಡಿಗೆ ಸೀಮಿತವಾಗದೆ, ರಾಜ್ಯದ ಗಡಿಗಳನ್ನು ಸಮುದ್ರದವರೆಗೆ ವಿಸ್ತರಿಸಿದರು. ಅವರು ಪಶ್ಚಿಮ ಕರಾವಳಿಯ ಬಾರ್ಕೂರು ಮತ್ತು ಮಂಗಳೂರು ಪ್ರದೇಶಗಳನ್ನು ವಶಪಡಿಸಿಕೊಂಡು, ಸಾಮ್ರಾಜ್ಯದ ಗಡಿಯನ್ನು ಪೂರ್ವ ಮತ್ತು ಪಶ್ಚಿಮ ಸಮುದ್ರಗಳವರೆಗೆ ವಿಸ್ತರಿಸಿದರು. ಇದರ ಸಾಕ್ಷಿಯಾಗಿ ಶಾಸನಗಳು ಅವರನ್ನು "ಪೂರ್ವ ಪಶ್ಚಿಮ ಸಮುದ್ರಾದೀಶ್ವರ" ಎಂದು ಕೊಂಡಾಡಿವೆ.



- **ದಕ್ಷ ರಕ್ಷಣಾ ತಂತ್ರ**:

ದಕ್ಷಿಣದಲ್ಲಿ ಶಾಂತಿ ನೆಲೆಸುವವರೆಗೂ ಶ್ರಮಿಸಿ,ಸೈನಿಕ ವ್ಯವಸ್ಥೆಯನ್ನು ಅತ್ಯಂತ ಬಲಪಡಿಸಿದರು. ಅನಂತಪುರ ಜಿಲ್ಲೆಯ ಗೂಟಿ (ಉಂಂಣಥಿ) ಮತ್ತು ಕರಾವಳಿಯ ಕೋಟೆಗಳನ್ನು ಭದ್ರಪಡಿಸಿ, ಮೊಹಮ್ಮದ್ ಬಿನ್ ತುಘಲಕ್‌ನಂಥ ಉತ್ತರ ಭಾರತದ ಶಕ್ತಿಗಳ ಆಕ್ರಮಣವನ್ನು ಎದುರಿಸಲು ಸನ್ನದ್ಧರಾದರು. ಶಾಸನಗಳು ಅವರನ್ನು "ಭಾಷೆಗೆ ತಪ್ಪುವ ರಾಯರ ಗಂಡ" (ಮಾತು ತಪ್ಪುವ ಮಾಂಡಲಿಕರಿಗೆ ಶಿಕ್ಷೆ ನೀಡುವವನು) ಎಂದು ಬಣ್ಣಿಸುತ್ತವೆ.

ಜನರಿಗೆ ನೀಡಿದ ಮಹೋನ್ನತ ಕೊಡುಗೆಗಳು

ಹರಿಹರನ ಕೊಡುಗೆ ಕೇವಲ ಯುದ್ಧಭೂಮಿಗೆ ಸೀಮಿತವಾಗಿರದೆ, ಆಂತರಿಕ ಆಡಳಿತ ಮತ್ತು ಜನರ ಜೀವನದ ಮೇಲೆ ಗಾಢ ಪ್ರಭಾವ ಬೀರಿತು.

- **ಆಡಳಿತ ಸುಧಾರಣೆಗಳ ತಳಹದಿ**?..

ಅವರು ಸ್ಥಾಪಿಸಿದ ಕೇಂದ್ರೀಕೃತ ಆಡಳಿತ ವ್ಯವಸ್ಥೆ ಮುಂದಿನ ಶತಮಾನಗಳವರೆಗೆ ವಿಜಯನಗರದ ದಕ್ಷತೆಗೆ ಮೂಲವಾಯಿತು. ಇವರು ಸಾಮ್ರಾಜ್ಯವನ್ನು ರಾಜ್ಯ, ಸೀಮೆ, ನಾಡು ಮತ್ತು ಸ್ಥಳ ಎಂಬ ಆಡಳಿತ ವಿಭಾಗಗಳಾಗಿ ವಿಂಗಡಿಸಿದರು. ಈ ವ್ಯವಸ್ಥೆಯು ಕೃಷ್ಣದೇವರಾಯನ ಕಾಲದವರೆಗೂ ಮುಂದುವರೆಯಿತು.

ದಕ್ಷ ಆಡಳಿತಕ್ಕಾಗಿ ತಮ್ಮ ಸಹೋದರರನ್ನು (ಬುಕ್ಕ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪ) ಬೇರೆ ಬೇರೆ ಪ್ರಾಂತಗಳ ಆಡಳಿತಾಧಿಕಾರಿಗಳನ್ನಾಗಿ (ನಾಯಕರನ್ನಾಗಿ) ನೇಮಿಸಿದರು.

- **ಕೃಷಿ ಮತ್ತು ಆರ್ಥಿಕ ಉತ್ತೇಜನ**:

ರಾಜ್ಯದ ಆರ್ಥಿಕತೆಯನ್ನು ಬಲಪಡಿಸಲು ಕೃಷಿಗೆ ಹೆಚ್ಚಿನ ಮಹತ್ವ ನೀಡಿದರು. ಅರಣ್ಯ ಪ್ರದೇಶಗಳನ್ನು ಕಡಿದು ಕೃಷಿಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಲು ಪ್ರೋತ್ಸಾಹಿಸಿದರು. ಇದರಿಂದ ರಾಜ್ಯದ ಆದಾಯ ಹೆಚ್ಚಾಗಿ, ಜನಜೀವನ ಸುಧಾರಿಸಿತು.

- **ಧಾರ್ಮಿಕ ಸಮನ್ವಯದ ರಕ್ಷಣೆ**:

ವಿದ್ಯಾರಣ್ಯರಂತಹ ಶ್ರೇಷ್ಠ ವಿದ್ವಾಂಸರ ಆಶ್ರಯದಲ್ಲಿ, ಅವರು ಜ್ಞಾನ ಮತ್ತು ಧಾರ್ಮಿಕ ಚಟುವಟಿಕೆಗಳಿಗೆ ಬೆಂಬಲ ನೀಡಿದರು.

ಈ ಅವಧಿಯ ಶಾಸನಗಳು ಹರಿಹರನನ್ನು "ಕರ್ನಾಟಕ ವಿದ್ಯಾ ವಿಲಾಸ" ಎಂದು ಗೌರವಿಸಿದೆ. ಇದು ಅವರು ಶಿಕ್ಷಣ ಮತ್ತು ಜ್ಞಾನಕ್ಕೆ ನೀಡುತ್ತಿದ್ದ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಧರ್ಮದ ರಕ್ಷಣೆ ಎಂಬುದು ಕೇವಲ ದೇವಾಲಯಗಳ ನಿರ್ಮಾಣಕ್ಕೆ ಸೀಮಿತವಾಗಿರದೆ, ಸಮಸ್ತ ಹಿಂದೂ ಧಾರ್ಮಿಕ ಮೌಲ್ಯಗಳ ಪುನರುಜ್ಜೀವನಕ್ಕೆ ಕಾರಣವಾಯಿತು.

ಹೀಗೆ, ಪ್ರಥಮ ಹರಿಹರನು ಬರೀ ವಿಜಯನಗರದ ಸಂಸ್ಥಾಪಕನಾಗಿ ಉಳಿಯದೆ, ವಿಜಯನಗರ ಸಾಮ್ರಾಜ್ಯಕ್ಕೆ ದಕ್ಷ ಆಡಳಿತ, ಸೈನಿಕ ಶಕ್ತಿ ಮತ್ತು ಸಾಂಸ್ಕೃತಿಕ ಪರಂಪರೆಯ ದೃಢವಾದ ಅಡಿಪಾಯವನ್ನು ಹಾಕಿದ ಮಹಾನ್ ಚಕ್ರವರ್ತಿಯಾಗಿ, ಇಂದಿಗೂ ಪ್ರಾತಃಸ್ಮರಣೀಯರೆನಿಸಿಕೊಂಡಿದ್ದಾರೆ. ಅವರನ್ನು ಕನ್ನಡ ನಾಡು ಗೌರವದಿಂದ ಸ್ಮರಿಸಿಕೊಳ್ಳುತ್ತದೆ. ಇಂಥ ಕನ್ನಡಮ್ಮನ ವೀರಕುಮಾರರಿಗೆ ನಮ್ಮ ವಂದನೆಗಳು.



ರೂಪ ಮಂಜುನಾಥ ಹೊಳೆನರಸೀಪುರ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,